ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 10 | ಸಂಚಿಕೆ 11 | ಪುಟ 16
ಮಾರ್ಚ್ 13, 2016 ರೂ. 10/-
web: www.janashakthi.co.in
e-mail : js_weekly@yahoo.com

"ನಾವು ಕೇಳ್ತಿರೋದು ಭಾರತದಿಂದ ಸ್ವಾತಂತ್ರ್ಯ ಅಲ್ಲ ಭಾರತದೊಳಗೆ ಸ್ವಾತಂತ್ರ್ಯ ಬೇಕು ಅಂತ"



ರೈತ-ಪರ ಬಡವರ -ಪರ ಗ್ರಾಮ -ಪರ ಬಜೆಟ್?




ಹ್ಹಾ... ಹ್ಹಾ..ಹ್ಹಾ...



ಗ್ರಾಮ ಪಂಚಾಯತ್ ನೌಕರರ ಪ್ರತಿಭಟನೆ

ಜಾಟ್ ಮೀಸಲಾತಿ ಚಳುವಳಿ

ರಾಷ್ಟ್ರವಾದ ಎಂದರೇನು?



ಪ್ರಭಾತ್ ಪಟ್ನಾಯಕ್

ಐ.ಸಿ.ಡಿ.ಎಸ್. ಕಡಿತ ವಿರುದ್ಧ ವ್ಯಾಪಕ ಪ್ರತಿಭಟನೆ



ಸೀತಾರಾಮ್ ಯೆಚೂರಿ ಮೇಲೆ ರಾಜದ್ರೋಹದ ಮೊಕದ್ದಮೆ:: ಹಿಂತೆಗೆದುಕೊಳ್ಳಲು ಸಿಪಿಐ(ಎಂ) ಆಗ್ರಹ

ಹೈದರಾಬಾದಿನ ಒಂದು ಪೋಲೀಸ್ ಠಾಣೆಯಲ್ಲಿ ಫೆಬ್ರುವರಿ 28ರಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ, ಸಿಪಿಐನ ಹಿರಿಯ ಮುಖಂಡ ಡಿ.ರಾಜ, ದಿಲ್ಲಿ ಮುಖ್ಯಮಂತ್ರಿ ಕೇಜ್ರಿವಾಲ್, ಕಾಂಗ್ರೆಸ್ ಉಪಾಧ್ಯಕ್ಷ ರಾಹುಲ್ ಗಾಂಧಿ ಮತ್ತು ಇತರ ಐದು ಮಂದಿಯ ಮೇಲೆ ಒಂದು ಸ್ಥಳೀಯ ನ್ಯಾಯಾಲಯದ ನಿರ್ದೇಶನದ ಮೇಲೆ ಭಾರತೀಯ ದಂಡ ಸಂಹಿತೆಯ ಸೆಕ್ಷನ್ 124 ಮತ್ತು 124ಎ ಅಡಿಯಲ್ಲಿ ರಾಜದ್ರೋಹದ ಎಫ್‌ಐಆರ್ ಸಲ್ಲಿಸಿದೆ. ಒಬ್ಬ ಸ್ಥಳೀಯ ಅಡ್ವೋಕೇಟ್‌ನ್ ಅರ್ಜಿಯ ಮೇಲೆ ಆ ನ್ಯಾಯಾಲಯ ಈ ನಿರ್ದೇಶನ ನೀಡಿದೆ ಎಂದು ವರದಿಯಾಗಿದೆ. ಇವರ ಮೇಲಿನ ಆಪಾದನೆಯೆಂದರೆ ರಾಜದ್ರೋಹದ ಆಪಾದನೆಗೆ ಒಳಗಾದ ಜೆಎನ್‌ಯು ವಿದ್ಯಾರ್ಥಿಗಳನ್ನು ಇವರು ಬೆಂಬಲಿಸಿದ್ದಾರೆ!

ಈ ರಾಜದ್ರೋಹದ ಕಲಮನ್ನು ದುರುಪಯೋಗ ಪಡಿಸಿಕೊಳ್ಳುತ್ತಿರುವ ರೀತಿಯನ್ನು ನೋಡಿದರೆ ಇದನ್ನು ರದ್ದು ಮಾಡುವ ಅನಿವಾರ್ಯತೆ ಉಂಟಾಗಿದೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ, ಸೀತಾರಾಮ್ ಯೆಚೂರಿ ಮತ್ತು ಇತರ ಮುಖಂಡರ ಮೇಲೆ ಹಾಕಿರುವ ಈ ಕೇಸನ್ನು ಹಿಮತೆಗೆದುಕೊಳ್ಳಬೇಕು, ಕೇಂದ್ರ ಸರಕಾರ ಭಿನ್ನಮತ ಮತ್ತು ವಿರೋಧವನ್ನು 'ರಾಷ್ಟ್ರ-ವಿರೋಧ' ಎಂದು ಹೇಳಿ ಪ್ರಜಾಪ್ರಭುತ್ವ ಹಕ್ಕುಗಳನ್ನು ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ದಮನ ಮಾಡುವ ಕ್ರಮಗಳನ್ನು ನಿಲ್ಲಿಸಬೇಕು ಎಂದು ಆಗ್ರಹಿಸಿದೆ.

ಸೀತಾರಾಮ್ ಯೆಚೂರಿಯವರು ಈ ಸುದ್ದಿಗೆ ಪ್ರತಿಕ್ರಿಯಿಸುತ್ತ ನಾನೀಗ ಭಗತ್‌ಸಿಂಗ್, ಮಹಾತ್ಮ ಗಾಂಧಿ, ಲೋಕಮಾನ್ಯ ತಿಳಕ್ ಮುಂತಾದ ಉನ್ನತ ರಾಷ್ಟ್ರೀಯ ಮುಖಂಡರ ಸಾಲಿಗೆ ಸೇರಿದ್ದೇನೆ ಎಂದು ಚಟಾಕಿ ಹಾರಿಸುತ್ತ "ನನಗೆ ದಿಲ್ಲಿ, ಆಂಧ್ರ, ದೇಶದ ಎಲ್ಲೆಡೆಗಳಿಂದ ಎಸ್‌ಎಂಎಸ್‌ಗಳು, ಬೆದರಿಕೆ ಕರೆಗಳು ಬರುತ್ತಿವೆ, ದಿಲ್ಲಿ ಪೋಲೀಸ್ ಈ ಬಗ್ಗೆ ಎರಡು ಎಫ್‌ಐಆರ್‌ಗಳನ್ನು ಹಾಕಿದ್ದಾರೆ.. ಆದರೆ ಏನೂ ಆಗಿಲ್ಲ" ಎಂದರು.

ಪಶ್ಚಿಮ ಬಂಗಾಲದಲ್ಲಿ ಚುನಾವಣಾ ಅಕ್ರಮಗಳ ಆತಂಕ: ಚುನಾವಣಾ ಆಯೋಗಕ್ಕೆ ಸಿಪಿಐ(ಎಂ) ಮನವಿ ಪತ್ರ

ಮಾರ್ಚ್ 2ರಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ ಮತ್ತು ಕೇಂದ್ರ ಕಾರ್ಯದರ್ಶಿ ಮಂಡಳಿ ಸದಸ್ಯ ನೀಲೋತ್ಪಲ ಬಸು ರವರು ಭಾರತದ ಮುಖ್ಯಚುನಾವಣಾ ಆಯುಕ್ತರನ್ನು ಭೇಟಿ ಮಾಡಿ ಪಶ್ಚಿಮ ಬಂಗಾಲದಲ್ಲಿ ಮುಂಬರುವ ವಿಧಾನಸಭಾ ಚುನಾವಣೆಗಳಿಗೆ ಸಂಬಂಧಪಟ್ಟಂತೆ ಎದ್ದಿರುವ ಗಂಭೀರ ಆತಂಕಗಳತ್ತ ಅವರ ಗಮನ ಸೆಳೆದರು. ಈ ಆತಂಕಗಳನ್ನು ವಿವರಿಸುವಂತಹ ಒಂದು ಮನವಿ ಪತ್ರವನ್ನು ಅವರು ಮುಖ್ಯ ಚುನಾವಣಾ ಆಯುಕ್ತರಿಗೆ ಸಲ್ಲಿಸಿ ಇದನ್ನು ಜಾಗರೂಕತೆಯಿಂದ ಪರಿಶೀಲಿಸಬೇಕಾಗಿ ಕೋರಿದ್ದಾರೆ.

ನಮ್ಮ ಚುರು-ಟ್ವೀಟ್ @sagarikaghose

ಭಾರತ ಎಂದೂ ಇಂತಹ ಮೋದಿ ಸರಕಾರದಂತಹ ಕಾಲು ಕೆರೆದುಕೊಂಡು ಜಗಳ ತೆಗೆಯುವ ಜಗಳಗಂಟ ಸರಕಾರ ಕಂಡಿಲ್ಲ

– ಸಾಗರಿಕ ಘೋಷ್, ಪತ್ರಕರ್ತೆ
(ಲೋಕಸಭೆಯಲ್ಲಿ ಮೋದಿ ಭಾಷಣ ಮತ್ತು ವಿದ್ಯಾರ್ಥಿಗಳಿಂದ ದಲಿತರವರೆಗೆ ಎಲ್ಲರ ಬಗ್ಗೆ ಆಕ್ರಾಮಕ ಧೋರಣೆ ಟೀಕಿಸುತ್ತಾ)

ಜೆಎನ್‌ಯುನಲ್ಲಿ ಮತ್ತೆ ಮೊಳಗಿದವು 'ಆಝಾದಿ' ಘೋಷಣೆಗಳು

20 ದಿನಗಳ ನಂತರ ಕೊನೆಗೂ ಕನ್ಹೈಯಾಗೆ ಜಾಮೀನು



ಮಾರ್ಚ್ 3ರ ರಾತ್ರಿ ದಿಲ್ಲಿಯ ಜೆಎನ್‌ಯು ಆಡಳಿತ ಕಚೇರಿಯ ಎದುರು ಮತ್ತೊಂದು ಚಾರಿತ್ರಿಕ ಸಭೆ ನಡೆಯಿತು. ಇಪ್ಪತ್ತು ದಿನಗಳ ನಂತರ ಬಂಡವಾಳಶಾಹಿಯಿಂದ, ಪಾಳೆಯಗಾರಿಕೆಯಿಂದ, ಜಾತಿವಾದದಿಂದ, ಮನುವಾದದಿಂದ ಮತ್ತು ಸಂಘೀ ದಾಳಿಗಳಿಂದ ಸ್ವಾತಂತ್ರ್ಯದ ಘೋಷಣೆಗಳು ಮತ್ತೆ ಮೊಳಗಿದವು.

ಫೆಬ್ರುವರಿ 11ರಂದು ಅದೇ ಜಾಗದಲ್ಲಿ ಇವೇ 'ಆಝಾದಿ' ಘೋಷಣೆಗಳನ್ನು ಮೊಳಗಿಸಿದ್ದ, ಉನ್ನತ ಶೈಕ್ಷಣಿಕ ಸಂಸ್ಥೆಗಳ ಕೇಸರೀಕರಣದ ಪ್ರಯತ್ನಗಳಿಗೆ ಸವಾಲು ಹಾಕಿದ್ದ ಜೆಎನ್‌ಯು ವಿದ್ಯಾರ್ಥಿ ಸಂಘದ ಅಧ್ಯಕ್ಷ ಕನ್ಹೈಯಾ ಕುಮಾರ್‌ನನ್ನು ಮರುದಿನವೇ ಅದು ಕಾಶ್ಮೀರಿ ಪ್ರತ್ಯೇಕತಾವಾದಿಗಳನ್ನು ಬೆಂಬಲಿಸಿದ 'ರಾಜದ್ರೋಹ' ಎಂದು ಬಂಧಿಸಲಾಗಿತ್ತು. ಫೆಬ್ರುವರಿ 29ರಂದು ನಿವೃತ್ತನಾದ ಪೋಲೀಸ್ ಕಮಿಶನರ್ ನೇತೃತ್ವದಲ್ಲಿ ದಿಲ್ಲಿ ಪೋಲೀಸ್ ಮತ್ತು 'ಅಚ್ಛೇ ದಿನ್' ಮುಖಂಡರುಗಳು ಒಡ್ಡಿದ ಶತವಿಘ್ನಗಳನ್ನೂ, ಹಿಂಸಾಚಾರವನ್ನೂ ಮೀರಿ ಕೊನೆಗೂ ಆತನಿಗೆ ಮಾರ್ಚ್2 ರ ಸಂಜೆ ಆರು ತಿಂಗಳ ಜಾಮೀನು ಸಿಕ್ಕಿದೆ. ಮರುದಿನ ರಾತ್ರಿ ಜೆಎನ್‌ಯುನಲ್ಲಿ ವಿಜಯೋತ್ಸವದ ವಾತಾವರಣದಲ್ಲಿ 'ಶರತ್ತುಬದ್ಧ' ಜಾಮೀನು ಪಡೆದು ತಿಹಾರ್ ಜೈಲಿನಿಂದ ಹೊರಬಂದ ಕನ್ಹೈಯಾ ದ್ವಿಗುಣ ಉತ್ಸಾಹದಿಂದ ಕೊಟ್ಟ ಅವೇ ಘೋಷಣೆಗಳಿಗೆ ನೆರೆದಿದ್ದ ವಿದ್ಯಾರ್ಥಿಗಳು ಅದಕ್ಕಿಂತಲೂ ಹೆಚ್ಚಿನ ಉತ್ಸಾಹದಿಂದ ಸ್ಪಂದಿಸಿದರು.

ಈ ವೇಳೆಗಾಗಲೇ 'ರಾಜದ್ರೋಹ'ದ ಆಪಾದನೆಗೆ ಆಧಾರವಾಗಿದ್ದ, ಕೆಲವು ದೊಡ್ಡ ಮಾಧ್ಯಮಗಳು ಮತ್ತೆ-ಮತ್ತೆ ಪ್ರಸಾರ ಮಾಡಿದ್ದ ವೀಡಿಯೋ ಸೇರಿದಂತೆ ಏಳು ವೀಡಿಯೋಗಳಲ್ಲಿ ಕನಿಷ್ಟ ಎರಡು ಡೋಂಗಿ ವೀಡಿಯೋಗಳು, ಪ್ರತ್ಯೇಕತಾವಾದಿ ಘೋಷಣೆಗಳನ್ನು ಅವುಗಳಲ್ಲಿ ತುರುಕಲಾಗಿದೆ ಎಂಬ ಪ್ರಯೋಗಾಲಯ ವರದಿಗಳು ಬಂದಿದ್ದವು. ದಿಲ್ಲಿ ರಾಜ್ಯ ಸರಕಾರ ನಡೆಸಿದ ತನಿಖೆ ಕೂಡ 'ರಾಜದ್ರೋಹ'ದ ಆಪಾದನೆಯಲ್ಲಿ ಹುರುಳಿಲ್ಲ ಎಂಬ ತೀರ್ಮಾನಕ್ಕೆ ಬಂದಿದೆ. ಈ ನಡುವೆ ವೀಡಿಯೋಗಳನ್ನು ದುರುದ್ದೇಶಪೂರ್ವಕವಾಗಿ ವಿರೂಪಗೊಳಿಸುವಲ್ಲಿ ಹೆಚ್‌ಆರ್‌ಡಿ ಮಂತ್ರಿಗಳ ನಿಕಟ ಸಹಯೋಗಿಯೊಬ್ಬರ ಕೈವಾಡದ ಶಂಕೆಯೂ ಎದ್ದಿದೆ.

ಈ ಇಪ್ಪತ್ತು ದಿನಗಳ ಕಾಲ ಜೆಎನ್‌ಯು ವಿದ್ಯಾರ್ಥಿಗಳ ಹೋರಾಟಕ್ಕೆ ಬೆಂಬಲವಾಗಿ ನಿಂತವರೆಲ್ಲರಿಗೂ ಲಾಲ್ ಸಲಾಂ ಸಲ್ಲಿಸಿದ ಕನ್ಹೈಯ ಕುಮಾರ್, ಗೃಹಮಂತ್ರಿಗಳ 'ಫರ್ಜಿ'(ಮೋಸದ) ಟ್ವೀಟ್‌ನಿಂದ ಹಿಡಿದು ಪ್ರಧಾನಿಗಳ 'ಸತ್ಯಮೇವ ಜಯತೇ' ಟ್ವೀಟ್‌ನ ನಡುವೆ ಸಂಘ ಪರಿವಾರದ ವಿವಿಧ ರೀತಿಗಳ ದಮನಕಾರೀ ಪ್ರಯತ್ನಗಳನ್ನು ಗೇಲಿ ಮಾಡುತ್ತಲೇ ಈ ಹೋರಾಟದ ಹೂರಣವನ್ನು ತೆರೆದಿಟ್ಟರು. ಒಂದು ಯೋಜಿತ ಹುನ್ನಾರದ ವಿರುದ್ಧ ಈ ಸ್ವಯಂಸ್ಫೂರ್ತ ಹೋರಾಟ ಎದ್ದು ಬಂದಿದೆ ಎಂದ ಅವರ ಸರಳ ಮಾತುಗಳಲ್ಲಿ ಶಿಕ್ಷಣದ ಖಾಸಗೀಕರಣ, ಕೇಸರೀಕರಣದ ಪ್ರಯತ್ನಗಳು, ಸಮಾಜದಲ್ಲಿ ಧ್ರುವೀಕರಣದ ಹುನ್ನಾರಗಳು, ಗದ್ದೆಗಳಲಿ ಆತ್ಮ ಹತ್ಯೆ ಮಾಡುತ್ತಿರುವ ರೈತರ ಬಗ್ಗೆ ಮಾತಾಡದೆ ,ಗಡಿಯಲ್ಲಿ ಹೋರಾಡುತ್ತಿರುವ ಸೈನಿಕರನ್ನು ಪ್ರಜಾಪ್ರಭುತ್ವದ ಹೋರಾಟಗಾರರ ವಿರುದ್ಧ ಎತ್ತಿ ಕಟ್ಟುವ ಹಿಟ್ಲರ್‌ಶಾಹೀ ಅಪಪ್ರಚಾರಗಳು ಎಲ್ಲವೂ ಅವರ ಭಾಷಣದಲ್ಲಿ ಬಂದು ಹೋದವು. ಈ ಹೋರಾಟ ಬಯಸುವುದು ಭಾರತದಿಂದ ಸ್ವಾತಂತ್ರ್ಯವಲ್ಲ, ಭಾರತದೊಳಗೆ ಸ್ವಾತಂತ್ರ್ಯ ಎಂದು ಪುನರುಚ್ಚರಿಸುತ್ತ ಸಮಾಜವಾದ, ಸಮಾನತೆ ಮತ್ತು ಜಾತ್ಯಾತೀತತೆಯ ಭರವಸೆ ನೀಡಿರುವ ಬಾಬಾಸಾಹೇಬ್ ನೇತೃತ್ವದಲ್ಲಿ ರಚನೆಗೊಂಡ ಸಂವಿಧಾನದ ಆಧಾರದಲ್ಲೇ ಈ ಸ್ವಾತಂತ್ರ್ಯವನ್ನು ಪಡೆಯುತ್ತೇವೆ ಎಂದು ಸಮಾನತೆಯ ಹೋರಾಟಕ್ಕೆ ಪ್ರಜಾಪ್ರಭುತ್ವ ಅಗತ್ಯ ಎಂಬ ಲೆನಿನ್‌ವಾಣಿಯನ್ನು ನೆನಪಿಸಿಕೊಳ್ಳುತ್ತ ಕನ್ಹೈಯ ಪುನರುಚ್ಚರಿಸಿದರು. ಸತ್ಯಮೇವ ಜಯತೆ ಕೂಡ ಅದೇ 'ಸಂವಿಧಾನದಲ್ಲಿ ಇರುವ ಮಾತು. ಸತ್ಯ ಸಂಪೂರ್ಣವಾಗಿ ಹೊರ ಬರುವವರೆಗೆ ಈ ಹೋರಾಟ ಮುಂದುವರೆಯುತ್ತದೆ ಎಂದು ಘೋಷಿಸಿದರು.

ಇದಕ್ಕೆ ಮೊದಲು ಕನ್ಹೈಯಾ ಕುಮಾರ್‌ಗೆ ಮಧ್ಯಂತರ ಜಾಮೀನು ಸಿಕ್ಕಿದ್ದನ್ನು ಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹಾಗೂ ಜೆಎನ್‌ಯು ವಿದ್ಯಾರ್ಥಿ ಸಂಘದ ಒಬ್ಬ ಮಾಜೀ ಅಧ್ಯಕ್ಷರೂ ಆದ ಸೀತಾರಾಮ್ ಯೆಚೂರಿಯವರೂ ಇದೇ 'ಸತ್ಯಮೇವ ಜಯತೆ' ಎಂಬ ಮಾತಿನೊಂದಿಗೆ ಸ್ವಾಗತಿಸಿದ್ದರು. ಆದರೆ ಪ್ರಧಾನಿಗಳು ಅದನ್ನು ತಪ್ಪಾಗಿ ಹೇಳಿದ್ದಾರೆ ಎನ್ನುತ್ತ ಈ ಪ್ರಸಂಗದ ಸತ್ಯವೆಂದರೆ ಇದು ಸಂಪೂರ್ಣವಾಗಿ ಒಂದು ಕಟ್ಟುಕತೆ ಎಂದರು. ಸದ್ಯಕ್ಕೆ ಸ್ವಲ್ಪ ನ್ಯಾಯ ದೊರೆತಿದೆ, ಈ ಆಪಾದನೆಯ ಮೇಲೆ ಇನ್ನೂ ಜೈಲಿನಲ್ಲಿರುವವರೂ ಹೊರಬರಬೇಕಾಗಿದೆ ಎಂದರು.

ಸಂಘ ಪರಿವಾರದವರು ಪ್ರಚಾರ ಮಾಡುತ್ತಿರುವಂತೆ ನಿಜವಾಗಿಯೂ 'ರಾಜದ್ರೋಹ' ನಡೆದಿದ್ದರೆ ಕನ್ಹೈಯಾಗೆ ಜಾಮೀನು ಸಿಗುತ್ತಿರಲಿಲ್ಲ. ಇದೊಂದು ದೊಡ್ಡ ಕಟ್ಟುಕತೆಯೆಂಬ ನಮ್ಮ ಮಾತು ಸಾಬೀತಾಗುತ್ತಿದೆ. ಆದರೆ ಇದರ ಹಿಂದೆ ಯಾರಿದ್ದಾರೆ ಎಂಬ ಬಗ್ಗೆ ತನಿಖೆ ಯಾಗಬೇಕಾಗಿದೆ. ಈಗಾಗಲೇ ಜಂಟಿ ಸಂಸದೀಯ ತನಿಖೆ ನಡೆಸಬೇಕೆಂದು ಕೇಳಲಾಗಿದೆ. ಈ ಇಡೀ 'ರಾಜದ್ರೋಹ'ದ ಪ್ರಶ್ನೆ ಸೃಷ್ಟಿಸಿದವರು ಯಾರು, ವೀಡಿಯೋಗಳ ಮೂಲಕ ಮೋಸ ಮಾಡುವಲ್ಲಿ ಯಾರ ಕೈವಾಡ ಇದೆ, ಈ ವಿಷಯದಲ್ಲಿ ಹರಡಿರುವ ಭಾವೋದ್ರೇಕಕ್ಕೆ ಯಾರನ್ನು ಹೊಣೆಯಾಗಿಸಬೇಕು ಎಂಬಿತ್ಯಾದಿ ಪ್ರಶ್ನೆಗಳು ಎದ್ದಿವೆ.

ಈ ಎಲ್ಲದರ ಹಿಂದೆ ಸರಕಾರವೇ ಇದೆ ಎಂಬ ಸಂದೇಹವನ್ನು ಪುನರುಚ್ಚರಿಸಿದ ಸೀತಾರಾಮ್ ಯೆಚೂರಿಯವರು 'ಸತ್ಯಮೇವ ಜಯತೆ' ಎಂದ ಪ್ರಧಾನ ಮಂತ್ರಿಗಳೇ ಇದಕ್ಕೆ ಹೊಣೆಗಾರರನ್ನು, ಅವರ ಅಪರಾದವನ್ನು ಪತ್ತೆ ಹಚ್ಚಿ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕಾಗಿದ ಎಂದಿದ್ದಾರೆ.

ಉನ್ನತ ಶಿಕ್ಷಣ ಸಂಸ್ಥೆಗಳ ಮೇಲೆ ಆರೆಸ್ಸೆಸ್ ಹಲ್ಲೆಗಳ ವಿರುದ್ಧ ಮಾರ್ಚ್ 18ರಂದು ದಿಲ್ಲಿ ಚಲೋ: ವಿದ್ಯಾರ್ಥಿ ಸಂಘಟನೆಗಳ ಕರೆ

ಕಳೆದ ಕೆಲವು ದಿನಗಳಿಂದ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ಮೇಲೆ ಆರೆಸ್ಸೆಸ್-ಬಿಜೆಪಿ ವ್ಯವಸ್ಥಿತವಾಗಿ ದಾಳಿ ನಡೆಸುತ್ತಿರುವ ಹಿನ್ನೆಲೆಯಲ್ಲಿ ಎಂಟು ವಿದ್ಯಾರ್ಥಿ ಸಂಘಟನೆಗಳು ದಿಲ್ಲಿಯಲ್ಲಿ ಫೆಬ್ರುವರಿ 28ರಂದು ಸಭೆ ಸೇರಿ ಅಖಿಲ ಭಾರತ ಆಂದೋಲನವನ್ನು ನಡೆಸಲು ನಿರ್ಧರಿಸಿವೆ. ಸಂಸತ್ತಿನಲ್ಲಿ ಹೆಚ್‌ಆರ್‌ಡಿ ಮಂತ್ರಿ ಸ್ಮೃತಿ ಇರಾನಿಯವರು ಜೆಎನ್‌ಯುನ ಒಂದು 'ಉನ್ನತ ಮಟ್ಟದ ತನಿಖಾ ಸಮಿತಿ'ಯ ಆಂತರಿಕ ಮತ್ತು 'ಮಧ್ಯಂತರ' ವರದಿಯನ್ನು ಉಲ್ಲೇಖಿಸಿ ಎಂಟು ವಿದ್ಯಾರ್ಥಿಗಳನ್ನು ಆ ಸಮಿತಿ 'ತಪ್ಪಿತಸ್ಥರು' ಎಂದು ಗುರುತಿಸಿದೆ ಎನ್ನುತ್ತ ಆ ಎಂಟು ಮಂದಿಯ ಹೆಸರನ್ನು ಬಹಿರಂಗ ಪಡಿಸಲು ತನ್ನ ಅಧಿಕೃತ ಸ್ಥಾನವನ್ನು ದುರುಪಯೋಗಪಡಿಸಿಕೊಳ್ಳುವ ಮಟ್ಟಕ್ಕೆ ಹೋಗಿದ್ದಾರೆ. ಸರಕಾರೀ ಯಂತ್ರ ಮಾಧ್ಯಮದ ಒಂದು ವಿಭಾಗದೊಡನೆ ಕೈಜೋಡಿಸಿ ಇಡೀ ಜೆಎನ್‌ಯುವನ್ನು 'ರಾಷ್ಟ್ರ-ವಿರೋಧಿಗಳ ಅಡ್ಡಾ' ಎಂದು ಹಣೆಪಟ್ಟಿ ಹಚ್ಚುತ್ತಿದೆ. ಹೈದರಾಬಾದ್ ಕೇಂದ್ರೀಯ ವಿವಿಯಲ್ಲಿ ಇಂತಹುದೇ ಕಾರ್ಯವಿಧಾನ ಅಂತಿಮವಾಗಿ ರೋಹಿತ್ ವೆಮುಲಾನ 'ಸಾಂಸ್ಥಿಕ ಕೊಲೆ'ಗೆ ಕಾರಣವಾಯಿತು.

ದೇಶಾದ್ಯಂತ ಹಿಂಸಾತ್ಮಕ, ಬೆದರಿಕೆಗಳ ಪ್ರಚಾರ ನಡೆಯುತ್ತಿದೆ. ಈ ನಾಚಿಕೆಗೇಡಿ ನಿಂದನೆಗಳ ಸುರಿಮಳೆಯಲ್ಲಿ ಬಿಜೆಪಿ ಮುಖಂಡರು ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ. ಇದು ಈ ಹಿಂದೆ, ಐಐಟಿ ಮದ್ರಾಸ್‌ನಲ್ಲಿ, ಎಫ್‌ಟಿಐಐ, ಪುಣೆಯಲ್ಲಿ, ನಂತರ ಹೈದರಾಬಾದಿನಲ್ಲಿ, ಈಗ ಜೆಎನ್‌ಯುನಲ್ಲಿ ಮತ್ತು ಇತರೆಡೆಗಳಲ್ಲಿ ಕಾಣುತ್ತಿದ್ದು ಇವೆಲ್ಲ ಉನ್ನತ ಶಿಕ್ಷಣ ಸಂಸ್ಥೆಗಳ ಮೇಲೆ ಆರೆಸ್ಸೆಸ್-ಬಿಜೆಪಿ ಹಲ್ಲೆಗಳ ಭಾಗ ಎಂಬ ತೀರ್ಮಾನಕ್ಕೆ ಈ ಎಂಟು ವಿದ್ಯಾರ್ಥಿ ಸಂಘಟನೆಗಳು ಬಂದಿವೆ. ಇದರ ವಿರುದ್ಧ ಒಂದು ದೇಶವ್ಯಾಪಿ ಆಂದೋಲನ ನಡೆಸಲು ಅವು ನಿರ್ಧರಿಸಿದವು.

* **ಫೆಬ್ರುವರಿ 29ರಿಂದ ಮಾರ್ಚ್ 5 ರವರೆಗೆ- ಪ್ರಜಾಪ್ರಭುತ್ವದ ರಕ್ಷಣೆಯ ಅಖಿಲ ಭಾರತ ಪ್ರಚಾರಾಂದೋಲನ**
* **ಎಲ್ಲ ವಿದ್ಯಾರ್ಥಿ ಸಂಘಟನೆಗಳ ನಿಯೋಗ ರಾಷ್ಟ್ರಪತಿಗಳು, ಗೃಹಮಂತ್ರಿಗಳು ಮತ್ತು ಸಂಸತ್ ಸದಸ್ಯರನ್ನು ಭೇಟಿ ಮಾಡುತ್ತವೆ.**
* **ಮಾರ್ಚ್ 2ರಂದು ಅಖಿಲ ಭಾರತ ಪ್ರತಿಭಟನಾ ದಿನ, ದಿಲ್ಲಿಯಲ್ಲಿ ಸಂಸತ್ ಚಲೋ.**
* **ಮಾರ್ಚ್18ರಂದು ದಿಲ್ಲಿ ಚಲೋ. ದೇಶದೆಲ್ಲೆಡೆಗಳಿಂದ ಸಾವಿರಾರು ವಿದ್ಯಾರ್ಥಿಗಳು ದಿಲ್ಲಿಯಲ್ಲಿ ಒಟ್ಟುಗೂಡಲು ಕರೆ.**



ಈಗಾಗಲೇ ಮಾರ್ಚ್ 2ರಂದು ಪ್ರತಿಭಟನಾ ದಿನಾಚರಣೆ ನಡೆದಿದೆ. ದಿಲ್ಲಿಯಲ್ಲಿ ವಿದ್ಯಾರ್ಥಿಗಳ ಸಂಸತ್ ಚಲೋ ಕಾರ್ಯಕ್ರಮದಲ್ಲಿ ನೂರಾರು ವಿದ್ಯಾರ್ಥಿಗಳೊಂದಿಗೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಬೃಂದಾ ಕಾರಟ್ ಭಾಗವಹಿಸಿದ್ದರು. ಎಐಎಸ್‌ಎ, ಎಐಎಸ್‌ಬಿ, ಛಾತ್ರ ಜೆಡಿ(ಯು), ಕೆವೈಎಸ್, ಎನ್‌ಎಸ್‌ಯುಐ, ಎಸ್‌ಎಫ್‌ಐ ಮತ್ತು ಎಸ್‌ಎಫ್‌ಎಸ್‌ನ ಮುಖಂಡರು ಈ ಸಭೆಯಲ್ಲಿ ಭಾಗವಹಿಸಿದ್ದರು.

ಶಾಸಕರನ್ನು ಜನ 'ವಾಚ್' ಮಾಡಬೇಕು

ಸಂಪಾದಕೀಯ

ವಿಧಾನಮಂಡಲದ 5 ದಿನಗಳ ಅಧಿವೇಶನದ ಬಹುಪಾಲನ್ನು 'ವಾಚ್ ವಿವಾದ' ನುಂಗಿ ಹಾಕಿದೆ. ಪಂಚಾಯತ್ ಚುನಾವಣೆಯ ಸಮಯದಲ್ಲಿ ಜೆ.ಡಿ(ಎಸ್) ನಾಯಕ ಕುಮಾರಸ್ವಾಮಿ ಮುಖ್ಯಮಂತ್ರಿ ಸಿದ್ಧರಾಮಯ್ಯನವರ ವಾಚಿನ ಬಗ್ಗೆ ಮಾಡಿದ ಆಪಾದನೆಯ ಬಗ್ಗೆ ಎರಡೂ ಪಕ್ಷಗಳು ಪಟ್ಟು ಹಿಡಿದು ಬೇರೆ ಯಾವುದೇ ವಿಷಯದ ಬಗ್ಗೆ ಚರ್ಚೆ ಮಾಡದಂತಹ ಪರಿಸ್ಥಿತಿ ತಂದಿವೆ. ರಾಜ್ಯಪಾಲರ ಭಾಷಣದ ಬಗ್ಗೆ ಚರ್ಚೆ ಎತ್ತಿಕೊಂಡು ರಾಜ್ಯದ ಜನತೆ ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಸರಕಾರದ ಗಮನ ಸೆಳೆಯಬೇಕಾಗಿದ್ದ ಎರಡೂ ವಿರೋಧ ಪಕ್ಷಗಳು ಬರಿಯ 'ವಾಚ್ ವಿವಾದ'ದಲ್ಲಿ ಮುಳುಗಿ ಹೋಗಿವೆ. ವಾಚ್ ಯಾರು ಉಡುಗೊರೆ ಕಟ್ಟಿದ್ದು? ಅವರು ಪ್ರತಿಯಾಗಿ ಏನನ್ನು ನಿರೀಕ್ಷಿಸಿರಬಹುದು? ಎಂದು ವಿರೋಧ ಪಕ್ಷಗಳು ಪ್ರಶ್ನಿಸುವುದು ತಪ್ಪಲ್ಲ. ಇದಕ್ಕೆ ಮುಖ್ಯಮಂತ್ರಿಗಳು ಸೂಕ್ತ ಮತ್ತು ಸಮಾಧಾನಕರ ಉತ್ತರ ಕೊಡಬೇಕು ಎಂಬುದಕ್ಕೂ ಸಂಶಯವಿಲ್ಲ. ಆದರೆ ಮುಖ್ಯಮಂತ್ರಿಗಳ ಅಥವಾ ಸರಕಾರದ ಯಾವುದಾದರೂ ಕ್ರಮ ಈ ಉಡುಗೊರೆ ಕೊಟ್ಟವರಿಂದ ಪ್ರೇರಿತವಾಗಿತ್ತು. ಯಾವುದೇ ಭ್ರಷ್ಟಾಚಾರ ಹಗರಣಕ್ಕೆ ಕಾರಣವಾಯಿತು ಎಂದು ನಿರ್ದಿಷ್ಟವಾಗಿ ಸೂಚಿಸದೆ ಈ ವಿವಾದವನ್ನು ಬೆಳೆಸುವುದು ವಿರೋಧ ಪಕ್ಷಗಳ ರಾಜಕೀಯ ದಿವಾಳಿತನವನ್ನು ಸಹ ತೋರಿಸುತ್ತದೆ. ರಾಜ್ಯದ ಜನತೆಯನ್ನು ಬಾಧಿಸುತ್ತಿರುವ ಯಾವುದೇ ಸಮಸ್ಯೆಗಳ ಬಗ್ಗೆ ಸರಕಾರದಂತೆ ವಿರೋಧ ಪಕ್ಷಗಳಿಗೂ ಯಾವುದೇ ಕಾಳಜಿ ಇಲ್ಲ ಎಂದು ತೋರಿಸುತ್ತದೆ.

ರಾಜ್ಯಪಾಲರ ಭಾಷಣದಲ್ಲಿ "14 ನೇ ಹಣಕಾಸು ಆಯೋಗದಡಿ ರಾಜ್ಯಗಳಿಗೆ ನೀಡುವ ತೆರಿಗೆ ಪಾಲನ್ನು ಶೇ. 32ರಿಂದ ಶೇ. 42ಕ್ಕೆ ಹೆಚ್ಚಿಸಿದ್ದರೂ ವಿವಿಧ ಯೋಜನೆಗಳಿಗೆ ಅನುದಾನದ ಪ್ರಮಾಣ ಕಡಿಮೆ ಮಾಡಿರುವುದರಿಂದ ತೊಂದರೆ ಆಗಿದೆ.. .. ಇತ್ತೀಚಿನವರೆಗೂ ಬಹಳಷ್ಟು ಕೇಂದ್ರ ಪುಸ್ಕೃತ ಯೋಜನೆಗಳಲ್ಲಿ ಕೇಂದ್ರದ ಅನುದಾನ ಹಂಚಿಕೆ ಮತ್ತು ಪರಿಷ್ಕೃತ ತೆರಿಗೆ ಪಾಲಿನ ಬಗ್ಗೆ ಸ್ಪಷ್ಟತೆ ಇಲ್ಲ" ಎಂದು ಮಾಡಲಾದ ಹೇಳಿಕೆ ಗಂಭೀರ ಚರ್ಚೆ ಮಾಡಬೇಕಾದ್ದು. ಕೇಂದ್ರದಲ್ಲಿ ಆಳುತ್ತಿರುವ ರಾಜ್ಯದ ಪ್ರಮುಖ ವಿರೋಧ ಪಕ್ಷ ಈ ಬಗ್ಗೆ ತನ್ನ ಅಭಿಪ್ರಾಯ ಹೇಳಬೇಕಾದ್ದು. ಇದು ನಿಜವಲ್ಲದಿದ್ದರೆ ಸರಕಾರಕ್ಕೆ ಸವಾಲು ಹಾಕಬೇಕು. ನಿಜವಾದರೆ ಏಕೆ ಎಂದು ಸಮಜಾಯಿಷಿ ಹೇಳಬೇಕಾದ್ದು.

ಇದೇ ರೀತಿ 136 ತಾಲೂಕುಗಳಲ್ಲಿ ಮುಂಗಾರು ಬರ ಪರಿಹಾರ ನಿಧಿಯ ವಿತರಣೆಯಲ್ಲಿ ಆಗಿರುವ ತೀವ್ರ ಲೋಪದೋಷಗಳ ಬಗ್ಗೆ ವಿರೋಧ ಪಕ್ಷಗಳು ಸರಕಾರವನ್ನು ತರಾಟೆಗೆ ತೆಗೆದುಕೊಳ್ಳಬೇಕು. ರಾಜ್ಯ ಸರಕಾರ ಕೇಳಿದ 2278 ಕೋಟಿ ರೂ. ಬದಲು ಕೇಂದ್ರ ಬಿಡುಗಡೆ ಮಾಡಿದ್ದು ಕೇವಲ 1540 ಕೋಟಿ ರೂ,=. ಮಾತ್ರ ನೀಡಲಾಗಿದೆ. 62 ತಾಲೂಕುಗಳಲ್ಲಿ ಹಿಂಗಾರು ಬರದ ಸಮೀಕ್ಷೆಯಲ್ಲೇ ವಿಳಂಬ ಆಗಿದ್ದು 1416 ಕೋಟಿ ರೂ. ಬಿಡುಗಡೆ-ಯ ಮನವಿಗೆ ಫಲ ಯಾವಾಗ ದೊರಕುತ್ತದೆ ಎಂಬ ಬಗೆಗೂ ಚರ್ಚೆ ಆಗಬೇಕಿತ್ತು. ಮುಂಗಾರು ಮತ್ತು ಹಿಂಗಾರು ಎರಡೂ ವಿಫಲವಾಗಿರುವುದರಿಂದ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗಿದ್ದು ಈ ಬಗ್ಗೆ ಕ್ರಮಗಳ ಬಗೆಗೂ ಚರ್ಚೆ ಆಗಬೇಕಾಗಿತ್ತು. ಮಹದಾಯಿ ಯೋಜನೆ ಬಗ್ಗೆ ಕಾಂಗ್ರೆಸ್-ಬಿಜೆಪಿ ಫುಟ್‌ಬಾಲ್ ಆಡುತ್ತಿದ್ದು ಹಲವು ತಿಂಗಳುಗಳಿಂದ ಚಳುವಳಿ ನಡೆಯುತ್ತಿದ್ದರೂ ಅದನ್ನು ಪರಿಹರಿಸಲು ಯಾವುದೇ ಪ್ರಯತ್ನ ಕಾಣುತ್ತಿಲ್ಲ. ಬಯಲು ಸೀಮೆಯ ನೀರಿನ ಸಮಸ್ಯೆಯತ್ತ ವಿಧಾನ ಮಂಡಲದ ಗಮನ ಸೆಳೆಯಲು ರೈತರ ರ್‍ಯಾಲಿಯ ಮೇಲೆ ಸರಕಾರ ದಮನಚಕ್ರ ಹರಿಸಿದ್ದು ಖಂಡನೀಯ.

ಈ ಬೇಸಗೆಯಲ್ಲಿ ರಾಜ್ಯದ ವಿದ್ಯುತ್ ಕೊರತೆಯ ಸಮಸ್ಯೆ ತೀವ್ರವಾಗಲಿದೆ. ಶರಾವತಿಯ ಜಲ ವಿದ್ಯುದಾಗಾರದಲ್ಲಿ ಅಘಘಾತ ಸಂಭವಿಸಿ ಒಂದು ವಿದ್ಯುತ್ ಉತ್ಪಾದನಾ ಕೇಂದ್ರ ಸುಟ್ಟು ಹೋಗಿದೆ. ಈ ಕೇಂದ್ರದ ರಿಪೇರಿ 3-4 ತಿಂಗಳುಗಳ ಕಾಲ ತೆಗೆದುಕೊಳ್ಳಾಗಿದೆ. ಇದರಿಂದ ಈ ಬೇಸಗೆಯಲ್ಲಿ 1000 ಮೆಗಾವಾಟ್ ವಿದ್ಯುತ್ ಕೊರತೆ ಆಗಲಿದೆ. ಬೇಸಗೆಯಲ್ಲಿ ಶಾಖೋತ್ಪನ್ನ ಘಟಕಗಳು ಹೆಚ್ಚಾಗಿ ಕೆಡುವ ಸಾಧ್ಯತೆ ಇದ್ದು, ಈ ಬೇಸಗೆಯಲ್ಲಿ 1000ದಿಂದ 2500 ಮೆಗಾವಾಟ್ ಕೊರತೆ ಬೀಳುವ ಸಾಧ್ಯತೆ ಇದೆ. ಕೇಂದ್ರದಿಂದ ಕೇವಲ 319 ಮೆಗಾವಾಟ್ ಭರವಸೆ ಸಿಕ್ಕಿದೆ. ಈಗಾಗಲೇ ಲೋಡ್ ಶೆಡ್ಡಿಂಗ್ ಆರಂಭವಾಗಿದ್ದು ದೀರ್ಘ ಲೋಡ್ ಶೆಡ್ಡಿಂಗ್ ಗಳು ಅನಿವಾರ್ಯ ಆಗಬಹುದು. ಖಾಸಗಿ ಉತ್ಪಾದಕ-ರಿಂದ ದುಬಾರಿ ಬೆಲೆಯಲ್ಲಿ ವಿದ್ಯುತ್ ಖರೀದಿ ಅನಿವಾರ್ಯವಾಗಬಹುದು. ಈ ನಡುವೆ ವಿದ್ಯುತ್ ಕೊರತೆ ವ್ಯತ್ಯಯಗಳ ಬಗೆಗ ಮಂತ್ರಿಗಳಿಗೆ ನೇರವಾಗಿ ದೂರು ಕೊಡುವ 'ದಾಷ್ಟ್ಯ ರೋರಿಸಿದ್ದಕ್ಕಾಗಿ ದ.ಕ.ದ ಒಬ್ಬ ವರ್ತಕರ ಸಂಘದ ಕಾರ್ಯಕರ್ತನನ್ನು ಬಂಧಿಸಿದ್ದನ್ನು ತೀವ್ರವಾಗಿ ಪ್ರತಿಭಟಿಸಬೇಕಾಗಿದೆ.



ಕೃಪೆ: ಪಿ. ಮಹಮ್ಮದ್, ವಿಜಯ ಕರ್ನಾಟಕ

ಇನ್ನು ಅತಿಥಿ ಉಪನ್ಯಾಸಕರ, ಗ್ರಾಮ ಪಂಚಾಯತ್ ನೌಕರರ, ಕಾರ್ಮಿಕರ ಕನಿಷ್ಟ ಕೂಲಿ, ಬೀಡಿ ಕಾರ್ಮಿಕರ ತುಟ್ಟಿಭತ್ಯೆ ಬಗ್ಗೆ ಈಗಾಗಲೇ ಸರಕಾರ ಕೊಟ್ಟಿರುವ ಕನಿಷ್ಟ ಭರವಸೆಗಳನ್ನು ಈಡೇರಿಸುವ ಬಗ್ಗೆ ಸರಕಾರಕ್ಕೂ ವಿರೋಧ ಪಕ್ಷಗಳಿಗೂ ಯಾವುದೇ ಕಾಳಜಿ ಇಲ್ಲ ಎಂಬುದು ಸ್ಪಷ್ಟ. ಹೆಚ್ಚುತ್ತಿರುವ ರೈತರ ಆತ್ಮಹತ್ಯೆ, ದಲಿತರ ಮೇಲಿನ ದೌರ್ಜನ್ಯಗಳು, ಬಗರ್ ಹುಕುಂ ಜಮೀನು, ನಿವೇಶನ ಮುಂತಾದ ದೀರ್ಘಕಾಲೀನ ಸಮಸ್ಯೆಗಳ ಬಗ್ಗೆ ಯಾವುದೇ ಜರೂರಿ ಇಲ್ಲ. ವಾಚ್ ವಿವಾದ ಅತ್ಯಂತ ಜರೂರಿನದ್ದು ಎಂದು ಭಾವಿಸಿವೆ

ವಿಧಾನಮಂಡಲದ ಉಭಯ ಸದನಗಳ ಇಂತಹ ಆಳುವ ಮತ್ತು ವಿರೋಧ ಪಕ್ಷಗಳ ಸದಸ್ಯರ ಬಗ್ಗೆ ಜನತೆ ಎಚ್ಚರಾಗಬೇಕಾದ ಅಗತ್ಯ ಇದೆ. ಮುಖ್ಯಮಂತ್ರಿಗಳ 'ವಾಚ್'ನ್ನು ಮಾತ್ರ 'ವಾಚ್' ಮಾಡುತ್ತಿರುವಂತಹ ವಿಧಾನಮಂಡಲದ ಸದಸ್ಯರನ್ನು ಜನತೆ 'ವಾಚ್'ನಲ್ಲಿ ಇಡಬೇಕಾಗಿದೆ.

STATEMENT OF THE OWNERSHIP ETC

The Weekly Newspaper "JANASHAKTHI KANNADA VARA PATRIKE"

Form IV

(See Rule 8)

1.	Place of Publication	:	EMS Bhavana, No.37/A, 8th Cross, Mahalakshmi Layout, Bangalore-560086 (Karnataka)
2.	Periodicity of Publication	:	weekly
3.	Printer's Name	:	G.V.Sriramareddy
	(Whether Citizen of India? If Foreigner, State the Country of Origin)	:	Indian
4.	Address	:	EMS Bhavana, No.37/A, 8th Cross, Mahalakshmi Layout, Bangalore-560086 (Karnataka)
5.	Editor`s Name	:	Nithyanandaswami
	(Whether Citizen of India? If Foreigner, State the Country of Origin)	:	Indian
	Address	:	EMS Bhavana, No.37/A, 8th Cross, Mahalakshmi Layout, Bangalore-560086 (Karnataka)
6.	Name and address of Individuals Communist Party of India(Marxist) Who own the News paper and Karnataka State Committee partners or Shareholders holding more then one percent of the Total capital	:	EMS Bhavana, No.37/A, 8th Cross, Mahalakshmi Layout, Bangalore-560086 (Karnataka)

I G.V. Srirama reddy, here by declare that the particulars given above are true to the best of my knowledge and belief.

Sd/-
G.V. Sriramareddy
Publisher

Date : March 15, 2016
Bangalore

ªÀiÁvÉAzÀgÉ EzÀÄ

ನಾವು ಕೇಳ್ತಿರೋದು ಭಾರತದಿಂದ ಸ್ವಾತಂತ್ರ್ಯ ಅಲ್ಲ. ಭಾರತದೊಳಗೆ ಸ್ವಾತಂತ್ರ್ಯ ಬೇಕು ಅಂತ. ಭಾರತದಿಂದ ಸ್ವತಂತ್ರರಾಗಬೇಕು ಅಂತ ಅಲ್ಲ. ಭಾರತದೊಳಗೆ ಸ್ವತಂತ್ರರಾಗಬೇಕು ಅಂತ
ಮೊದಲನೆಯದಾಗಿ, ಕೆಲವು ವಿದ್ಯಾರ್ಥಿಗಳ ಮೇಲೆ ಒಂದು ರಾಜಕೀಯ ಅಸ್ತ್ರವಾಗಿ ದೇಶದ್ರೋಹದ ಆಪಾದನೆ ಹೊರಿಸಲಾಗಿದೆ ಅಂತ ಅಂದುಕೊಳ್ಬೇಡಿ. ಜೆ ಎನ್ ಯು ಮೇಲೆ ನಡೆಸಿದ ದಾಳಿ ಒಂದು ನಿಯೋಜಿತ ದಾಳಿಯಾಗಿತ್ತು ಅನ್ನೋದನ್ನ ನಾವು ಅರ್ಥ ಮಾಡಿಕೊಳ್ಳಬೇಕಿದೆ. ನಾವು ಅಕ್ಯುಪೈ ಯುಜಿಸಿ ಚಳವಳಿಯನ್ನ ಮುಂದುವರೆಸೋಕೆ ಬಯಸಿದ್ದರಿಂದಲೇ ಈ ದಾಳಿ ರೂಪುಗೊಳಿಸಲಾಗಿದೆ. ರೋಹಿತ್ ವೇಮುಲನ ಸಾವಿಗೆ ನ್ಯಾಯ ದೊರಕಿಸುವ ಹೋರಾಟವನ್ನ ಕೈಗೆತ್ತಿಕೊಂಡಿದ್ದೇವಲ್ಲ, ಈ ಹೋರಾಟವನ್ನ ಮುಗಿಸಿಬಿಡುವ ಉದ್ದೇಶದಿಂದ ಈ ದಾಳಿ ರೂಪಿಸಲಾಗಿದೆ.
ಇದು ಸುದೀರ್ಘ ಕದನ. ಎಲ್ಲಿಯೂ ನಿಲ್ಲದೆ, ಯಾರಿಗೂ ಬಾಗದೆ, ಉಸಿರು ಬಿಗಿಹಿಡಿದು ನಾವು ಇದನ್ನು ಮುನ್ನಡೆಸಬೇಕು. ಜೆ ಎನ್ ಯು ಗಾಗಿ ಶುರುವಾದ ಈ ಹೋರಾಟ,
ರೋಹಿತ್ ವೇಮುಲಾನ ಸಾವಿನ ನ್ಯಾಯಕ್ಕಾಗಿ ಶುರುವಾದ ಈ ಹೋರಾಟ,
ನಿಮ್ಮೆಲ್ಲರ ಕಳಕಳಿಯಿಂದ ಶುರುವಾದ ಈ ಹೋರಾಟ, ಈ ದೇಶದ ಸೌಹಾರ್ದ ಜೀವಿಗಳು, ಪ್ರಗತಿಪರರು ಶುರುಮಾಡಿದ ಈ ಹೋರಾಟವೇನಿದೆ, ಈ ಹೋರಾಟವನ್ನು ನಾವು ನಡೆಸ್ತೀವಿ, ಗೆದ್ದೇಗೆಲ್ತೀವಿ.
ಇದು ನಮ್ಮ ವಿಶ್ವಾಸ.



- ಕನ್ಹಯ್ಯ ಕುಮಾರ್
(ಬಿಡುಗಡೆ ಆದ ಮೇಲೆ ಜೆ.ಎನ್.ಯು. ಕ್ಯಾಂಪಸ್ ನಲ್ಲಿ ಮಾತನಾಡುತ್ತಾ)

ಬಜೆಟ್‌ನಲ್ಲಿ ಐಸಿಡಿಎಸ್ ಅನುದಾನ ಕಡಿತದ ವಿರುದ್ಧ ಪ್ರತಿಭಟನೆ


ವಿಜಾಪುರ

ಐಸಿಡಿಎಸ್ ಯೋಜನೆಗೆ ಬಜೆಟ್‌ನಲ್ಲಿ ಹಣ ಕಡಿತ ಮಾಡಿರುವುದನ್ನು ವಿರೋಧಿಸಿ ಕನಿಷ್ಠ ಕೂಲಿ 18 ಸಾವಿರಕ್ಕೆ ಆಗ್ರಹಿಸಿ ಅಂಗನವಾಡಿ ಮತ್ತು ಬಿಸಿಯೂಟ ನೌಕರರು ಸಿಐಟಿಯು ನೇತೃತ್ವದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಪ್ರತಿಭಟನೆ ಮಾಡಿದರು. ಪ್ರತಿಭಟನೆಯಲ್ಲಿ ಮೋದಿ ಸರಕಾರದ ಪ್ರತಿಕೃತಿಯನ್ನು ದಹಿಸಲಾಯಿತು. ಸುಮಾರು 130 ಕ್ಕೂ ಹೆಚ್ಚು ಹೋಬಳಿಗಳಲ್ಲಿ ಅಂಗನವಾಡಿ ಅಥವಾ ಬಿಸಿಯೂಟ ಅಥವಾ ಜಂಟಿಯಾಗಿ ನೌಕರರು ಪ್ರತಿಭಟಿಸಿದ್ದು ವಿಶೇಷವಾಗಿತ್ತು. ಹೆಚ್ಚಿನ ತಾಲೂಕು ಮತ್ತು ಜಿಲ್ಲಾ ಕೇಂದ್ರಗಳಲ್ಲೂ ಪ್ರತಿಭಟನೆಗಳು ನಡೆದಿವೆ.

ಕೇಂದ್ರದ ಬಿಜೆಪಿ ಸರ್ಕಾರ ಬಡ ಗ್ರಾಮೀಣ ಮಕ್ಕಳ ಶಿಕ್ಷಣಕ್ಕಾಗಿ ದುಡಿಯುತ್ತಿರುವ ಅಂಗನವಾಡಿ ನೌಕರರನ್ನು ಕಡೆಗಣಿಸುತ್ತಿದ್ದು ಕಳೆದ ಮೂರು ಬಾರಿ ಬಜೆಟ್ ಮಂಡನೆ ಮಾಡಿದರೂ ಸಹ ಇದುವರೆಗೂ ಅಂಗನವಾಡಿ ನೌಕರರಿಗೆ 100 ರೂ.ಗಳ ಗೌರವಧನವನ್ನು ಹೆಚ್ಚಿಸಿಲ್ಲ. ಬದಲಾಗಿ ಈ ಬಾರಿಯ ಬಜೆಟ್‌ನಲ್ಲಿ 1,500 ಕೋಟಿ ರೂಗಳನ್ನು ಕಡಿತ ಮಾಡುವ ಮೂಲಕ ಗ್ರಾಮೀಣ ಪ್ರದೇಶದ ಮಕ್ಕಳ ಶಿಕ್ಷಣಕ್ಕೆ ದೊಡ್ಡ ಹೊಡೆತವನ್ನು ನೀಡಿದೆ.

6 ವರ್ಷದೊಳಗಿನ ಮಕ್ಕಳು ಹಾಗೂ ಮಹಿಳೆಯರ ಸಮಗ್ರ ಅಭಿವೃದ್ಧಿಗಾಗಿ ಅತ್ಯಂತ ದೀರ್ಘಕಾಲಿಕವಾಗಿ ದುಡಿಯುವ ಅಂಗನವಾಡಿ ನೌಕರರು.

ಸಾಂಪ್ರದಾಯಿಕ ಸಮಾಜದಿಂದ ನಾಗರಿಕ ಸಮಾಜದೆಡೆಯ ಪರಿವರ್ತನೆಯಲ್ಲಿ 1975 ರಿಂದ ಐಸಿಡಿಎಸ್ ಯೋಜನೆ ಅತ್ಯಂತ ಮಹತ್ವ ಪೂರ್ಣವಾದ ಪಾತ್ರವನ್ನು ವಹಿಸಿದೆ. ದೇಶದ ಸ್ವತಂತ್ರ ಭಾರತ ಆಶಯದಂತೆ ಮಕ್ಕಳನ್ನು ಸತ್ಪ್ರಜೆಗಳಾಗಿ ರೂಪಿಸುವುದು ಸರ್ಕಾರದ ಕರ್ತವ್ಯ. ಇದರ ಆಧಾರದಲ್ಲಿ ಐಸಿಡಿಎಸ್ ಯೋಜನೆ ರೂಪಗೊಂಡು ಜಾರಿಯಾಗುತ್ತಿದೆ, ಆದರೆ ನಮ್ಮ ಸರ್ಕಾರಗಳು ಅನುಸರಿಸುತ್ತಿರುವ ಉದಾರೀಕರಣ ನೀತಿಗಳ ಭಾಗವಾಗಿ "ಅವರ ಕಲ್ಯಾಣ ಅವರದ್ದೇ" ಎಂಬ ರೀತಿಯಲ್ಲಿ ಅಹಾರ, ಆರೋಗ್ಯ, ಶಿಕ್ಷಣ, ಉದ್ಯೋಗ, ಗ್ರಾಮೀಣಾಭಿವೃದ್ಧಿ ಭಾಗವಾಗಿ ಸುಮಾರು 73 ಯೋಜನೆಗಳನ್ನು 32 ಯೋಜನೆಗಳನ್ನಾಗಿ ಮಾರ್ಪಡಿಸಿದೆ.

ರಾಜ್ಯಕ್ಕೆ ಐಸಿಡಿಎಸ್ ಯೋಜನೆಗೆ ಬರುವ 137.5 ಕೋಟಿ ರೂ. ಅನುದಾನದಲ್ಲಿ ಸುಮಾರು 50% ಕಡಿತ ಮಾಡಲಾಗಿದೆ, 700 ಕೋಟಿ ಹಣ ಕಡಿತವಾಗುತ್ತದೆ ಯೋಜನೆಯ ಮೇಲೆ ಈಗಾಗಲೇ ಕರಿ ನೆರಳು ಬೀರಲು ಪ್ರಾರಂಭವಾಗುತ್ತಿದೆ.

ಕೇಂದ್ರ ಸರ್ಕಾರವು ಕೇವಲ 1,500–3,000 ರೂ.ಗಳಿಗೆ ಅಂಗನವಾಡಿ ನೌಕರರನ್ನು ದುಡಿಸುತ್ತಿದ್ದು ಮತ್ಯಾವುದೇ ರೀತಿಯ ಸೇವಾ ಸೌಲಭ್ಯಗಳನ್ನು ಕೊಡದೆ ರಾಜ್ಯ ಸರ್ಕಾರಗಳ ಮೇಲೆ ಜವಾಬ್ದಾರಿಗಳನ್ನು ಹೊರಿಸಿದೆ. ಇದರಿಂದಾಗಿ 40 ವರ್ಷಗಳ ಸೇವಾವಧಿಯಾಗಿದ್ದರೂ ಅವರಿಗೆ ತೃಪ್ತಿದಾಯಕವಾದ ನಿವೃತ್ತಿ ಸೌಲಭ್ಯವಿಲ್ಲ. 2011 ರಿಂದ ಗೌರವಧನ ಹೆಚ್ಚಳ ಮಾಡಿಲ್ಲ, ಆರೋಗ್ಯದ ಯಾವುದೇ ರೀತಿಯ ಸೌಲಭ್ಯಗಳು ಇಲ್ಲದೆ ಬಳಲುವಂತಾಗಿದೆ. ಸರ್ಕಾರದ ಈ ನೀತಿಗಳ ವಿರುದ್ಧ ನಿರಂತರ ನಡೆಸುತ್ತಿರುವ ಅಂಗನವಾಡಿ ನೌಕರರ ಈ ಹೋರಾಟಗಳಿಗೆ ಸರ್ಕಾರ ಸ್ಪಂದಿಸಿಲ್ಲ. ಈ ಬಾರಿ ಬಜೆಟ್‌ನಲ್ಲಿ ತಮ್ಮನ್ನು ಕಡೆಗಣಿಸಿರುವುದನ್ನು ಖಂಡಿಸಿ ರಾಜ್ಯಾದ್ಯಂತ ಪ್ರತಿಭಟನೆಗೆ ಕರೆ ನೀಡಲಾಗಿತ್ತು.

ಸಿಐಟಿಯು ನೇತೃತ್ವದಲ್ಲಿ ತುಮಕೂರಿನಲ್ಲಿ ನಡೆದ ಪ್ರತಿಭಟನೆಯಲ್ಲಿ ನೂರಾರು ಅಂಗನವಾಡಿ ನೌಕರರು ನಗರದ ಬಿಜಿಎಸ್ ವೃತ್ತದಲ್ಲಿ (ಟೌನ್‌ಹಾಲ್) ನೆನ್ನೆ ಕೇಂದ್ರ ಸರ್ಕಾರದ ಭೂತದಹನ ಮಾಡಿದರು. ಜಿಲ್ಲಾಧ್ಯಕ್ಷತೆ ಜಿ.ಕಮಲ, ತಾಲ್ಲೂಕು ಅಧ್ಯಕ್ಷೆ ಗಂಗಮ್ಮ, ತಾಲ್ಲೂಕು ಖಜಾಂಚಿ ಮೆಹನ್‌ತಾಜ್, ಪ್ರಧಾನ ಕಾರ್ಯದರ್ಶಿ ಪ್ರೇಮಕುಮಾರಿ.ಎನ್. ಗೌರಮ್ಮ, ಶಿಲಾ, ಅನ್ನಪೂರ್ಣ, ಸಿದ್ದಗಂಗಮ್ಮ, ಶಂಕುತಲಾ, ಕಲ್ಪನಾ, ವಿನೋದಾ ಶೋಭಾರಾಣಿ ಮುಂತಾದವರು ನೇತೃತ್ವವಹಿಸಿದ್ದರು.

ವಿಜಯಪುರದಲ್ಲಿ ಅಂಗನವಾಡಿ ನೌಕರರ ಸಂಘ ಸಿಐಟಿಯು ಸಂಘಟನೆ ನೇತೃತ್ವದಲ್ಲಿ ಕೇಂದ್ರ ಸರ್ಕಾರದ ಪ್ರತಿಕೃತ ದಹನ ಮಾಡುವ ಮೂಲಕ ಪ್ರತಿಭಟನೆ ನಡೆಸಲಾಯಿತು. ರೈತ ಕಾರ್ಮಿಕ ಮುಖಂಡರಾದ ಭೀಮಶಿ ಕಲಾದಗಿ, ಸಿಐಟಿಯು ಮುಖಂಡರಾದ ಲಕ್ಷ್ಮಣ ಹಂದ್ರಾಳ, ತಾಲ್ಲೂಕು ಅಧ್ಯಕ್ಷರಾದ ಸುನಂದ ನಾಯಕ, ಸುವರ್ಣ ಹಲಗಣಿ, ಎಸ್.ಎಮ್.ಜಮಾದಾರ, ಜಯಶ್ರೀ ಪೂಜಾರಿ, ಮಾಹಾದೇವಿ ಬಡಿಗೇರ, ಪಾತಿಮಾ ಖಿಲ್ಲೇದಾರ ಮುಂತಾದವರು ಉಪಸ್ಥಿತರಿದ್ದರು.

ಬೆಳಗಾವಿ ಜಿಲ್ಲೆಯ ರಾಮದುರ್ಗದಲ್ಲಿ ಅಂಗನವಾಡಿ ಮತ್ತು ಅಕ್ಷರ ದಾಸೋಹ ನೌಕರರು ಜಂಟಿಯಾಗಿ ಪ್ರತಿಭಟನೆ ಕೇಂದ್ರ ಸರ್ಕಾರದ ಪ್ರತಿಕೃತಿ ದಹನ ಮಾಡಿದರು. ಈ ಸಂದರ್ಭದಲ್ಲಿ ಸಿ.ಐ.ಟಿ.ಯುನ ಜಿಲ್ಲಾ ಕಾರ್ಯದರ್ಶಿ ಜಿ.ಎಂ. ಜೈನೆಖಾನ, ಹಿರಿಯ ಮುಖಂಡರಾದ ಶ್ರೀ ವ್ಹಿ.ಪಿ.ಕುಲಕರ್ಣಿ, ಸಂಘದ ತಾಲೂಕಾ ಅಧ್ಯಕ್ಷ ಸರಸ್ವತಿ ಮಾಳಶೆಟ್ಟಿ, ಯಶೋದಾ ಹೊಸಕೋಟಿ, ಜಯಶ್ರೀ ನಿಂಗರಡ್ಡಿ, ತಾಹೀರಾ ಮಕಾನದಾರ, ನಾಗರತ್ನಾ ಮುಳ್ಳೂರ, ಶಂಕುತಲಾ ನಾರಾಯಣ–ಕರ, ಬಿಸಿ ಊಟದ ಸಂಘದ ಅಧ್ಯಕ್ಷರಾದ ತುಳಸಮ್ಮಾ ಮಾಳದರ ಕಾರ್ಯದರ್ಶಿ ಪಾರ್ವತಿ ನಿಜಗುಲಿ, ಕಟ್ಟಡ ಕಾರ್ಮಿಕರ ಮುಖಂಡರಾದ ನಾಗಪ್ಪ ಸಂಗೊಳ್ಳಿ ಮತ್ತು ಅಯ್ಯುಬ ಮೋಹಳಕರ ಮುಂತಾದವರು ನೇತೃತ್ವ ವಹಿಸಿದ್ದರು.

ತುಮಕೂರು ಜಿಲ್ಲೆಯ ಪಾವಗಡದಲ್ಲಿ ತಾಲ್ಲೂಕಿನ ಹೋಬಳಿ ಕೇಂದ್ರಗಳಲ್ಲಿ ಕೇಂದ್ರ ಸರ್ಕಾರದ ಪ್ರತಿಕೃತಿ ದಹನ ಮಾಡಲಾಯಿತು. ಗೌರವ ಅಧ್ಯಕ್ಷರಾದ ಸುಶೀಲ, ಬಿಸಿಯೂಟ ನೌಕರರ ಮುಖಂಡರಾದ ಸಿದ್ಧಮ್ಮ, ರಮೀಝಾ, ಕೆಂಚಮ್ಮ, ಶಾರದಬಾಯಿ, ಹನುಮಕ್ಕ, ಮುಂತಾದವರು ಭಾಗವಹಿಸಿದ್ದರು.

ಮಂಗಳೂರಿನಲ್ಲಿ ಪ್ರತಿಭಟನಾಕಾರರನ್ನುದ್ದೇಶಿಸಿ ಸಂಘದ ಜಿಲ್ಲಾಧ್ಯಕ್ಷರಾದ ಪದ್ಮಾವತಿ ಶೆಟ್ಟಿ, ಕಾರ್ಯದರ್ಶಿ ಗಿರಿಜಾ ಮೂಡಬಿದರೆ ಮಾತನಾಡಿದರು.

ಇದೇ ರೀತಿಯಲ್ಲಿ ಉತ್ತರ ಕನ್ನಡ, ಹಾಸನದ ಆಲೂರು, ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಅರಕೇರಾ, ಜಾಲಹಳ್ಳಿ, ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ, ತುಮಕೂರಿನ ಪಾವಗಡ, ತುಮಕೂರು ತಾಲ್ಲೂಕು, ಮಂಡ್ಯ ಜಿಲ್ಲೆ, ಸೇರಿದಂತೆ ಜಿಲ್ಲಾ ಹಾಗೂ ತಾಲ್ಲೂಕು, ಹೋಬಳಿ ಮಟ್ಟದಲ್ಲಿ ಪ್ರತಿಭಟನೆಗಳು ನಡೆದ ವರದಿಗಳು ಬಂದಿವೆ.


ಹಾಸನ


ಪಾವಗಢ


ತುಮಕೂರು



ದೇವದುರ್ಗಾ

ಈ ವಾರ ಚರಿತ್ರೆಯಲ್ಲಿ

27 ಫೆಬ್ರುವರಿ 1931

ಚಂದ್ರಶೇಖರ ಆಜಾದ್ ಹುತಾತ್ಮರಾದ ದಿನ



ಹಿಂದುಸ್ತಾನ್ ರಿಪಬ್ಲಿಕನ್ ಸೋಶಲಿಸ್ಟ್ ಆರ್ಮಿ (1928) ಎಂಬ ಕ್ರಾಂತಿಕಾರಿ ಸಂಘಟನೆಯ ಸ್ಥಾಪಕ. ಭಗತ್ ಸಿಂಗ್ ರಂತಹ ಕ್ರಾಂತಿಕಾರಿಗಳ ಗುರುವೆನಿಸಿಕೊಂಡವರು. ರಾಮ್ ಪ್ರಸಾದ್ ಬಿಸ್ಮಿಲ್ ಅವರು ಸ್ಥಾಪಿಸಿದ ಹಿಂದುಸ್ತಾನ್ ರಿಪಬ್ಲಿಕನ್ ಆರ್ಮಿ ಗೆ ಎಡ ತಿರುವು ಕೊಟ್ಟವರು. ಕಾಕೋರಿ ರೈಲು ದಾಳಿ ಪ್ರಕರಣ, ಲಾಲಾ ಲಜಪತ್ ರಾಯ್ ಸಾವಿಗೆ ಕಾರಣ–ರಾದ ಸ್ಯಾಂಡರ್ಸ್ ಮೇಲೆ ದಾಳಿ ಪ್ರಕರಣದಲ್ಲಿ ಆಪಾದಿತರು. ಅವರಿಗೆ ಈ ಪ್ರಕರಣಗಳಲ್ಲಿ ಮರಣ ದಂಡನೆ ವಿಧಿಸಿದ್ದರೂ ಅವರು ತಲೆ ಮರೆಸಿಕೊಂಡಿದ್ದರು. ಈ ದಿನದಂದು ಅಲಹಾಬಾದಿನ ಅಲ್ಫ್ರೆಡ್ ಪಾರ್ಕಿನಲ್ಲಿ ಪೋಲಿಸರು ಅವರನ್ನು ಸುತ್ತುವರೆದು ಅವರೊಂದಿಗೆ ಏಕಾಂಗಿಯಾಗಿ ಹೋರಾಡುತ್ತಾ ಹುತಾತ್ಮರಾದರು. ಆ ಪಾರ್ಕನ್ನು ಈಗ ಆಜಾದ್ ಪಾರ್ಕ್ ಎಂದು ಹೆಸರಿಸಲಾಗಿದೆ.







ಕನಿಷ್ಠ ವೇತನ ಜಾರಿಗಾಗಿ, ಸೇವೆಗೆ ಸೇರಿದ ದಿನದಿಂದ ಅನುಮೋದನೆಗಾಗಿ ಪ್ರತಿಭಟನೆ

ಗ್ರಾಮ ಪಂಚಾಯ್ತಿಗಳಲ್ಲಿ ದುಡಿಯುತ್ತಿರುವ ಎಲ್ಲಾ ನೌಕರರಿಗೆ ಸರ್ಕಾರ ನಿಗದಿ ಪಡಿಸಿರುವ ಕನಿಷ್ಠ ವೇತನ ಜಾರಿಗೆ, ಬಾಕಿ ಉಳಿದ ನೌಕರರಿಗೆ ಅನುಮೋದನೆಗೆ, ಸೇವೆಗೆ ಸೇರಿದ ದಿನದಿಂದ ನೌಕರರಿಗೆ ಅನುಮೋದನೆಗೆ ಆಗ್ರಹಿಸಿ ಕರ್ನಾಟಕ ರಾಜ್ಯ ಗ್ರಾಮ ಪಂಚಾಯ್ತಿ ನೌಕರರ ಸಂಘ(ಸಿಐಟಿಯು) ವತಿಯಿಂದ ಮಾರ್ಚ್ 1ರಂದು ಜಿಲ್ಲಾ ಪಂಚಾಯ್ತಿ ಕಛೇರಿಗಳ ಮುಂಭಾಗದಲ್ಲಿ ಪ್ರತಿಭಟನೆ ನಡೆಸಲಾಯಿತು.

ಬೆಂಗಳೂರಿನಲ್ಲಿ ಜಿಲ್ಲಾ ಪಂಚಾಯ್ತಿ ಎದುರು ಧರಣಿ ನಡೆಸಿದ ನೌಕರರನ್ನು ಉದ್ದೇಶಿಸಿ ಗ್ರಾಮ ಪಂಚಾಯ್ತಿ ನೌಕರರ ಸಂಘದ ರಾಜ್ಯ ಉಪಾಧ್ಯಕ್ಷರಾದ ಗೋಪಾಲಕೃಷ್ಣ ಅರಳಹಳ್ಳಿರವರು "ಹಲವಾರು ವರ್ಷಗಳಿಂದ ಗ್ರಾಮ ಪಂಚಾಯ್ತಿಗಳಲ್ಲಿ ದುಡಿಯುತ್ತಿರುವ ನೌಕರರು ಕನಿಷ್ಠ ವೇತನ ಜಾರಿ ಮಾಡಬೇಕು ಎಂದು ಆಗ್ರಹಿಸಿ ಹಲವಾರು ರೀತಿಯ ಹೋರಾಟಗಳನ್ನು ನಡೆಸಿದ ಹೋರಾಟಕ್ಕೆ ಮಣಿದ ಸರ್ಕಾರ ಕನಿಷ್ಠ ವೇತನ ಜಾರಿ ಮಾಡಿದೆ. ಆದರೆ ಸರ್ಕಾರ ನಿಗದಿ ಮಾಡಿರುವ ಕನಿಷ್ಠ ವೇತನವನ್ನು ಪಂಚಾಯ್ತಿಗಳಲ್ಲಿ ಇದುವರೆಗೂ ಜಾರಿ ಮಾಡಿಲ್ಲ. ಬದಲಾಗಿ ಬೇರೆ ಬೇರೆ ರೀತಿಯ ವೇತನವನು ನೀಡುವ ಮೂಲಕ ನೌಕರರಲ್ಲಿ ತಾರತಮ್ಯ ನೀತಿಯನ್ನು ಅನುಸರಿಸುತ್ತಿದ್ದಾರೆ. ಇದನ್ನು ಕೈಬಿಟ್ಟು ಎಲ್ಲಾ ನೌಕರರಿಗೂ ಒಂದೇ ರೀತಿಯ ವೇತನ ಜಾರಿ ಮಾಡಬೇಕು, ಖಾಲಿ ಇರುವ ಬಿಲ್ ಕಲೆಕ್ಟರ್ ಹುದ್ದೆಗೆ ಗ್ರಾಮ ಪಂಚಾಯ್ತಿಯ ಇತರೆ ಸಿಬ್ಬಂದಿ ವರ್ಗದವರಿಗೆ ಭಡ್ತಿ ನೀಡುವ ಮೂಲಕ ಹುದ್ದೆಯನ್ನು ತುಂಬಬೇಕು" ಎಂದರು.

ನಿರಂತರವಾಗಿ ಬೆಲೆ ಏರಿಕೆಯಾಗುತ್ತಿದ್ದು ಬರುವ ವೇತನದಲ್ಲಿ ಮಕ್ಕಳ ವಿದ್ಯಾಭ್ಯಾಸ, ಆರೋಗ್ಯ, ಕುಟುಂಬ ನಿರ್ವಹಣೆ ಮಾಡಲು ಸಾಧ್ಯವಾಗುತ್ತಿಲ್ಲ. ಹಗಲು ರಾತ್ರಿ ಎನ್ನದೆ ಗ್ರಾಮ ಪಂಚಾಯ್ತಿಯ ನೀರು ವಿತರಕರು, ಕಸ ಗುಡಿಸುವವರು, ಬಿಲ್‌ಕಲೆಕ್ಟರ್ ಸೇರಿದಂತೆ ಇತರೆ ವಿಭಾಗದ ನೌಕರರು ಕನಿಷ್ಠ ಕೂಲಿ ಇಲ್ಲದೆ ದುಡಿಯುತ್ತಿದ್ದಾರೆ, ದೇವರು ಕೊಟ್ಟರೂ ಪೂಜಾರಿ ಕೊಡೊದಿಲ್ಲ ಎನ್ನುವ ಗಾದೆ ಮಾತಿನಂತೆ ಸರ್ಕಾರ ಕನಿಷ್ಠ ಕೂಲಿ ನಿಗದಿ ಮಾಡಿದರೂ ಅದನ್ನು ಜಾರಿ ಮಾಡಲು ಅಧಿಕಾರಿಗಳು ಮನಸ್ಸು ಮಾಡುತ್ತಿಲ್ಲ, ಈ ಬಗ್ಗೆ ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಮೌಖಿಕವಾಗಿ ತಿಳಿಸಿದ್ದು ಅವರು ಅಧಿಕಾರಿಗಳಿಗೆ ಅದೇಶ ಮಾಡಿದರೂ ಸಹ ಜಾರಿ ಮಾಡದೆ ಇರುವುದನ್ನು ಪ್ರತಿಭಟನಾಕಾರರು ಖಂಡಿಸಿದರು.

ಕೂಡಲೇ ಅಂತಹ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು. ಭವಿಷ್ಯವರ್ತಿ ಅನುಮೋದನೆಗೆ ಬದಲಾಗಿ ನೌಕರರು ಸೇವೆಗೆ ಸೇರಿದ ದಿನಾಂಕದಿಂದ ಅನುಮೋದನೆ ಮಾಡಬೇಕು ಈ ಬಗ್ಗೆ ಸರ್ಕಾರದ ಹಂತದಲ್ಲಿ ಮಾತುಕತೆ ಮುಗಿದಿದ್ದು ಸರ್ಕಾರ ಒಪ್ಪಿಗೆ ಸೂಚಿಸಿದೆ. ಬಿಲ್‌ಕಲೆಕ್ಟರ್ ಹುದೆಯಿಂದ ಕಾರ್ಯದರ್ಶಿ–2 ಹುದ್ದೆಗೆ ಪದೋನ್ನತಿ ನೀಡಲು ಜೇಷ್ಠತಾ ಪಟ್ಟಿ ತಯಾರು ಮಾಡಬೇಕಾಗಿರುವ ಜಿಲ್ಲಾ ಪಂಚಾಯಿತಿ ಕಳೆದ ಮೂರು ವರ್ಷಗಳಿಂದ ಈ ಕೆಲಸವನ್ನು ಮಾಡಿಲ್ಲ. ಈ ಬಗ್ಗೆ ಮುಖ್ಯಕಾರ್ಯ ನಿರ್ವಹಣಾಧಿಕಾರಿಗಳು ಗಮನ ಹರಿಸಬೇಕು ಎಂದು ಒತ್ತಾಯಿಸಿದ್ದಾರೆ.

ವಿವಿಧ ಜಿಲ್ಲೆಗಳಲ್ಲಿ

ಹಾವೇರಿಯಲ್ಲಿ ನಡೆದ ಪ್ರತಿಭಟನೆಯಲ್ಲಿ ಜಿಲ್ಲಾ ಅಧ್ಯಕ್ಷರಾದ ನಾರಾಯಣ ಕಾಳೆ, ಸಿಐಟಿಯು ಮುಖಂಡರಾದ ವಿನಾಯಕ ಕುರುಬರ ಗೌರವಾಧ್ಯಕ್ಷರಾದ ವಿ.ಕೆ.ಬಾಳಿಕಾಯಿ, ಅಜ್ಜಪ್ಪ ಬಾರ್ಕಿ ಎಂ.ಬಿ.ಬಾರ್ಕಿ, ಮುಸ್ತಾಕಹ್ಮದ ಹುಬ್ಬಳ್ಳಿ, ಮಹೇಶ ಕೌಸಂಬಿ, ಗಣೇಶ ನೇಶ್ಮಿ, ಎಂ,ಎಂ.ತಡಸ, ವಿಜಯಕುಮಾರ ಅರೆಮಲ್ಲಾಪುರ ಹಾಗೂ ನೂರಾರು ಗ್ರಾಮ ಪಂಚಾಯತ ನೌಕರರು ಭಾಗವಹಿಸಿದ್ದರು.

ವಿಜಯಪುರ ಜಿಲ್ಲೆಯಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾದ ಸುಂದರೇಶ ಬಾಬು ಅವರಿಗೆ ಮನವಿ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ರಾಜ್ಯ ಉಪಾಧ್ಯಕ್ಷರಾದ ಭೀಮಸೀ ಕಲಾದಗಿ, ರಾಜು ಜಾಧವ, ಲಕ್ಷ್ಮಣ ಹಂದ್ರಾಳ, ಎಸ್.ಪಿ.ತೋಂಟಾಪೂರ, ವಿಠ್ಠಲ ಹೊನಮೊರೆ, ರಂಗಪ್ಪ ದಳವಾಯಿ, ಮಂಜುನಾಥ ಕರಡಿ, ಅಬ್ದುಲ್ ತಮದಡ್ಡಿ, ಎಸ್.ಎಚ್. ಬಿರಾದಾರ, ಗಂಗಾಧರ ಪಾಟೀಲ ಹಾಗೂ ಎಲ್ಲಾ ತಾಲೂಕಿನ ಪದಾಧಿಕಾರಿಗಳು ಮುಂತಾದವರು ಪಾಲ್ಗೊಂಡಿದ್ದರು.

ತುಮಕೂರು ಜಿಲ್ಲೆಯ ಜಿಲ್ಲಾ ಪಂಚಾಯತಿ ಕಛೇರಿ ಬಳಿ ನಡೆದ ಪ್ರತಿಭಟನೆಯಲ್ಲಿ ಮನವಿ ಸ್ವೀಕರಿಸಿದ ಶೀರ್ಘದಲ್ಲೇ ಸಭೆ ಕರೆಯಲಾಗುವುದು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೆಚ್.ಡಿ.ನಾಗೇಶ್, ಜಿಲ್ಲಾಧ್ಯಕ್ಷರಾದ ಎನ್.ಕೆ.ಸುಬ್ರಮಣ್ಯ ಮತ್ತು ಜಿಲ್ಲಾ ಪಂಚಾಯ್ತಿ ಸದಸ್ಯ ವೈ.ಎಚ್.ಹುಚ್ಚಯ ಮುಖಂಡರಾದ ಪಂಚಾಕ್ಷರಿ, ಚಂದ್ರಯ್ಯ, ತುರುವೇಕೆರೆ ರಂಗನಾಥ್, ಚಿಕ್ಕನಾಯಕನಹಳ್ಳಿ ಶಂಕರಪ್ಪ, ಲೋಕೇಶ್, ಕೊರಟಗೆರೆ ನಾಗಭೂಷಣ್ ಮಾತನಾಡಿದರು ಪ್ರತಿಭಟನೆಯಲ್ಲಿ ಸುಬ್ಬರಾಯಪ್ಪ, ಸಿದ್ದೇಶ್ವರಪ್ಪ, ಸುಬ್ರಮಣ್ಯ, ಶಂಕರ್, ಸೋಮಶೇಖರ, ಡಾಟಾ ಎಂಟ್ರಿ ಆಪರೇಟರ್ ರಾಜೇಶ್ವರಿ, ರೇಖಾ, ಚೇತನ ಕುಮಾರಿ, ಮಂಜುಳಮ್ಮ ಸೇರಿದಂತೆ ಮುಂತಾದವರು ಹೋರಾಟದ ನೇತೃತ್ವವಹಿಸಿದ್ದರು.

ಬೆಳಗಾವಿಯಲ್ಲಿ ಜಿಲ್ಲಾ ಪಂಚಾಯತಿ ಎದುರು ನಡೆದ ಪ್ರತಿಭಟನೆ ನಡೆಸಲಾಯಿತು. ಸ್ಥಳಕ್ಕೆ ಆಗಮಿಸಿದ ಡಿ.ಎಸ್.–2ರವರು ಮನವಿ ಸ್ವೀಕರಿಸಿ ಕಾರ್ಮಿಕ ಅಧಿಕಾರಿಗಳು ಹಾಗೂ ಸಂಘದ ಮುಖಂಡರ ಸಭೆಯನ್ನು ಶೀಘ್ರದಲ್ಲೇ ಕರೆಯಲಾಗುವುದು ಎಂದು ತಿಳಿಸಿದರು. ಮುಖಂಡರಾದ ವ್ಹಿ.ಪಿ.ಕುಲಕರ್ಣಿ, ಜಿ.ಎಂ. ಜೈನೆಖಾನ, ಜಿಲ್ಲಾ ಅಧ್ಯಕ್ಷರಾದ ಟಿ.ಎ.ಭಬಗೌಡ ಸ್ವಾಗತಿಸಿ ವಂದಿಸಿದರು. ಯು.ಎಫ್.ದಂಡಿನ, ಆರ್. ಎಸ್. ಪಾಟೀಲ, ಕಲ್ಲಪ್ಪ ಮಾದರ, ಬಿ.ಎನ್.ಪಾಟೀಲ, ಬಿ.ಕೆ.ಕಟ್ಟಿ, ದೇವೆಂದ್ರ ಕಾಂಬಳೆ, ದುರ್ಗಪ್ಪ ಕುರಂಗಿ ಮತ್ತು ಮಹಾಂತೇಶ ಕರಜಗಿರವರು ಭಾಗವಹಿಸಿದ್ದರು.

ಉಡುಪಿ ಜಿಲ್ಲಾಧಿಕಾರಿ ಕಚೇರಿ ಎದುರು ನಡೆದ ಪ್ರತಿಭಟನೆಯನ್ನುದ್ದೇಶಿಸಿ ರಾಜ್ಯ ಗ್ರಾ.ಪಂ.ನೌಕರರ ಸಂಘದ ಜಿಲ್ಲಾಧ್ಯಕ್ಷ ವೆಂಕಟೇಶ ಕೋಣಿ, ಕಾರ್ಯದರ್ಶಿ ನಾರಾಯಣ ಬೀಜಾಡಿ ಮಾತನಾಡಿದರು.

ಮಂಗಳೂರಿನಲ್ಲಿ ದ.ಕ.ಜಿಲ್ಲಾ ಪಂಚಾಯತು ಎದುರು ನಡೆದ ಪ್ರದರ್ಶನದಲ್ಲಿ ರಾಜ್ಯ ಗ್ರಾ.ಪಂ.ನೌಕರರ ಸಂಘದ ಜಿಲ್ಲಾಧ್ಯಕ್ಷ ಯಾದವ ಶೆಟ್ಟಿ, ಕಾರ್ಯದರ್ಶಿ ರಘು ಸುಳ್ಯ ಮಾತನಾಡಿದರು.

ಬೇಡಿಕೆಗಳನ್ನು ಈಡೇರಿಸಬೇಕೆಂದು ಮಂಡ್ಯ, ಬಳ್ಳಾರಿ, ಧಾರವಾಡ, ಹಾಸನ, ಕಲಬುರಗಿ, ಇನ್ನೂ ಹಲವು ಜಿಲ್ಲೆಗಳಲ್ಲಿ ಪ್ರತಿಭಟನೆಗಳು ನಡೆದ ವರದಿಗಳು ಬಂದಿದ್ದು, ಸಾವಿರಾರು ಗ್ರಾಮ ಪಂಚಾಯತಿ ನೌಕರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ●





ಇಂಟರ್ ನ್ಯಾಷನಲ್ ವಸ್ತುಪ್ರದರ್ಶನಕ್ಕೆ
ಬರೋ ಸಾವಿರಾರು ವಾಹನಗಳಿಗೆ ಸಿಟಿ
ಒಳಗೆ ಪ್ರವೇಶವಿದೆ; ಜಾತಿ ಸಮಾವೇಶಕ್ಕೆ
ಬರೋ ಸಾವಿರಾರು ವಾಹನಗಳಿಗೆ ಸಿಟಿ ಒಳಗೆ
ಪ್ರವೇಶವಿದೆ. ರೈತರು ನ್ಯಾಯ ಕೇಳೋಕೆ ಟ್ರಾಕ್ಟರ್
ಅಲ್ಲಿ ಬರ್ತಿವಿ ಅಂದ್ರೆ ಸಿಟಿ ಒಳಗೆ ತೊಂದರೆ
ಶುರು.....
ಬಿಜೆಪಿಯೋ, ಕಾಂಗ್ರೆಸ್ಸೋ ಯಾರ
ಸರ್ಕಾರವಾದರೂ ಅನುಕೂಲಸ್ಥರ ಸಾಮಾಜಿಕ
ಮೌಲ್ಯಗಳನ್ನು ಕಾಯುವ ನಾಯಿಗಳ ಹಾಗೆ
ಕೆಲಸ ಮಾಡುತ್ತವೆ.....
ದಲಿತ ರೈತ ಮಹಿಳೆಯರನ್ನು ಕಡೆಗಣಿಸಿದ
ಯಾವ ಸರ್ಕಾರವೂ ಉಳಿಯಲಾರದು..

– ಹುಲಿಕುಂಟೆ ಮೂರ್ತಿ

ಜನಶಕ್ತಿ
ಕನ್ನಡ ವಾರಪತ್ರಿಕೆ

ಚಂದಾ ವಿವರ

ವಾರ್ಷಿಕ ಚಂದಾ : ರೂ.350.00
ದ್ವೈವಾರ್ಷಿಕ ಚಂದಾ : ರೂ.700.00

ಚಂದಾದಾರರು ಸಂರ್ಕಿಸಿ :
ಕ್ರಿಯಾ ಪ್ರಕಾಶನ, ಸೂರಿ ಭವನ
ನಂ.50/5, 2ನೇ 'ಬಿ' ಮ್ಯೆನ್, 16ನೇ ಕ್ರಾಸ್,
ಸಂಪಂಗಿರಾಮನಗರ, ಬೆಂಗಳೂರು 560027
ಕಛೇರಿ ದೂರವಾಣಿ : 080–22234369
ಫೋನ್ : 9448578021, 9483966467

'ರಾಷ್ಟ್ರವಾದ' ಎಂದರೇನು? 'ರಾಷ್ಟ್ರ-ವಿರೋಧಿ' ಯಾರು ?

– ಪ್ರೊ. ಪ್ರಭಾತ್ ಪಟ್ನಾಯಕ್

ಕನ್ನಡಕ್ಕೆ: ವಿಶ್ವ

ವಸಾಹತುಶಾಹಿ ವಿರೋಧಿ ಹೋರಾಟದ ವೇಳೆ ಭಾರತದಲ್ಲಿ ಬೆಳೆದ ರಾಷ್ಟ್ರವಾದ ಒಂದು ಅನನ್ಯ ಪರಿಕಲ್ಪನೆಯಾಗಿತ್ತು. ಅದು ಜಗತ್ತಿನ ಬೇರೆ ಯಾವುದೇ ಭಾಗದಲ್ಲಿ ಕಂಡಿರದಂಥ ಒಂದು ಹೊಚ್ಚ ಹೊಸ ವಿದ್ಯಮಾನವಾಗಿತ್ತು. ವೈಭವೀಕರಿಸಿದ ಯುರೋಪಿಯನ್ ಮಾದರಿಗೆ ತದ್ವಿರುದ್ಧವಾಗಿ ಪ್ರಜಾಸತ್ತಾತ್ಮಕ ಹಾಗೂ ಸಮಾನತಾವಾದಿ ರಾಷ್ಟ್ರವಾದ ಅದರ ಸತ್ವವಾಗಿತ್ತು.



ನನ್ನ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳನ್ನು 'ರಾಷ್ಟ್ರ-ವಿರೋಧಿ' ಎಂದು ಆರೋಪಿಸಲಾಗಿರುವ ಈ ಸಂದರ್ಭದಲ್ಲಿ 'ರಾಷ್ಟ್ರೀಯ' ಎಂಬುದರ ಅರ್ಥವೇನು ಎಂದು ಕೇಳಬೇಕಾಗುತ್ತದೆ. ಬಹಳಷ್ಟು ಜನರು ಭಾವಿಸುವಂತೆ ಅದಕ್ಕೆ ಉತ್ತರ ಸರಳವಾದುದಲ್ಲ. 17ನೇ ಶತಮಾನದಲ್ಲಿ ವೆಸ್ಟ್‌ಫಾಲಿಯನ್ ಶಾಂತಿ ಒಪ್ಪಂದಗಳು ಆದ ಮೇಲೆ 'ರಾಷ್ಟ್ರೀಯ', 'ರಾಷ್ಟ್ರವಾದ' ಮತ್ತು 'ರಾಷ್ಟ್ರ-ಪ್ರಭುತ್ವ' ಪದಗಳು ಯುರೋಪ್‌ನಲ್ಲಿ ಚಾಲ್ತಿಗೆ ಬಂದವು. ಆದರೆ ಯುರೋಪಿಯನ್ 'ರಾಷ್ಟ್ರವಾದ'ಕ್ಕೆ ಮೂರು ಮುಖ್ಯ ಲಕ್ಷಣಗಳಿದ್ದವು. ಮೊದಲನೆಯದಾಗಿ, ಅದು ಯಾವತ್ತೂ 'ರಾಷ್ಟ್ರ' ಎಂಬ ಪ್ರಾದೇಶಿಕ ಪರಿಮಿತಿಯ ಒಳಗೂ ಎಲ್ಲಾ ಜನರನ್ನು ಒಳಗೊಂಡಿರಲಿಲ್ಲ. ಅದು ಯಾವಾಗಲೂ ಒಂದು 'ಆಂತರಿಕ ಶತ್ರುವನ್ನು' ಸೃಷ್ಟಿಸಿಕೊಂಡಿತ್ತು (ಉದಾಹರಣೆಗೆ ಯೆಹೂದಿಗಳು). ಎರಡನೆಯದಾಗಿ, ಅದು ಅವಶ್ಯವಾಗಿಯೂ ಸಾಮ್ರಾಜ್ಯಶಾಹಿ ಗುಣಹೊಂದಿತ್ತು. ವೆಸ್ಟ್‌ಫಾಲಿಯನ್ ಒಪ್ಪಂದವಾದ ಕೆಲವೇ ತಿಂಗಳುಗಳಲ್ಲಿ ಒಲಿವರ್ ಕ್ರಾಮ್‌ವೆಲ್ ಐರ್‌ಲ್ಯಾಂಡ್ ಮೇಲೆ ದಾಳಿ ಮಾಡಿದ (ಅದು ಪ್ರಪ್ರಥಮ ವಸಾಹತು ಆಕ್ರಮಣವಾಗಿತ್ತು) ಹಾಗೂ ಅದರ ಪೂರ್ಣ ಭೂಭಾಗವನ್ನು ಇಂಗ್ಲೆಂಡ್‌ಗಾಗಿ ಸ್ವಾಧೀನಪಡಿಸಿಕೊಂಡನು.

ಮುಂದಿನ ದಶಕಗಳಲ್ಲಿ, ಯುರೋಪ್‌ನ ಒಳಗಡೆ "ಶಾಂತಿಯುತ ಸಹಬಾಳ್ವೆ" ನಡೆಸುತ್ತಿದ್ದರೂ ತಮ್ಮ ತಮ್ಮದೇ ಆದ ಸಾಮ್ರಾಜ್ಯವನ್ನು ಕಟ್ಟುವ ಪ್ರಯತ್ನದ ಭಾಗವಾಗಿ ಯುರೋಪಿಯನ್ ಶಕ್ತಿಗಳು ಭಾರತದಂಥ ದೂರದ ದೇಶಗಳಲ್ಲಿ ತೀವ್ರ ಯುದ್ಧಗಳಲ್ಲಿ ತೊಡಗಿಸಿಕೊಂಡರು. ಮೂರನೆಯದಾಗಿ, ತನ್ನದೇ ಕಾರಣಕ್ಕಾಗಿ 'ರಾಷ್ಟ್ರ'ವನ್ನು ಸರ್ವೋತ್ಕೃಷ್ಟ ಎಂದು ಸಾರಲಾಯಿತು (ದೈವತ್ವಕ್ಕೇರಿಸಲಾಯಿತು). 'ರಾಷ್ಟ್ರ'ವನ್ನು ಬಲಪಡಿಸುವುದೇ ಅದರ ಹಿಂದಿನ ಯೋಚನೆಯಾಗಿತ್ತು. ವ್ಯಾಪಾರ ಪ್ರವೃತ್ತಿಯೊಂದೇ ಅದಕ್ಕೆ ಕಾರಣವಾಗಿರಲಿಲ್ಲ, ಅದು ರಾಜಕೀಯ ಅರ್ಥಶಾಸ್ತ್ರವನ್ನೂ ಒತ್ತಿಹೇಳುತ್ತದೆ. ಆಡಂ ಸ್ಮಿತ್‌ರ ಮಹಾಕೃತಿಯ ಹೆಸರು 'ರಾಷ್ಟ್ರಗಳ ಸಂಪತ್ತಿನ ಸ್ವರೂಪ ಮತ್ತು ಕಾರಣಗಳ ಕುರಿತ ಒಂದು ಅನ್ವೇಷಣೆ'. ರಾಷ್ಟ್ರಗಳ ಸಂಪತ್ತೆಂದರೆ ನಿಜವಾಗಲೂ ಏನು ಎಂಬ ಬಗ್ಗೆ ವ್ಯಾಪಾರೋದ್ಯಮಿಗಳೊಂದಿಗೆ ಸ್ಮಿತ್ ಭಿನ್ನಾಭಿಪ್ರಾಯ ಹೊಂದಿದ್ದರು. ಆದರೆ, ಜನರಿಗೆ ಏನು ಆಗುತ್ತದೋ ಬಿಡುತ್ತದೋ ಅದನ್ನು ಲೆಕ್ಕಿಸದೆ, ಸಂಪತ್ತನ್ನು ಹೆಚ್ಚಳ ಮಾಡುವ ಅಗತ್ಯದ ಬಗ್ಗೆ ವರ್ತಕರೊಂದಿಗೆ ಅವರಿಗೆ ಯಾವುದೇ ಭಿನ್ನಾಭಿಪ್ರಾಯ ಇರಲಿಲ್ಲ. ಹೀಗಾಗಿ ಯುರೋಪಿಯನ್ 'ರಾಷ್ಟ್ರೀಯತೆ'ಯನ್ನು ವೈಭವೀಕರಿಸಿದ ರಾಷ್ಟ್ರವಾದ ಎಂದು ಸಂಕ್ಷಿಪ್ತವಾಗಿ ಹೇಳಬಹುದು.

ರಾಷ್ಟ್ರವಾದದ ಪರಾಕಾಷ್ಠೆ ಫ್ಯಾಸಿಸಂ

ಈ ಕಾರಣಕ್ಕಾಗಿ ತುಂಬಾ ವಿಳಂಬವಾಗಿ ಜನ್ಮ ತಳೆದ ಹಾಗೂ ಆ ಕಾರಣಕ್ಕಾಗಿ ವೈಭವೀಕರಣದ ವಿಚಾರದಲ್ಲಿ ತಡವಾಗಿ ಕಂಡುಬಂದ ಜರ್ಮನಿಯಂಥ 'ರಾಷ್ಟ್ರ', ತನ್ನ ವೈಭವೀಕರಣದ ಗುರಿಯನ್ನು ಮುಂದೊತ್ತಲು ರಾಷ್ಟ್ರೀಯತೆಯನ್ನು ಪ್ರತಿಪಾದಿಸುವಲ್ಲಿ ಹೆಚ್ಚು ಭೀಷಣತೆಯನ್ನು ತೆೞರಿತು. ಈ ಇಡೀ ಪ್ರಕ್ರಿಯೆ ಫ್ಯಾಸಿಸಂನೊಂದಿಗೆ ಪರಾಕಾಷ್ಠೆಯನ್ನು ತಲುಪಿತು. ಈ ಕಾರಣಕ್ಕಾಗಿಯೇ ಯುರೋಪ್‌ನ ಪ್ರಗತಿಪರ ಮತ್ತು ಪ್ರಜಾಸತ್ತಾತ್ಮಕ ಪರಂಪರೆಯು ಇತ್ತೀಚಿನ ವರ್ಷಗಳಲ್ಲಿ ಎರಡು ಜಾಗತಿಕ ಯುದ್ಧಗಳ ಕಹಿ ಅನುಭವದ ನಂತರ ಯುರೋಪಿಯನ್ ಒಕ್ಕೂಟವನ್ನು ರಚಿಸುವ ಮೂಲಕ 'ರಾಷ್ಟ್ರವಾದ'ವನ್ನು ಮೀರಲು ಬಯಸುತ್ತಿದೆ. (ಅದು ಕೂಡ ನಿರೀಕ್ಷಿಸಿದಂತೆಯೇ, ಆಧುನಿಕ ಯುಗದಲ್ಲಿ ಹಣಕಾಸು ಬಂಡವಾಳದ ಹಿತಾಸಕ್ತಿಗಳೊಂದಿಗೆ ಸಮ್ಮಿಳಿತವಾದ ಹಾಗೂ ಅದರಿಂದ ಪ್ರಾಯೋಜಿತವಾದ ವೈಭವೀಕರಿಸಿದ ರಾಷ್ಟ್ರೀಯತೆಯನ್ನು ಅಲುಗಾಡಿಸಲಿಲ್ಲ).

ವಸಾಹತುಶಾಹಿ-ವಿರೋಧಿ ಹೋರಾಟದ ಸಮಯದಲ್ಲಿ ಭಾರತದಂಥ ದೇಶದಲ್ಲಿ ಬೆಳವಣಿಗೆ ಹೊಂದಿದ 'ರಾಷ್ಟ್ರವಾದ' ಅಪ್ಪಟವಾಗಿ ಒಂದು ಬೇರೆಯೇ ರೀತಿಯದ್ದು ಎಂದು ಗುರುತಿಸುವುದು ತುಂಬಾ ಮುಖ್ಯವಾಗುತ್ತದೆ. ಯಾಕೆಂದರೆ ಅಪಾರ ಶಕ್ತಿಯುತ ಪ್ರತಿಸ್ಪರ್ಧಿಯ ಅಂದರೆ ವಸಾಹತುಶಾಹಿ ಆಡಳಿತಗಾರರ ವಿರುದ್ಧದ ಹೋರಾಟದಲ್ಲಿ ಜನಸಮೂಹದ ಆದಷ್ಟು ಹೆಚ್ಚು ವಿಭಾಗಗಳನ್ನು ಒಳಗೊಳಿಸುವುದು ಅಗತ್ಯವಾಗಿತ್ತು. ಅದೇ ರೀತಿ, ಅಂಥದ್ದೇ ಇತರ ಹೋರಾಟಗಳ ಜತೆ ಅದು ಸೌಹಾರ್ದ ಬಾಂಧವ್ಯವನ್ನು ಬೆಳೆಸಿಕೊಳ್ಳಬೇಕಿತ್ತು. ಆ ಕಾರಣಕ್ಕಾಗಿ ಅದು ತೃತೀಯ ಜಗತ್ತಿನ ಇತರ ದೇಶಗಳ ಜತೆ ವೈಭವೀಕರಣದ ಬದಲು ಸೌಹಾರ್ದ ಸಂಬಂಧವನ್ನು ಇಟ್ಟುಕೊಳ್ಳಬೇಕಾಗಿತ್ತು. ಅಂತಿಮವಾಗಿ, 'ರಾಷ್ಟ್ರ'ದ ಮಹೋನ್ನತಿಗಿಂತ ಭಿನ್ನವಾಗಿ 'ಜನರ' ಕಲ್ಯಾಣಕ್ಕೆ ಪ್ರಧಾನ ಆದ್ಯತೆ ನೀಡುವುದು ಅಗತ್ಯವಾಗಿತ್ತು. ಈ ವಾಸ್ತವವನ್ನು ಮಹಾತ್ಮಾ ಗಾಂಧಿ ಸೂಕ್ತವಾಗಿ ಸ್ಪಷ್ಟಪಡಿಸಿದ್ದಾರೆ. "ಪ್ರತಿ ಭಾರತೀಯನ ಕಣ್ಣೀರು ಒರೆಸುವುದು" ಸ್ವಾತಂತ್ರ್ಯದ ಗುರಿ ಎಂದವರು ಹೇಳಿದ್ದರು.

ಸಮಾನತಾವಾದಿ ರಾಷ್ಟ್ರವಾದ

ವಸಾಹತುಶಾಹಿ ವಿರೋಧಿ ಹೋರಾಟದ ವೇಳೆ ಭಾರತದಲ್ಲಿ ಬೆಳೆದ ರಾಷ್ಟ್ರವಾದ ಒಂದು ಅನನ್ಯ ಪರಿಕಲ್ಪನೆಯಾಗಿತ್ತು. ಅದು ಜಗತ್ತಿನ ಬೇರೆ ಯಾವುದೇ ಭಾಗದಲ್ಲಿ ಕಂಡಿರದಂಥ ಒಂದು ಹೊಚ್ಚ ಹೊಸ ವಿದ್ಯಮಾನವಾಗಿತ್ತು. ವೈಭವೀಕರಿಸಿದ ಯುರೋಪಿಯನ್ ಮಾದರಿಗೆ ತದ್ವಿರುದ್ಧವಾಗಿ ಮೂಲಭೂತವಾಗಿ ಪ್ರಜಾಸತ್ತಾತ್ಮಕ ಹಾಗೂ ಸಮಾನತಾವಾದಿ ರಾಷ್ಟ್ರವಾದ ಆಗಿತ್ತು.

ಭಾರತದ ರಾಷ್ಟ್ರೀಯತೆಯ ಪರಿಕಲ್ಪನೆ ಅನನ್ಯವಾದುದು ಎಂದು ಹೇಳಿದ ಮಾತ್ರಕ್ಕೆ (ಗ್ರೀಕ್ ಪುರಾಣಗಳ) 'ಝುಸ್'ನ ತಲೆಯಿಂದ 'ಅಥೆನಾ' ರೂಪುಗೊಂಡಂತೆ ಅದರ ಬಗ್ಗೆ ಸುಂದರ ಚಿತ್ರಣ ನೀಡಲಾಗುತ್ತಿದೆ ಎಂದು ಭಾವಿಸಬಾರದು. ಖಂಡಿತವಾಗಿಯೂ ಇದರ ಒಳಗಡೆಯೂ ವೈಭವೀಕರಣದ ಸ್ವಲ್ಪ ಅಂಶವಿದೆ. ಆದರೆ ವೈಭವೀಕರಿಸಿದ ರಾಷ್ಟ್ರವಾದದ ಪ್ರತಿಯೊಂದು ಅತಿಕ್ರಮಣವು 'ರಾಷ್ಟ್ರ ಕಟ್ಟುವ' ಯೋಜನೆಗೆ ಹಾನಿ ಮಾಡುವ ಅವಕಾಶಗಳನ್ನು ಒಳಗೊಂಡಿದೆ. 'ರಾಷ್ಟ್ರ ಕಟ್ಟುವ' ಯೋಜನೆ ಯಶಸ್ವಿಯಾಗಬೇಕಾದರೆ, ವಸಾಹತುಶಾಹಿ ಮುಗಿದು ಬಹಳ ಸಮಯ ಆಗಿದ್ದರೂ, ಅದು ಅಗತ್ಯವಾಗಿಯೂ ಎಲ್ಲರನ್ನೂ ಒಳಗೊಳ್ಳುವ ಪ್ರಜಾಸತ್ತಾತ್ಮಕ ರಾಷ್ಟ್ರವಾದ ಆಗಿ ಮುಂದುವರೆಯಬೇಕು.

ವಿಭಜನೆಯ ಆ ಭೀಕರ ಹಿನ್ನೆಲೆಯಲ್ಲಿ ಹಾಗೂ ಕಾಂಗ್ರೆಸ್ ಮುಖಂಡರ ತಕರಾರಿನ ನಡುವೆಯೂ ಪಾಕಿಸ್ತಾನಕ್ಕೆ ಸಲ್ಲಬೇಕಾದ ಪೂರ್ಣ ಹಣವನ್ನು ಪಾವತಿ ಮಾಡಬೇಕು ಎಂದು ಗಾಂಧೀಜಿ ತಮ್ಮ ಅಂತಿಮ ದಿನಗಳಲ್ಲಿ ಪ್ರತಿಪಾದಿಸಿದರು ಎಂದ ಮಾತ್ರಕ್ಕೆ ಅವರು 'ರಾಷ್ಟ್ರ-ವಿರೋಧಿ' ಆಗಿರಲಿಲ್ಲ. ವಸಾಹತುಶಾಹಿ-ವಿರೋಧಿ ಹೋರಾಟದೊಂದಿಗೆ ಬೆಳೆದುಬಂದ ಪ್ರಜಾಸತ್ತಾತ್ಮಕ 'ರಾಷ್ಟ್ರೀಯತೆ'ಗೆ ಅನುಗುಣವಾಗಿ ಅವರು ತಮ್ಮ ನಿಲುವನ್ನು ತಾಳಿದ್ದರು, ಅಷ್ಟೇ. ಸಹಿಷ್ಣುತೆ, ಎಲ್ಲಾ ಅಭಿಪ್ರಾಯಗಳನ್ನು ಗೌರವಿಸುವುದು ಮತ್ತು ಭಿನ್ನಮತದ ಸಂದರ್ಭದಲ್ಲಿ ಮಾತುಕತೆ ನಡೆಸುವುದು, ಯಾರದಾದರೂ ಧ್ವನಿಯನ್ನು ಅಡಗಿಸಿ ನಮ್ಮ ಪಾರುಪತ್ಯ ಸ್ಥಾಪಿಸಲು ಹೇಯ ಬಲವನ್ನು ಬಳಸದಿರುವುದು ಈ ರಾಷ್ಟ್ರೀಯತೆಯ ಪ್ರಮುಖ ಸಾರವಾಗಿದೆ.

ದೇಶದ ಒಂದು ಭಾಗದ ಜನರು ಭಾರತ-ವಿರೋಧಿ ಘೋಷಣೆಗಳನ್ನು ಕೂಗಿದರೆ, ಅಲ್ಲಿ ಭಯೋತ್ಪಾದನೆ ಅಥವಾ ಹಿಂಸೆ ಅಥವಾ ಹಿಂಸೆಗೆ ಪ್ರಚೋದನೆಗೆ ಇಲ್ಲದಿದ್ದರೆ ಅದು ವಿರೋಧಾಭಾಸಗಳನ್ನು ಪರಿಹರಿಸಿಕೊಳ್ಳಲು ಆತ್ಮಾವಲೋಕನಕ್ಕೆ ಮತ್ತು ವಿಮರ್ಶೆಗೆ ಒಂದು ಅವಕಾಶ ಎಂದು ಭಾವಿಸಬೇಕು ಎಂದು ಈ ರಾಷ್ಟ್ರವಾದ ಬಯಸುತ್ತದೆ. ಬದಲು ವಸಾಹತುಶಾಹಿಯಿಂದ ಬಳುವಳಿಯಾಗಿ ಬಂದ ಕುಖ್ಯಾತ ದೇಶದ್ರೋಹದ ಕಾನೂನನ್ನು ಬಳಸಿ ದಮನ ಮಾಡುವುದಲ್ಲ.

ಬಿಜೆಪಿಯ ರಾಷ್ಟ್ರವಾದ

ಆದರೆ ಈಗ ಕಳವಳಕಾರಿ ಸಂಗತಿಯೇನೆಂದರೆ, ಭಾರತೀಯ ಜನತಾ ಪಕ್ಷ (ಬಿಜೆಪಿ) ಎರಡನೆ ಮಾದರಿಯ ಪ್ರಜಾಸತ್ತಾತ್ಮಕ ರಾಷ್ಟ್ರವಾದದ ಸ್ಥಾನದಲ್ಲಿ ಒಂದನೆ ಮಾದರಿಯ ವೈಭವೀಕರಿಸಿದ ರಾಷ್ಟ್ರವಾದವನ್ನು ತರಲು ಯತ್ನಿಸುತ್ತಿದೆ. ಪ್ರಜಾಸತ್ತಾತ್ಮಕ ರಾಷ್ಟ್ರವಾದವು ಭಾರತೀಯ ಪ್ರಭುತ್ವದ ಪರಿಕಲ್ಪನೆಗೆ ಆಧಾರವಾಗಿದೆ. ಇನ್ನೂ ಕೆಟ್ಟದ್ದೆಂದರೆ ಎರಡನೇ ಮಾದರಿಯ ರಾಷ್ಟ್ರವಾದದ ಅಸ್ತಿತ್ವವನ್ನೇ ನಿರಾಕರಿಸಲಾಗುತ್ತಿದೆ. 'ರಾಷ್ಟ್ರೀಯ' ಮತ್ತು 'ರಾಷ್ಟ್ರ-ವಿರೋಧಿ' ಪದಗಳನ್ನು ಸಂಪೂರ್ಣವಾಗಿ ರಾಷ್ಟ್ರವಾದದ ಮೊದಲ ಮಾದರಿಯ ಸಂದರ್ಭದಲ್ಲಿ ಬಳಸಲಾಗುತ್ತಿದೆ.

ವಸಾಹತು-ವಿರೋಧಿ ಹೋರಾಟದ ಪ್ರಜಾಸತ್ತಾತ್ಮಕ ರಾಷ್ಟ್ರವಾದವನ್ನು ನನಸುಗೊಳಿಸುವುದು ನಿಸ್ಸಂಶಯವಾಗಿಯೂ ಸುಲಭದ ಮಾತಲ್ಲ. ಅಸಮಾನತೆ ಮತ್ತು ಬಡತನವನ್ನು ತಂದಿಕ್ಕುವ ಪ್ರವೃತ್ತಿಯ ವಿಶ್ವವ್ಯಾಪಿ ಗುಣಹೊಂದಿರುವ ಲಂಗುಲಗಾಮಿಲ್ಲದ ಬಂಡವಾಳಶಾಹಿಯು, ಈ ರಾಷ್ಟ್ರವಾದವನ್ನು ಸಾಕಾರಗೊಳಿಸುವ ಸೂಕ್ತ ಆರ್ಥಿಕ ಚೌಕಟ್ಟನ್ನು ಹೊಂದಿರಲು ಸಾಧ್ಯವಿಲ್ಲ. ಆ ಕಾಲದ ಮಹಾನ್ ನಾಯಕರಾದ ಗಾಂಧಿ, ನೆಹರೂ ಮತ್ತು ಬಿ.ಆರ್. ಅಂಬೇಡ್ಕರ್ ಅವರೇ ಈ ವಾಸ್ತವವನ್ನು ಗುರುತಿಸಿದ್ದರು (ಅದಕ್ಕೆ ಅಗತ್ಯವಾದ ಚೌಕಟ್ಟು ಯಾವುದು ಎಂಬುದರ ಬಗ್ಗೆ ಈ ಎಲ್ಲಾ ನಾಯಕರು ತಮ್ಮದೇ ಆದ ವಿಭಿನ್ನ ನಿಲುವುಗಳನ್ನು ಹೊಂದಿದ್ದರು).

ಆದರೂ ದೇಶದಲ್ಲಿ ಪ್ರಭುತ್ವದ ನಿರ್ಬಂಧಗಳು ಮತ್ತು ಸಾರ್ವಜನಿಕ ವಲಯಗಳಿಂದ ಸುತ್ತುವರೆದ ಬಂಡವಾಳಶಾಹಿ ಸ್ಥಾಪಿತವಾಯಿತು. ಕಾಲಕ್ರಮೇಣ ಜಾಗತೀಕರಣಗೊಂಡ ಹಣಕಾಸು ಬಂಡವಾಳದ ಪಾರುಪತ್ಯ ಹೆಚ್ಚಾಗಿ ನವ-ಉದಾರವಾದಿ ನೀತಿಗಳನ್ನು ಅಳವಡಿಸಿಕೊಂಡಂತೆಲ್ಲಾ ಈ ನಿರ್ಬಂಧಗಳನ್ನು ಕೂಡ ತೆಗೆಯಲಾಯಿತು.

ವೈಭವೀಕರಿಸಿದ ರಾಷ್ಟ್ರವಾದದತ್ತ ಸನ್ನಿವೇಶ ಬದಲಾಗಿರುವುದಕ್ಕೂ ದೇಶದಲ್ಲಿ ನವ-ಉದಾರವಾದಿ ಬಂಡವಾಳ ಮೇಲೆದ್ದು ಬಂದಿರುವುದಕ್ಕೂ ಸಂಬಂಧವಿದೆ. ವೈಭವೀಕರಿಸಿದ ರಾಷ್ಟ್ರವಾದವನ್ನು ಪ್ರಾಯೋಜಿಸುವ ಬಿಜೆಪಿ ನವ-ಉದಾರವಾದಿ ಬಂಡವಾಳದ ಪ್ರತಿಪಾದಕನಾಗಿದೆ. ವೈಭವೀಕರಣದ ರಾಷ್ಟ್ರವಾದವನ್ನು ಪ್ರತಿಪಾದಿಸುವ ಒಂದು ರಾಜಕೀಯ ಪಕ್ಷ ಅಧಿಕಾರಕ್ಕೆ ಬರಲು ಕಾರಣವಾದ ಸನ್ನಿವೇಶಗಳು ಏನೇ ಇರಲಿ, ಇಂಥ ಒಂದು ರಾಷ್ಟ್ರವಾದವು ಮೂಲಭೂತವಾಗಿ ಒಂದು ಭಾರತೀಯ ರಾಷ್ಟ್ರವನ್ನು ಕಟ್ಟುವ ಯೋಜನೆಗೇ ವಿರುದ್ಧವಾದುದಾಗಿದೆ.

ಉತ್ಕೃಷ್ಟ ಸಂಸ್ಥೆಗಳ ವಿನಾಶ

ಮೊದಲಿಗೆ ಒಂದು ಸ್ಪಷ್ಟವಾದ ಅಂಶವನ್ನು ಪರಿಶೀಲಿಸೋಣ. ಪುಣೆ ಫಿಲ್ಮ್ ಇನ್ಸ್ಟಿಟ್ಯೂಟ್, ಹೈದರಾಬಾದ್ ಕೇಂದ್ರೀಯ ವಿಶ್ವವಿದ್ಯಾನಿಲಯ, ಜವಾಹರಲಾಲ್ ನೆಹರೂ ವಿಶ್ವವಿದ್ಯಾನಿಲಯ ಮತ್ತು ಬರೋಡಾದ ಎಂಎಸ್ ವಿಶ್ವವಿದ್ಯಾಲಯದ ಫೈನ್ ಆರ್ಟ್ಸ್ ವಿಭಾಗದ ವಿದ್ಯಾರ್ಥಿಗಳನ್ನು ಬೆದರಿಸುವ ಸರಕಾರವೊಂದು ನಮ್ಮಲ್ಲಿದೆ. ಈ ಶಿಕ್ಷಣ ಸಂಸ್ಥೆಗಳು ನಮ್ಮ ದೇಶದ ಅತ್ಯುತ್ತಮ ಸಂಸ್ಥೆಗಳಲ್ಲಿ ಕೆಲವಾಗಿವೆ. ಈ ಸಂಸ್ಥೆಗಳನ್ನು ನಾಶಮಾಡಿದರೆ ನಮ್ಮ ದೇಶ ಮೆಟ್ರೋಪಾಲಿಟನ್ ದೇಶಗಳ ಸಂಸ್ಥೆಗಳನ್ನು ಅವಲಂಬಿಸುವ ಪರೋಪಜೀವಿ ದೇಶವಾಗಿ ಮಾರ್ಪಡುತ್ತದೆ.

ಸಂಕ್ಷಿಪ್ತವಾಗಿ ಹೇಳಬೇಕೆಂದರೆ, 'ರಾಷ್ಟ್ರವಾದ'ದ ಹೆಸರಿನಲ್ಲಿ ವಿರೋಧಾಭಾಸವೆಂಬಂತೆ ನಾವು ನಮ್ಮ ದೇಶವನ್ನು ಮುಂದುವರಿದ ದೇಶಗಳ ಪರೋಪಜೀವಿಯನ್ನಾಗಿ ಮಾಡುತ್ತಿದ್ದೇವೆ. ಆದರೆ ಇದರಿಂದ ತೃತೀಯ ಜಗತ್ತಿನಲ್ಲಿ ಸಹಿಷ್ಣುತೆ ಬದಲು ದಬ್ಬಾಳಿಕೆಗೆ ಆದ್ಯತೆ ನೀಡುವ ವೈಭವೀಕರಣದ ರಾಷ್ಟ್ರವಾದವು ಅನಿವಾರ್ಯವಾಗಿ ಮೇಲೆದ್ದು ಬರುತ್ತದೆ. ವೈಭವೀಕರಣದ ರಾಷ್ಟ್ರವಾದವು ಪ್ರಜಾಪ್ರಭುತ್ವ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ನಿರ್ಬಂಧಿಸುವುದು ಮಾತ್ರವೇ ಅಲ್ಲದೆ ನಾವೀಗಾಗಲೇ ನೋಡಿದಂತೆ ಕಾನೂನನ್ನು ತನ್ನ ಕೈಗೆ ತೆಗೆದುಕೊಂಡು ಜನರನ್ನು ಕೊಚ್ಚಿಹಾಕುತ್ತದೆ. ಯುವ ಆದರ್ಶವಾದಿ ಮತ್ತು ಸೂಕ್ಷ್ಮ ಮನಸ್ಸಿನ ವಿದ್ಯಾರ್ಥಿಗಳ ವಿರುದ್ಧ ಕೂಡ ದೇಶದ್ರೋಹದ ಕಾನೂನನ್ನು ಅನ್ವಯಿಸುತ್ತದೆ. ವ್ಯಕ್ತಿತ್ವಕ್ಕೆ ಮಸಿಬಳಿದು ಸಾರ್ವಜನಿಕರ ದೃಷ್ಟಿಯಲ್ಲಿ ಅಪಖ್ಯಾತಿ ತರಲು ಅಮಾಯಕ ಜನರ ವಿರುದ್ಧ ಸುಳ್ಳು ಸುದ್ದಿ ಹಾಗೂ ತಪ್ಪು ಮಾಹಿತಿಗಳನ್ನು ಯಾವುದೇ ಎಗ್ಗಿಲ್ಲದೆ ಹರಿಬಿಡುತ್ತದೆ. ಅದು ಅನಿವಾರ್ಯವಾಗಿ ಅಷ್ಟೇ ತೀಕ್ಷ್ಣವಾದ ಪ್ರತಿಕ್ರಿಯೆಗಳನ್ನು ಹುಟ್ಟುಹಾಕುತ್ತದೆ. ಅದರ ಪರಿಣಾಮವಾಗಿ ದಬ್ಬಾಳಿಕೆ ಇನ್ನಷ್ಟು ಹೆಚ್ಚುತ್ತದೆ, ಅದಕ್ಕೂ ಬಲವಾದ ಪ್ರತಿಕ್ರಿಯೆ ಉಂಟಾಗುತ್ತದೆ... ಹೀಗೆ ಇದು ಮುಂದುವರಿಯುತ್ತದೆ.

ತೃತೀಯ ಜಗತ್ತಿನ ದೇಶವೊಂದರಲ್ಲಿ 'ರಾಷ್ಟ್ರ ನಿರ್ಮಾಣ'ದ ಯೋಜನೆಯು ಈ ರೀತಿಯ ಅನಾಹುತಕಾರಿ ದ್ವಂದ್ವಗಳನ್ನು ತಾಳಿಕೊಂಡೀತು ಎಂದು ನಂಬುವುದು ಹಗಲುಗನಸಾಗುತ್ತದೆ. ವಾಸ್ತವವಾಗಿ ತೃತೀಯ ಜಗತ್ತು ತಥಾಕಥಿತ 'ವಿಫಲ ಪ್ರಭುತ್ವ'ಗಳಿಂದ ತುಂಬಿಹೋಗಿದೆ. ಈ ತಥಾಕಥಿತ 'ವಿಫಲ ಪ್ರಭುತ್ವ'ಗಳ ಹಿಂದೆ ನಿಸ್ಸಂಶಯವಾಗಿಯೂ ಮೆಟ್ರೊಪಾಲಿಟನ್ ಶಕ್ತಿಗಳ ಕೈವಾಡ ಇರುವುದನ್ನು ಕಾಣಬಹುದು. ಆದರೆ, ಆಂತರಿಕ ಕಲಹಗಳಲ್ಲಿ ಅವರ ಕಾರ್ಯಾಚರಣೆಯ ರೀತಿ ಮಾತ್ರ ಖಂಡಿತವಾಗಿಯೂ ಭಿನ್ನವಾಗಿರುತ್ತವೆ.

ಯುರೋಪ್‌ನ ವೈಭವೀಕರಣದ ರಾಷ್ಟ್ರವಾದ ಮತ್ತು ನಮ್ಮ ಸಂದರ್ಭದಲ್ಲಿ ಹೇರಲಾಗುತ್ತಿರುವ ಅದರ ಅವತಾರದ ನಡುವೆ ಒಂದು ದೊಡ್ಡ ವ್ಯತ್ಯಾಸವಿದೆ. ಯುರೋಪ್‌ನ ವಿಸ್ತರಣಾವಾದಿ ರಾಷ್ಟ್ರವಾದವು ಗುರುತಿಸಿದ 'ಒಳಗಿನ ಶತ್ರು' ಅಲ್ಪಸಂಖ್ಯಾತರ ಅತಿಸೂಕ್ಷ್ಮ ವಿಭಾಗ ಆಗಿತ್ತು (ನಾಜಿ ಜರ್ಮನಿ ವಿಚಾರದಲ್ಲಿ ಕೂಡ ಇದು ಸತ್ಯವೇ. ಯೆಹೂದಿಗಳ ಸಂಖ್ಯೆ ಜರ್ಮನಿಯ ಒಟ್ಟು ಜನಸಂಖ್ಯೆಯ ಸುಮಾರು 0.07 ಶೇಕಡಾ ಮಾತ್ರ ಆಗಿತ್ತು). ಭಾರತದಲ್ಲಿ ವಿಸ್ತರಣಾವಾದಿ ರಾಷ್ಟ್ರವಾದವು ಗುರಿಯಾಗಿರಿಸಿಕೊಂಡಿರುವ ಆ 'ಆಂತರಿಕ ಶತ್ರು' ಇನ್ನೂ ದೊಡ್ಡದೇ ಆಗಿದೆ. ಇಂಥ 'ರಾಷ್ಟ್ರವಾದ' ತರುವಂಥ ಸಾಮಾಜಿಕ ಒಡಕು ಅದೇ ಪ್ರಮಾಣದಲ್ಲಿ ದೊಡ್ಡದಾಗಿರುತ್ತದೆ. ಇಂಥ 'ವಿಫಲ ಪ್ರಭುತ್ವ'ದ ಗತಿ ಭಾರತಕ್ಕೆ ಬರದಿರುವಂತಾಗಲು ಇಂಥ 'ರಾಷ್ಟ್ರವಾದ'ವನ್ನು ಕೂಡಲೇ ಕೂಡಲೇ ಕಡಿವಾಣ ಹಾಕುವುದು ಅಗತ್ಯ.

(ಪ್ರೊಫೆಸರ್ ಪ್ರಭಾತ್ ಪಟ್ನಾಯಕ್ ನವದೆಹಲಿ ಜೆಎನ್‌ಯುನ ಆರ್ಥಿಕ ಅಧ್ಯಯನಗಳು ಮತ್ತು ಯೋಜನಾ ಕೇಂದ್ರದ ಪ್ರೊಫೆಸರ್ ಎಮಿರಿಟಸ್)

ಮೋದಿ ಸಂಪುಟದ ಮತ್ತೊಬ್ಬ ಮಂತ್ರಿಯ ಹಗೆ ಭಾಷಣ

> **ಸಂವಿಧಾನ ಮತ್ತು ಕಾನೂನಿನ ಆಳ್ವಿಕೆಗೆ ಕಿಂಚಿತ್ತಾದರೂ ಬದ್ಧತೆಯಿದ್ದರೆ ಮೋದಿ ಸರಕಾರ ಆತನನ್ನು ಮಂತ್ರಿ ಸ್ಥಾನದಿಂದ ಕಿತ್ತು ಹಾಕಬೇಕು.**
>
> **ಪ್ರಕಾಶ ಕಾರಟ್**

ಮೋದಿ ಸರಕಾರದ ಮಂತ್ರಿಯೊಬ್ಬ ಕೋಮು ಪ್ರಚೋದನೆಯ ಭಾಷಣ ಮಾಡಿ ತನ್ನ ಅಧಿಕಾರದ ಪ್ರಮಾಣ ವಚನವನ್ನು ಉಲ್ಲಂಘಿಸುವ ದೃಶ್ಯ ಈಗ ಒಂದು ನಿಯತ ಲಕ್ಷಣವಾಗಿ ಬಿಟ್ಟಿದೆ. ಆದರೂ ಕೂಡ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಯ ರಾಜ್ಯಮಂತ್ರಿ ರಾಮ ಶಂಕರ್ ಕಥೇ-ರಿಯಾ ಆಗ್ರಾದಲ್ಲಿ ಮುಸ್ಲಿಮರ ವಿರುದ್ಧ ಮಾಡಿರುವ ಹಗೆಯುಗುಳುವ ಭಾಷಣವನ್ನು ಅತ್ಯಂತ ಗಂಭೀರವಾಗಿ ನೋಡಬೇಕಾಗುತ್ತದೆ.

ಕಥೇರಿಯ ವಿಶ್ವ ಹಿಂದೂ ಪರಿಷದ್ ಇತ್ತೀಚೆಗೆ ಕೊಲೆಯಾದ ತನ್ನ ಒಬ್ಬ ಕಾರ್ಯಕರ್ತನ ಶ್ರದ್ಧಾಂಜಲಿಗೆಂದು ಏರ್ಪಡಿಸಿದ್ದ ಸಭೆಯಲ್ಲಿ ಭಾಗವಹಿಸಿದ್ದರು. ಅದರಲ್ಲಿ ಮುಸ್ಲಿಮರ ವಿರುದ್ಧ ಪ್ರತೀಕಾರದ ದಾಳಿಗೆ ಕರೆ ನೀಡಿದ್ದ ಭಾಷಣಕಾರರಲ್ಲಿ ಆತನೂ ಒಬ್ಬ. "ನಾವು ನಮ್ಮನ್ನು ಬಲಿಷ್ಟರಾಗಿಸಿಕೊಳ್ಳಬೇಕು. ನಾವೊಂದು ಹೋರಾಟವನ್ನು ಆರಂಭಿಸಬೇಕು. ಒಂದು ಹೋರಾಟವನ್ನು ನಾವು ಆರಂಭಿಸದಿದ್ದರೆ, ನಾವೀಗ ಒಬ್ಬ ಅರುಣನನ್ನು ಕಳಕೊಂಡಿದ್ದೇವೆ, ನಾಳೆ ಇನ್ನೊಬ್ಬನನ್ನು ಕಳಕೊಳ್ಳುತ್ತೇವೆ. ಇನ್ನೊಬ್ಬನನ್ನು ಕಳಕೊಳ್ಳುವ ಮೊದಲು ಈ ಕೊಲೆಗಡುಕರೇ ಕಾಣೆಯಾಗುವಂತಹ ಶಕ್ತಿಯನ್ನು ತೋರಿಸಬೇಕು" ಎಂದು ಆತ ಹೇಳಿದರು. ಅದೇ ಧಾಟಿಯಲ್ಲಿ ಮುಂದುವರೆಯುತ್ತ ಆತ ಬೇರೆ ಪ್ರಚೋದಕ ಟಿಪ್ಪಣಿಗಳನ್ನೂ ಮಾಡಿದರು. ಇನ್ನೊಬ್ಬ ಬಿಜೆಪಿ ಸಂಸದ "ಚುನಾವಣೆಗಳು 2017ರಲ್ಲಿ ಸಮೀಪಿಸುತ್ತಿವೆ, ನಿಮ್ಮ ಶಕ್ತಿ ತೋರಿಸಲು ಆರಂಭಿಸಿ" ಎಂದರು.

ಸಪ್ಟಂಬರ್ 2013 ರಲ್ಲಿ ಮುಝಫ್ಫರ್‌ನಗರದಲ್ಲಿ ಭೀಕರ ಕೋಮು ಹಿಂಸಾಚಾರ ಭುಗಿಲೇಳುವ ಮೊದಲು ಅಲ್ಲಿ ಏರ್ಪಡಿಸಿದ್ದ ಮಹಾಪಂಚಾಯತ್‌ನಲ್ಲಿ ಇಂತಹುದೇ ಭಾಷಣಗಳನ್ನು ಮಾಡಲಾಗಿತ್ತು. ಮೋದಿ ಸಂಪುಟದ ಒಬ್ಬ ಮಂತ್ರಿಯೇ ಇಂತಹ ಕೋಮು ಹಿಂಸಾಚಾರವನ್ನು ಪ್ರಚೋದಿಸುತ್ತಿದ್ದಾರೆ ಎಂಬುದನ್ನು ಯಾವ ರೀತಿಯಲ್ಲೂ ಕ್ಷಮಿಸಲು ಸಾಧ್ಯವಿಲ್ಲ. ಹಿಂಸಾಚಾರಕ್ಕೆ ಕಥೇರಿಯಾ ಪ್ರಚೋದನೆ ಒಂದು ಕ್ಷಣಿಕ ಚ್ಯುತಿ ಎಂದು ನೋಡುವುದು ತಪ್ಪಾಗುತ್ತದೆ. ಇವೆಲ್ಲಾ ಪ್ರಧಾನ ಮಂತ್ರಿಗಳು ಮಧ್ಯಪ್ರವೇಶ ಮಾಡಿ, ತನ್ನ ಮಂತ್ರಿಗಳ ಮೇಲೆ ಕಡಿವಾಣ ಹಾಕಿದರೆ ನಿಂತು ಹೋಗುತ್ತವೆ ಎಂದು ಈಗಲೂ ಯೋಚಿಸುವವರಿದ್ದಾರೆ.

ಆದರೆ ವಾಸ್ತವ ಸಂಗತಿ ಬೇರೆಯೇ ಆಗಿದೆ. ಮೋದಿ ಸಂಪುಟದಲ್ಲಿ ತಮ್ಮ ಆರೆಸ್ಸೆಸ್ ಮತ್ತು ಹಿಂದುತ್ವದ ಸಂಬಂಧಗಳಿಂದ ಪ್ರೇರಿತರಾಗಿ ಕೋಮುವಾದಿ ಅಬ್ಬರವನ್ನು ಚಿಮ್ಮಿಸುವುದಷ್ಟೇ ಅಲ್ಲ, ಅದರಂತೆ ವರ್ತಿಸುವ ಮಂತ್ರಿಗಳಿಂದ ತುಂಬಿದೆ. ಸಂಜೀವ ಬಲಿಯಾನ್‌ನನ್ನು ಸಂಪುಟಕ್ಕೆ ಸೇರಿಸಿದಾಗ ಆತ ಯಾರು ಎಂಬುದು ಪ್ರಧಾನ ಮಂತ್ರಿಗಳಿಗೆ ಚೆನ್ನಾಗಿಯೇ ಗೊತ್ತಿತ್ತು. ಆತ ಮುಝಫ್ಫರ್‌ನಗರ ಗಲಭೆಗಳಲ್ಲಿ ಒಬ್ಬ ಆಪಾದಿತ. ಅವರಂತೆ ಗಿರಿರಾಜ ಕಿಶೋರ್, ನಿರಂಜನ ಜ್ಯೋತಿಯಂತವರೂ ಕೋಮುವಾದಿ ನಡೆ ಮತ್ತು ಕೋಮುವಾದಿ ಉದ್ವೇಗಗಳನ್ನು ಬಡಿದೆಬ್ಬಿಸುವ ಪ್ರವೃತ್ತಿ ಹೊಂದಿಯೂ ಸಂಪುಟದಲ್ಲಿ ಇದ್ದಾರೆ.

ಇನ್ನು ಕಥೇರಿಯಾ ಬಗ್ಗೆ ಹೇಳುವುದಾದರೆ ಆತ ತಪ್ಪು ಕಾರಣಗಳಿಗಾಗಿ ಈಗಾಗಲೇ ಸುದ್ದಿಯಲ್ಲಿರುವವರು. ನಕಲಿ ಎಂ.ಎ. ಅಂಕಪಟ್ಟಿಯನ್ನು ಕೊಟ್ಟಿರುವ, ತನ್ನ ಶೈಕ್ಷಣಿಕ ಅರ್ಹತೆಯಲ್ಲಿ ಮೋಸ ಮಾಡಿರುವ ಆಪಾದನೆ ಆತನ ಮೇಲಿದೆ. 2011ರಲ್ಲಿ ಒಂದು ಮ್ಯಾಜಿಸ್ಟ್ರೇಟ್ ಕೋರ್ಟು ಆತ ತಪ್ಪಿತಸ್ಥ ಎಂದು ತೀರ್ಪಿತ್ತಿತ್ತು. ನಂತರ 2014ರಲ್ಲಿ ಸೆಶನ್ಸ್ ಕೋರ್ಟ್ ಅದನ್ನು ತಳ್ಳಿ ಹಾಕಿತು. ಸ್ಮೃತಿ ಇರಾನಿ, ಕಥೇರಿಯಾರಂತವರನ್ನು ಮಾನವ ಸಂಪನ್ಮೂಲ ಇಲಾಖೆಯಲ್ಲಿ ಇಟ್ಟಿರುವುದು ಅವರ ಶೈಕ್ಷಣಿಕ ಅರ್ಹತೆಗಳಿಂದಾಗಿ ಅಲ್ಲ, ಬದಲಾಗಿ ಶಿಕ್ಷಣದಲ್ಲಿ ಹಿಂದುತ್ವ ಅಜೆಂಡಾವನ್ನು ಜಾರಿ ಮಾಡುವ ಏಕೈಕ ಉದ್ದೇಶಕ್ಕಾಗಿ.

ಕೇಂದ್ರ ಸಂಪುಟದಿಂದಲೇ ಸಂವಿಧಾನವನ್ನು ಬುಡಮೇಲು ಮಾಡುವ, ಕಾನೂನಿನ ನಿರೂಪಣೆಯನ್ನೇ ಪುನರ್ರೂಪಿಸುವ ಪ್ರಯತ್ನಗಳು ನಡೆಯುತ್ತಿವೆ. ಹೀಗೆ, ಅಲ್ಪಸಂಖ್ಯಾತರ ವಿರುದ್ಧ ಪ್ರಚೋದಿಸುವುದು 'ರಾಷ್ಟ್ರವಾದ' ಆಗುತ್ತದೆ, ಭಾರತ ಮಾತೆಗೆ ನಮನ ಆಗುತ್ತದೆ, ಆದರೆ ಜಾತ್ಯತೀತತೆ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ 'ರಾಷ್ಟ್ರ-ವಿರೋಧಿ'ಯಾಗುತ್ತದೆ, ರಾಜದ್ರೋಹವಾಗುತ್ತದೆ. ರಾಜನಾಥ್ ಸಿಂಗ್ ಮತ್ತು ಸ್ಮೃತಿ ಇರಾನಿಯಂತವರೂ ಸೇರಿದಂತೆ ನರೇಂದ್ರ ಮೋದಿಯವರ ದರ್ಬಾರಿನಲ್ಲಿನ ಮಂತ್ರಿಗಳು ದಲಿತ ಮತ್ತು ಎಡಪಂಥೀಯ ವಿದ್ಯಾರ್ಥಿ ಕಾರ್ಯಕರ್ತರಿಗೆ 'ರಾಷ್ಟ್ರ-ವಿರೋಧಿ' ಎಂದು ಹಣೆಪಟ್ಟಿ ಹಚ್ಚುತ್ತಾರೆ, ಹಿಂದುತ್ವ ಶಕ್ತಿಗಳ ವಿರುದ್ಧ ನಿಲ್ಲುವವರ ಮೇಲೆ, ಭಿನ್ನಮತ ವ್ಯಕ್ತಪಡಿಸುವವರ ಮೇಲೆ ಗೂಂಡಾ ಪ್ರವೃತ್ತಿ ಮತ್ತು ಹಿಂಸಾಚಾರಕ್ಕೆ ಇಳಿಯುವವರನ್ನು ರಕ್ಷಿಸುತ್ತಾರೆ.

ಕಥೇರಿಯಾ ಮತ್ತು ಆಗ್ರಾದಲ್ಲಿ ಕೋಮುವಾದಿ ಹಿಂಸಾಚಾರವನ್ನು ಪ್ರಚೋದಿಸಿದ ಇತರ ಎಲ್ಲರ ಮೇಲೂ ಕಾನೂನು ಕ್ರಮಕೈಗೊಳ್ಳುವುದು ಉತ್ತರಪ್ರದೇಶ ಸರಕಾರದ ಪರಮ ಕರ್ತವ್ಯವಾಗಿದೆ. ಮುಝಫ್ಫರ್‌ನಗರದ ಹಿಂಸಾಚಾರದ ಮೊದಲಿನ ಸನ್ನಿವೇಶದಲ್ಲಿ ಆಡಳಿತದ ಲೋಪಗಳಿಂದಾಗಿ ಆಗಿರುವ ಅನಾಹುತಗಳಿಂದ ಅವರು ಪಾಟ ಕಲಿಯಬೇಕು.

ಇನ್ನು ಕೇಂದ್ರ ಸರಕಾರದ ಬಗ್ಗೆ ಹೇಳುವುದಾದರೆ, ಅದು ಸಂವಿಧಾನ ಮತ್ತು ಕಾನೂನಿನ ಆಳ್ವಿಕೆಗೆ ಕನಿಷ್ಟ ಬದ್ಧತೆಯನ್ನು ಪಾಲಿಸುವುದಾದರೆ, ಈ ಮಂತ್ರಿಯನ್ನು ತೆಗೆದು ಹಾಕಬೇಕೆಂದು ಸಂಸತ್ತಿನಲ್ಲಿ ಎತ್ತಿದ ಬೇಡಿಕೆಯನ್ನು ಈಡೇರಿಸಬೇಕು.

ಕೇಂದ್ರ ಬಜೆಟ್2016-17 ಬಗ್ಗೆ ಸಿಪಿಐ(ಎಂ) ಪೊಲಿಟ್‌ಬ್ಯುರೊ

ಬೆಳವಣಿಗೆಯ ಮುನ್ನೋಟವೂ ಇಲ್ಲ, ಜನಹಿತದ ಕಣ್ಣೋಟವೂ ಇಲ್ಲ

ಫೆಬ್ರುವರಿ 29ರಂದು ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರದ ಹಣಕಾಸು ಮಂತ್ರಿಗಳು ಮಂಡಿಸಿರುವ ಬಜೆಟ್ ಬಡವರಿಗೆ ಭರವಸೆ ನೀಡುವ, ರೈತರತ್ತ ಮುಖ ಮಾಡಿರುವ ಬಜೆಟ್ ಎಂದೆಲ್ಲ ಮಾಧ್ಯಮಗಳಲ್ಲಿ ಹೇಳಲಾಗುತ್ತಿದೆ. ಆದರೆ ವಾಸ್ತವವಾಗಿ ಇದು ಅಂತಹ ಮುನ್ನೋಟವಾಗಲಿ, ಕಣ್ಣೋಟವಾಗಲೀ ಇಲ್ಲದೆ ವಿರೂಪಗೊಂಡಿರುವ ಬಜೆಟ್ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ವಿಶ್ಲೇಷಿಸಿದೆ.

ಕೃಷಿಗೆ ಬಹಳ ದೊಡ್ಡ ಮೊತ್ತವನ್ನು ಕೊಡುತ್ತಿದ್ದೇವೆ ಎಂದು ಈ ಬಜೆಟಿನಲ್ಲಿ ಹೇಳಲಾಗಿದೆ. ಆದರೆ ಈ ಹೆಚ್ಚಳ ಪ್ರಮುಖವಾಗಿ ಕೃಷಿಸಾಲಗಳು ಮತ್ತು ರೈತರಿಗೆ ವಿಮಾರಕ್ಷಣೆಯ ಹೆಸರಿನಲ್ಲಿ ಬ್ಯಾಂಕ್‌ಗಳು ಮತ್ತು ವಿಮಾ ಕಂಪನಿಗಳಿಗೆ ವರ್ಗಾವಣೆ ಹೊಂದುವ ಮೊತ್ತಗಳು.

ಮೂಲರಚನೆಗಳ ವಲಯಕ್ಕೆ ದೊಡ್ಡ ಒತ್ತು ನೀಡಲಾಗುವುದು ಎಂದು ಹೇಳಿಕೊಳ್ಳಲಾಗಿದೆ . ಆದರೆ 2015-16ರಲ್ಲಿ ಮಾಡಿದ ಬಂಡವಾಳ ಖರ್ಚಿನ ಮೊತ್ತ ಕಳೆದ ವರ್ಷದ ಬಜೆಟಿನಲ್ಲಿ ಹೇಳಿದ್ದಕ್ಕಿಂತ ಕಡಿಮೆಯೇ ಇತ್ತು. ಈ ವರ್ಷಕ್ಕೂ ಅಷ್ಟೇ ಮೊತ್ತವನ್ನು ಬಜೆಟಿನಲ್ಲಿ ಕೊಡಲಾಗಿದೆ. ಅಂದರೆ ಹಣದುಬ್ಬರವನ್ನು ಪರಿಗಣಿಸಿದರೆ ಕಡಿಮೆಯಾಗಿದೆಯೇ ಹೊರತು, ಹೆಚ್ಚಾಗಿಲ್ಲ; ಕಳೆದ ವರ್ಷ ಅದು ಜಿಡಿಪಿಯ 1.8ಶೇ. ಇತ್ತು, ಈ ವರ್ಷ 1.6ಶೇ.ಕ್ಕೆ ಇಳಿಯುತ್ತದೆ.

ಎಲಕ್ಕೂ ಮುಖ್ಯವಾಗಿ, ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗೆ ಇದುವರೆಗಿನ ಅತ್ಯಂತ ಹೆಚ್ಚು ಮೊತ್ತವನ್ನು ಕೊಡಲಾಗಿದೆ ಎಂದು ಹಣಕಾಸು ಮಂತ್ರಿಗಳು ಹೇಳಿಕೊಂಡಿದ್ದಾರೆ. ಇದು ಹಸಿ ಸುಳ್ಳು. 2010-11ರಲ್ಲಿ ಆಗಿನ ಬೆಲೆಗಳಲ್ಲಿ ಇದಕ್ಕಿಂತ ಹೆಚ್ಚು ಕೊಡಲಾಗಿತ್ತು. ಅದನ್ನು ಈಗಿನ ಬೆಲೆಗಳಲ್ಲಿ ಲೆಕ್ಕ ಹಾಕಿದರೆ 65,000 ಕೋಟಿ ರೂ,ಗಳಾಗುತ್ತದೆ. ಆದರೆ 2016-17ರ ಬಜೆಟ್ ಕೊಟ್ಟಿರುವುದು 38,000 ಕೋಟಿ ರೂ.ಗಳು ಮಾತ್ರ. ಇನ್ನೂ ಆಘಾತಕಾರಿ ಸಂಗತಿಯೆಂದ-ರೆ, 2014-15ರಲ್ಲಿ ಈ ಕಾನೂನಿನ ಅಡಿಯಲ್ಲಿ ಒದಗಿಸುವ ಕೆಲಸದ ಕನಿಷ್ಟ ಪ್ರಮಾಣವನ್ನು ವರ್ಷಕ್ಕೆ 100ದಿನಗಳಿಂದ 200ದಿನಗಳಿಗೆ ಏರಿಸಲಾಗುವುದು ಎಂಬ ಭರವಸೆ ಕೊಡಲಾಗಿತ್ತು. ಆದರೆ ಇದು ಬರದ ವರ್ಷವಾಗಿದ್ದರೂ, ಈ ಕಾಯ್ದೆಯ ಅಡಿಯಲ್ಲಿ ಖರ್ಚು ಮಾಡಿದ ಹಣ ಎಷ್ಟು ಕಡಿಮೆಯಿತ್ತೆಂದರೆ ಸರಾಸರಿ 38 ದಿನಗಳ ಕೆಲಸವನ್ನು ಮಾತ್ರ ಒದಗಿಸಲು ಸಾಧ್ಯವಾಗಿದೆ ಎಂದು ಸಿಪಿಐ(ಎಂ) ನೆನಪಿಸಿದೆ.

ಜಾಗತಿಕವಾಗಿ ಅರ್ಥಿಕ ನಿಧಾನಗತಿ ಆವರಿಸಿರುವಾಗ ಕೇಂದ್ರ ಬಜೆಟ್ ದೇಶದೊಳಗಿನ ಬೇಡಿಕೆಯನ್ನು ವಿಸ್ತರಿಸಲು ಹೆಚ್ಚಿನ ಕ್ರಮಗಳನ್ನು ಸೂಚಿಸುವ ಬದಲು ಅದನ್ನು ಸಂಕುಚಿತಗೊಳಿಸುವ ಅದೇ ಪ್ರತಿಗಾಮಿ ಧೋರಣೆಗಳನ್ನು ಮುಂದುವರೆಸುವ ದಾರಿಯನ್ನೇ ಆರಿಸಿಕೊಂಡಿದೆ ಎಂದು ಸಿಪಿಐ(ಎಂ) ಟೀಕಿಸಿದೆ. **ಇದು ಅಸಮಾನತೆಯನ್ನು, ನಿರುದ್ಯೋಗವನ್ನು ಉಲ್ಬಣ ಗೊಳಿಸುತ್ತದೆ, ಮತ್ತು ರಫ್ತುಗಳನ್ನು ಮತ್ತಷ್ಟು ಕುಗ್ಗಿಸುತ್ತದೆ. ಇದರಿಂದ ಕೃಷಿಕ್ಷೇತ್ರದಲ್ಲಿ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಸಂಕಟ ಇನ್ನಷ್ಟು ಹೆಚ್ಚುತ್ತದೆ, ಕೈಗಾರಿಕಾ ಉತ್ಪಾದನೆ ಕುಸಿಯುತ್ತದೆ, ಕಟ್ಟಡ ನಿರ್ಮಾಣ ಮತ್ತು ಇತರ ಹಲವು ಸೇವಾವಲಯದ ಕ್ಷೇತ್ರಗಳಲ್ಲಿ ನಿಧಾನಗತಿ ಉಂಟಾಗುತ್ತದೆ ಎಂದು ಅದು ಅಭಿಪ್ರಾಯ ಪಟ್ಟಿದೆ.**

ಭಾರತದ ಆರ್ಥಿಕ ಗಮನ ಸೆಳೆಯುವಂತಹ ಬೆಳವಣಿಗೆಯನ್ನು ಸಾಧಿಸಿದೆ ಎಂದು ಸರಕಾರ ಹೇಳಿಕೊಂಡರೂ 2015-16ರ ಆದಾಯಗಳ ಅಂಕಿ-ಅಂಶಗಳು ಅದನ್ನು ಹುಸಿಗೊಳಿಸುತ್ತವೆ. ಕಾರ್ಪೊರೇಟ್ ಮತ್ತು ವೈಯಕ್ತಿಕ ಆದಾಯ ತೆರಿಗೆಗಳಿಂದ ಬರಬೇಕಾದ ಆದಾಯದಲ್ಲಿ 46,000 ಕೋಟಿ ರೂ.ಗಳಷ್ಟು ಭಾರೀ ಕೊರತೆ ಉಂಟಾಗಿದೆ. ಇದರಿಂದಾಗಿ ರಾಜ್ಯಗಳಿಗೆ ವರ್ಗಾಯಿಸುವ ಪಾಲಿನ ಪ್ರಮಾಣವೂ ಕಳೆದ ವರ್ಷದ ಬಜೆಟ್‌ನಲ್ಲಿ ಹೇಳಿರುವುದಕ್ಕಿಂತ ಬಹಳ ಕಡಿಮೆಯಾಗಿದೆ.ಇದು ಸಾಲದೆಂಬಂತೆ, ತೆರಿಗೆ ವಂಚಕರಿಗೆ 'ಕ್ಷಮಾದಾನ'ದ ಮತ್ತೊಂದು ಅವಕಾಶವನ್ನು ಕೊಟ್ಟು ಹಣಕಾಸು ಮಂತ್ರಿಗಳು ಹಣಕಾಸು ಶಿಸ್ತಿಗೆ ಸಂಬಂಧಪಟ್ಟಂತೆ ಒಂದು ವಿಕೃತ ಸಂಕೇತವನ್ನು ಕೊಟ್ಟಿದ್ದಾರೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಆದರೂ ಹಣಕಾಸು ಕೊರತೆಯನ್ನು ಸೀಮಿತಗೊಳಿಸುವ ಬಜೆಟ್ ಗುರಿಯನ್ನು ಈಡೇರಿಸಲಾಗಿದೆಯೆಂದರೆ ಅದು ಸಾಧ್ಯವಾಗಿರುವುದು ಅಬಕಾರಿ ಸುಂಕಗಳ ವಸೂಲಿ ಬಜೆಟ್ ಅಂದಾಜಿಗಿಂತ 54000 ಕೋಟಿ ರೂ.ಗಳಷ್ಟು ಹೆಚ್ಚಿದ್ದರಿಂದ. ಜನಗಳ ಮೇಲಿನ ಪರೋಕ್ಷ ತೆರಿಗೆಗಳ ಹೊರೆಯನ್ನು ಹೆಚ್ಚಿಸಿ ಇದನ್ನು ವಸೂಲಿ ಮಾಡಲಾಗಿದೆ. ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲ ಬೆಲೆಗಳಲ್ಲಿ ಇಳಿಕೆಯ ಪ್ರಯೋಜನ ಜನತೆಗೆ ತಲುಪದಂತೆ ಮಾಡಲು ಅಬಕಾರಿ ಸುಂಕಗಳನ್ನು ಏರಿಸುವ ಮೂಲಕ ಅದನ್ನು ಸರಕಾರವೇ ಬಾಚಿಕೊಂಡು ಕಳೆದ ವರ್ಷದ ಬಜೆಟ್‌ನ ಹಣಕಾಸು ಕೊರತೆಯ ಗುರಿಯನ್ನು ತಲುಪಲಾಗಿದೆ ಎಂಬ ಸಂಗತಿಯತ್ತ ಸಿಪಿಐ(ಎಂ) ಗಮನ ಸೆಳೆದಿದೆ.

ಈ ವರ್ಷದ ಬಜೆಟಿನಲ್ಲೂ ಈ ಪ್ರವೃತ್ತಿ ಮುಂದುವರೆಯಲಿದೆ. ನೇರ ತೆರಿಗೆಗಳ ಪ್ರಸ್ತಾವಗಳಿಂದ ರೂ.1060 ಕೋಟಿ ರೂ. ರೆವಿನ್ಯೂ ನಷ್ಟ ಮಾಡಿಕೊಂಡರೂ, ಹಣಕಾಸು ಕೊರತೆಯನ್ನು ಇಳಿಸುವ ಗೀಳನ್ನು ಹಚ್ಚಿಕೊಂಡಿರುವ ಸರಕಾರದ ಹಣಕಾಸು ಮಂತ್ರಿಗಳು ಅದನ್ನು ಜಿಡಿಪಿಯ 3.5ಶೇ.ಕ್ಕೆ ಸೀಮಿತಗೊಳಿಸಲೆಂದು ಪರೋಕ್ಷ ತೆರಿಗೆಗಳಿಂದ 20670 ಕೋಟಿ ರೂ.ಗಳಷ್ಟು ಹೆಚ್ಚಿನ ರೆವಿನ್ಯೂ ಗಳಿಸುವ ಪ್ರಸ್ತಾವಗಳನ್ನು ಮಂಡಿಸಿದ್ದಾರೆ. **ನೇರ ತೆರಿಗೆಗಳಲ್ಲಿನ ಇಳಿಕೆಯ ಪ್ರಯೋಜನ ಸಿರಿವಂತ ವಿಭಾಗಗಳಿಗೆ ಸಿಕ್ಕರೆ, ಪರೋಕ್ಷ ತೆರಿಗೆಗಳ ಹೆಚ್ಚಳದ ಹೊರೆಯನ್ನು ಜನಸಾಮಾನ್ಯರು ಹೊರಬೇಕಾಗುತ್ತದೆ.** 20670 ಕೋಟಿ ರೂ. ಹೆಚ್ಚಿನ ಪರೋಕ್ಷ ತೆರಿಗೆಯ ಅಂದಾಜು ಕೂಡ ಜಿಡಿಪಿ 11ಶೆ.ದಷ್ಟು ಏರಿಕೆ ಕಾಣುತ್ತದೆ ಎಂಬ ನಿರೀಕ್ಷೆಯ ಮೇಲೆ ಮಾಡಿರುವ ಲೆಕ್ಕಾಚಾರ. ಕಳೆದ ವರ್ಷದ ಇಂತಹ ನಿರೀಕ್ಷೆ ಹುಸಿಯಾಗಿದೆ.

ಹಣಕಾಸು ಕೊರತೆಯನ್ನು ತಾನೇ ಹಾಕಿಕೊಂಡ ಮಿತಿಯೊಳಗೆ ಇಡಲು ಹಣಕಾಸು ಮಂತ್ರಿಗಳು ಕೇಂದ್ರ ಸರಕಾರದ ಖರ್ಚುಗಳನ್ನು ಮತ್ತಷ್ಟು ಇಳಿಸುವ ಪ್ರಸ್ತಾವಗಳನ್ನು ಇಟ್ಟಿದ್ದಾರೆ. ಕೃಷಿಗೆ ಹೆಚ್ಚಿನ ಹಣ ಕೊಡಲಾಗಿದೆ, ಗ್ರಾಮೀಣ ಉದ್ಯೋಗ ಯೋಜನೆಗೆ ಇದುವರೆಗೆ ಕೊಟ್ಟಿರುವುದಕ್ಕಿಂತ ಹೆಚ್ಚಿನ ಹಣ ಕೊಡಲಾಗಿದೆ ಮತ್ತು ಮೂಲರಚನೆಗಳಿಗೆ ಭಾರೀ ಹೆಚ್ಚಳ ಮಾಡಲಾಗಿದೆ ಎಂದು ಹೇಳಿಕೊಂಡರೂ, ಉಳಿದ ಬಾಬ್ತುಗಳಲ್ಲಿ ಗಮನಾರ್ಹ ಕಡಿತ ಮಾಡಲಾಗಿದೆ ಎಂಬ ಸಂಗತಿಯತ್ತ ಸಿಪಿಐ(ಎಂ) ಪೊಲಟ್‌ಬ್ಯುರೊ ಜನರ ಗಮನ ಸೆಳೆದಿದೆ.

ಆಹಾರ ಸಬ್ಸಿಡಿಯಲ್ಲಿ 5000 ಕೋಟಿರೂ.ಗಳ ಕಡಿತ ಮಾಡಿದ್ದರೆ, ರಸಗೊಬ್ಬರ ಸಬ್ಸಿಡಿಯಲ್ಲಿ 2000 ಕೋಟಿ ರೂ. ಕಡಿತ ಮಾಡಲಾಗಿದೆ.

ಪರಿಶಿಷ್ಟ ಜಾತಿ ಉಪಯೋಜನೆಗೆ ಒಟ್ಟು ಯೋಜನಾ ಖರ್ಚಿನ 16.6ಶೇ. ಕೊಡಬೇಕೆಂದು ವಿಧಿಸಲಾಗಿದೆ. ಆದರೆ ಈ ಬಜೆಟ್ ಕೊಟ್ಟಿರುವುದು 7ಶೇ. ಮಾತ್ರ, ಅಂದರೆ 52470ಕೋಟಿ ರೂ.ಗಳಷ್ಟು ಕಡಿಮೆ.

ಬುಡಕಟ್ಟು ಉಪಯೋಜನೆಗೆ 8.6ಶೇ. ಕೊಡುವ ಬದಲು ಕೇವಲ 4.4ಶೇ. ಕೊಡಲಾಗಿದೆ, ಅಂದರೆ 24000 ಕೋಟಿ ರೂ.ಗಳ ಕಡಿತ.

ಅಲ್ಪಸಂಖ್ಯಾತ ಕಲ್ಯಾಣದ ಬಾಬ್ತಿನಲ್ಲೂ ಕಡಿತವಾಗಿದೆ.

ಐಸಿಡಿಎಸ್ (ಸಮಗ್ರ ಮಕ್ಕಳ ಅಭಿವೃದ್ಧಿ ಯೋಜನೆ)ಯನ್ನು ಸಾರ್ವತ್ರಿಕಗೊಳಿಸಬೇಕು ಎಂದು ಸುಪ್ರಿಂ ಕೋರ್ಟ್ ನಿರ್ದೇಶಿಸಿದೆ. ಅದನ್ನು ಪಾಲಿಸಬೇಕಾದರೆ 10000 ಕೋಟಿ ರೂ. ಹೆಚ್ಚಿನ ಹಣ ಕೊಡಬೇಕಾಗಿತ್ತು. ಅದರ ಬದಲು 1500 ಕೋಟಿ ರೂ.ಗಳ ಕಡಿತ ಮಾಡಲಾಗಿದೆ!

ಈ ಬಜೆಟಿನಲ್ಲಿ ಮೊದಲ ಬಾರಿಗೆ ಪೆನ್ಶನ್ ಮತ್ತು ಭವಿಷ್ಯ ನಿಧಿಯಿಂದ ಹಣವನ್ನು ಹಿಂದಕ್ಕೆ ಪಡೆದರೆ ಅದರಲ್ಲಿ 60ಶೇ. ಭಾಗದ ಮೇಲೆ ತೆರಿಗೆಯನ್ನು ಹಾಕುವ ಪ್ರಸ್ತಾವ ಈ ಬಜೆಟಿನಲ್ಲಿದೆ. ಅಂದರೆ ತಮ್ಮದೇ ಉಳಿತಾಯಗಳನ್ನು ಬಳಸಿಕೊಳ್ಳಬೇಕಾದರೆ ಈ ತೆರಿಗೆಯ ಹೊರೆಯನ್ನು ಹೊರಬೇಕು.

ಸಾರ್ವಜನಿಕ ವಲಯದ ಉದ್ದಿಮೆಗಳ ಶೇರು ಮಾರಾಟದಿಂದ 56,500 ಕೋಟಿ ರೂ.ಗಳನ್ನು ಎತ್ತುವ ಪ್ರಸ್ತಾವವೂ ಈ ಬಜೆಟಿನಲ್ಲಿದೆ. ವಿಮಾ ವಲಯದಲ್ಲಿ ಎಫ್‌ಡಿಐ ಉದಾರೀಕರಣ ಮತ್ತು ಆಹಾರಧಾನ್ಯಗಳ ಖರೀದಿಯನ್ನು ವಿಕೇಂದ್ರೀಕರಿಸುವ ಪ್ರಸ್ತಾವಗಳೂ ಇವೆ. ಇವು ಅಪಾಯಕಾರಿ ಹೆಜ್ಜೆಗಳು, ಭಾರತದ ಆರ್ಥಿಕವನ್ನು ಅಸ್ಥಿರಗೊಳಿಸುವ ಇನ್ನೆರಡು ಅಂಶಗಳು.

ಆದ್ದರಿಂದ ಈ ಬಜೆಟ್ ಯಾವುದೇ ಮುನ್ನೋಟವಿಲ್ಲದೆ ವಿರೂಪಗೊಂಡಿದೆ. ಬಡವರು ಮತ್ತು ದಮನಿತರ ಮೇಲೆ ಮತ್ತೊಮ್ಮೆ ನೆಡಸಿರುವ ನಗ್ನ ದಾಳಿ. ಶ್ರೀಮಂತರನ್ನು ತುಷ್ಟೀಕರಿಸಿ ನಿರುದ್ಯೋಗ ಮತ್ತು ಏರುತ್ತಿರುವ ಅಸಮಾನತೆಯ ಸಮಸ್ಯೆಗಳನ್ನು ಮತ್ತಷ್ಟು ಉಲ್ಬಣಗೊಳಿಸುವ ಬಜೆಟ್ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ವರ್ಣಿಸಿದೆ.



ಎನ್‌ಡಿಎ ಸರಕಾರದ ಬಜೆಟ್ 2016–17

ಎಷ್ಟು ಬಡವರ–ಪರ, ಹಳ್ಳಿ–ಪರ ಮತ್ತು ರೈತ–ಪರ?

ತಮ್ಮ ಸರಕಾರದ ಹಣಕಾಸು ಮಂತ್ರಿ ಅರುಣ್ ಜೇಟ್ಲಿಯವರು ದೇಶದ ಸಂಸತ್ತಿನ ಮುಂದೆ ಮಂಡಿಸಿರುವ 2016–17ರ ಬಜೆಟ್ ಬಡವರ ಪರವಾದ, ಹಳ್ಳಿಗಳ ಪರವಾದ ಮತ್ತು ರೈತರ ಪರವಾರದ ಬಜೆಟ್ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಹೇಳಿದ್ದಾರೆ. ಹೆಚ್ಚಿನ ಮಾಧ್ಯಮಗಳೂ ಸುಮಾರಾಗಿ ಹಾಗೆಯೇ ಅದನ್ನು ಬಿಂಬಿಸಿವೆ. ಆದರೆ ಬಜೆಟ್‌ನಲ್ಲಿನ ಅಂಕಿ–ಅಂಶಗಳೇ ಹೇಳುವ ಸತ್ಯಾಂಶಗಳೇನು?

ಒಟ್ಟು ರೂ. 19,78,060 ಕೋಟಿ ಬಜೆಟ್ ವೆಚ್ಚದಲ್ಲಿ

* ಗ್ರಾಮೀಣ ಅಭಿವೃದ್ಧಿಗೆ ರೂ.87,765 ಕೋಟಿ, ಅಂದರೆ 04.44%
* ಕೃಷಿಗೆ ರೂ.35,984ಕೋಟಿ, ಅಂದರೆ 01.82%
* ಸಾಮಾಜಿಕ ವಲಯಕ್ಕೆ ರೂ.1.51ಲಕ್ಷ ಕೋಟಿ, ಅಂದರೆ 07.63%
* ಮೂಲರಚನೆಗೆ ರೂ.2.21ಲಕ್ಷ ಕೋಟಿ, ಅಂದರೆ 11.17%
* ಸಬ್ಸಿಡಿಗಳ ಮೊತ್ತ ರೂ.2,50,433 ಕೋಟಿ ಅಂದರೆ 12.66%
  2015–16ರ ಬಜಟಿನಲ್ಲಿ ಇದು ರೂ.2,27,388 ಕೋಟಿ, ಅಥವ 12.88% ಇತ್ತು.
* ಬಿಟ್ಟುಕೊಟ್ಟ ಆದಾಯ ರೂ.6,11128.31 ಲಕ್ಷ ಕೋಟಿ (ಮುಖ್ಯವಾಗಿ ಉದ್ಯಮಿಗಳಿಗೆ ತೆರಿಗೆ ವಿನಾಯ್ತಿ ಇತ್ಯಾದಿ) **ಅಂದರೆ 30.89%**
  ಇದು ಕಳೆದ ವರ್ಷಕ್ಕಿಂತ ರೂ. 50,000 ಕೋಟಿ ಅಥವ 10ಶೇ.ದಷ್ಟು ಹೆಚ್ಚು.

!?

ಸರಕಾರ ಮಾಡುವ ಖರ್ಚುಗಳ ಪ್ರಮಾಣ ಯುಪಿಎ–2 ಸರಕಾರದ ನಂತರ ಇಳಿಯುತ್ತಲೇ ಬಂದಿದೆ. 2009–10ರಲ್ಲಿ ಜಿಡಿಪಿಯ 15.9% ಇದ್ದದ್ದು ಕಳೆದ ವರ್ಷ 13.3%ಕ್ಕೆ ಇಳಿಯಿತು. ಈ ಪರಿವರ್ತನಕಾರಿ' ಬಜೆಟಿನಲ್ಲಿ ಅದು 12.6%ಕ್ಕೆ ಇಳಿದಿದೆ.

ರೈತ-ಪರ !

ಕೃಷಿ ಮಂತ್ರಾಲಯಕ್ಕೆ ನೀಡಿರುವ ಹಣ ರೂ.22,959 ಕೋಟಿಯಿಂದ ರೂ.44,486 ಕೋಟಿಗೆ ಏರಿಸಲಾಗಿದೆ, ಅಂದರೆ ಸುಮಾರು ದುಪ್ಪಟ್ಟು ಆಗಿದೆ ಎನ್ನಲಾಗಿದೆ.

*** ಇದರಲ್ಲಿ ರೂ.15,000 ಬ್ಯಾಂಕುಗಳಿಗೆ ಕೃಷಿಸಾಲಗಳ ಮೇಲಿನ ಬಡ್ಡಿಗಳಿಗೆ ನೀಡುವ ಸಬ್ಸಿಡಿ. ಇದು ಮೊದಲು ಹಣಕಾಸು ಇಲಾಖೆಯ ಅಡಿಯಲ್ಲಿತ್ತು. ಅದನ್ನೀಗ ಕೃಷಿ ಇಲಾಖೆಗೆ ವರ್ಗಾಯಿಸಲಾಗಿದೆ,**

* ಕೃಷಿ ಸಾಲಗಳ ಮೊತ್ತ ರೂ.8.5ಲಕ್ಷ ಕೋಟಿಯಿಂದ ರೂ.9 ಲಕ್ಷ ಕೋಟಿ ರೂ.ಗಳಿಗೆ ಹೆಚ್ಚಿಸಲಾಗಿದೆ. ಆದರೆ ಇದರಿಂದ ಬಹುಪಾಲು ರೈತರಿಗೆ, ಸಣ್ಣ ಮತ್ತು ಅಂಚಿನಲ್ಲಿರುವ ರೈತರಿಗೆ ಏನೂ ಪ್ರಯೋಜನವಿಲ್ಲ. ಏಕೆಂದರೆ ಇವರಿಗೆ ಕೃಷಿ ಸಾಲದ ಲಭ್ಯತೆ ಬಹಳ ಕಷ್ಟ. ಲಭ್ಯವಿದ್ದರೆ ಆಗಲೇ ಅವರ ಸಾಲ ಬಾಕಿಯಿರುತ್ತದೆ, ಹೊಸ ಸಾಲ ಹಳೆಯದಕ್ಕೆ 'ಬುಕ್ ಅಡ್ಜಸ್ಟ್‌ಮೆಂಟ್' ಆಗಿ ಬಿಡುತ್ತದೆ. ಅದನ್ನು ಸಾಲ ಕೊಟ್ಟದ್ದು ಎಂದು ಲೆಕ್ಕ ಹಾಕಲಾಗುತ್ತದೆ.
* ಪ್ರಧಾನ ಮಂತ್ರಿ ಫಸಲು ವಿಮಾ ಯೋಜನೆಗೆ 5500 ಕೋಟಿ ರೂ.ಗಳನ್ನು ಕೊಡಲಾಗಿದೆ. ಆದರೆ ಇದು ಸಾರ್ವತ್ರಿಕ ವಿಮಾ ಯೋಜನೆ ಅಲ್ಲ, ಬಡ ಮತ್ತು ಅಂಚಿನಲ್ಲಿರುವ ರೈತರು ಇದರಡಿ ಬರುವುದಿಲ್ಲ.
* ರೈತರ ಹೆಸರಿನಲ್ಲಿ ಕೊಟ್ಟಿರುವ ಹಣದಲ್ಲಿ ಬಹುಪಾಲು ಬ್ಯಾಂಕ್ ಮತ್ತು ವಿಮಾ ಕಂಪನಿಗಳಿಗೆ ಹೋಗುತ್ತದೆ, ರೈತರಿಗಲ್ಲ!
* ಆಹಾರ ಉತ್ಪನ್ನಗಳಲ್ಲಿ 100ಶೇ. ಎಫ್‌ಡಿಐಗೆ ವಿದೇಶಿ ಹೂಡಿಕೆ ಉತ್ತೇಜನಾ ಮಂಡಳಿಯ ಮೂಲಕ ಅವಕಾಶ ಕಲ್ಪಿಸುವ ಬಜೆಟ್ ಪ್ರಸ್ತಾವದ ಮೂಲಕ ಕೃಷಿ ಸಂಸ್ಕರಣ ಮತ್ತು ಮಾರಾಟದ ಖಾಸಗೀಕರಣ ಇದು ಕೃಷಿಯನ್ನು ಇನ್ನಷ್ಟು ಆರ್ಥಿಕವಾಗಿ ಅಪ್ರಯೋಜಕಗೊಳಿಸಿ ರೈತರ ಸಂಕಟಗಳನ್ನು ಹೆಚ್ಚಿಸುವ ಕ್ರಮ.
* ಕೃಷಿ ಉತ್ಪನ್ನಗಳ ಮಾರಾಟಕ್ಕೆ ಇ–ವೇದಿಕೆ ನಿರ್ಮಿಸಲು ಎಪಿಎಂಸಿ ಕಾಯ್ದೆಯನ್ನು ತಿದ್ದುಪಡಿ ಮಾಡುವ ಪ್ರಸ್ತಾವವನ್ನು ಈ ಬಜೆಟ್ ಇಟ್ಟಿದೆ. ಇದು ಗುತ್ತೇದಾರಿ ವ್ಯಾಪಾರ ಮತ್ತು ಕೃಷಿ ವ್ಯಾಪಾರ ಹಿತಾಸಕ್ತಿಗಳ ಪ್ರಾಬಲ್ಯವನ್ನು ಹೆಚ್ಚಿಸುವ ಕ್ರಮ.

ರೈತರ ಶೋಷಣೆಯನ್ನು ತಡೆಯಬಹುದಾದ ಯಾವ ಸ್ಕೀಮುಗಳೂ ಇಲ್ಲದ ಈ ಬಜೆಟ್ ರೈತರ ಆದಾಯಗಳನ್ನು ಆರು ವರ್ಷಗಳಲ್ಲಿ ದ್ವಿಗುಣ ಗೊಳಿಸಲು ಹೇಗೆ ಸಾಧ್ಯ?

2022 ರ ವೇಳೆಗೆ ರೈತರ ಆದಾಯವನ್ನು ದ್ವಿಗುಣಗೊಳಿಸಲಾಗುವುದು ಎಂಬ ದೊಡ್ಡ ಪ್ರಚಾರದ ನಡುವೆ ಮಂಡಿಸಲಾದ ಕೇಂದ್ರದ ಈ ವರ್ಷದ ಬಜೆಟ್ ಅತ್ಯಂತ ನಿರಾಶಾದಾಯಕವಾಗಿದೆ, ವಾಸ್ತವವಾಗಿ ರೈತ–ವಿರೋಧಿಯಾಗಿದೆ

ರೈತರು ತೀವ್ರ ಕರ್ಷಕ ಬಿಕ್ಕಟ್ಟಿನಿಂದ ನರಳುತ್ತಿರಲು ಪ್ರಮುಖ ಕಾರಣ ಮಾರುಕಟ್ಟೆಯಲ್ಲಿ ಮಾಡಲಾಗುತ್ತಿರುವ ಅವರ ಶೋಷಣೆ. ಕೃಷಿ ಉತ್ಪನ್ನಗಳಿಗೆ ಫಲದಾಯಕ ಬೆಲೆಗಳು ಸಿಗುತ್ತಿಲ್ಲ.

ಕನಿಷ್ಟ ಬೆಂಬಲ ಬೆಲೆಗಳನ್ನು ಉತ್ಪಾದನಾ ಖರ್ಚಿಗಿಂತ 50ಶೇ. ಹೆಚ್ಚಿನ ಮಟ್ಟದಲ್ಲಿ ನಿಗದಿಗೊಳಿಸಲಾಗುವುದು ಎಂದು ಬಿಜೆಪಿ ತನ್ನ 2014ರ ಲೋಕಸಭಾ ಚುನಾವಣಾ ಪ್ರಣಾಳಿಕೆಯಲ್ಲಿ ಭರವಸೆ ನೀಡಿತ್ತು. ಆದರೆ ಈ ಬಜೆಟಿನಲ್ಲಿ ಆ ಬಗ್ಗೆ ಅರ್ಥಪೂರ್ಣವಾದ ಯಾವ ಪ್ರಸ್ತಾವವೂ ಇಲ್ಲ.

ಅದೇ ರೀತಿಯಲ್ಲಿ ಮಾರುಕಟ್ಟೆಯಲ್ಲಿ ಮಧ್ಯವರ್ತಿಗಳಿಂದ, ಗುತ್ತೇದಾರಿ ವ್ಯಾಪಾರಿಗಳಿಂದ ಮತ್ತು ಕೃಷಿ ಸಂಸ್ಕರಣ ಉದ್ಯಮಿಗಳಿಂದ ರೈತರ ಶೋಷಣೆಯನ್ನು ತಡೆಯಬಹುದಾದ ಯಾವ ಸ್ಕೀಮುಗಳೂ ಇಲ್ಲದ ಈ ಬಜೆಟ್ ಅದು ಹೇಗೆ ರೈತರ ಆದಾಯಗಳನ್ನು ಇನ್ನು ಆರು ವರ್ಷಗಳಲ್ಲಿ ದ್ವಿಗುಣ ಗೊಳಿಸಲು ಸಾಧ್ಯ ?

ಮೋದಿ ಸರಕಾರದ ಆಳ್ವಿಕೆಯಲ್ಲಿ ಈ ಎರಡು ವರ್ಷಗಳೊಳಗೆ 26ಶೇ. ಹೆಚ್ಚಿರುವರೈತರ ಆತ್ಮಹತ್ಯೆಗಳ ಪ್ರಸ್ತಾಪವೇ ಇಲ್ಲ,

–ಅಖಿಲ ಭಾರತ ಕಿಸಾನ್ ಸಭಾ

ಹಳ್ಳಿ-ಪರ !

ಇದುವರೆಗೆ ಪ್ರಧಾನ ಮಂತ್ರಿಗಳು ಮತ್ತು ಅವರ ಆರ್ಥಿಕ ಸಲಹೆಗಾರರು ಗೇಲಿ ಮಾಡುತ್ತಿದ್ದ ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆ(ಮನರೇಗ) ಈಗ 'ಅಚ್ಚೇ ದಿನ್'ಗಳ ಹಣಕಾಸು ಮಂತ್ರಿಗೂ ನೆನಪಾಗಿದೆ.

2016–17ರಲ್ಲಿ ನೀಡಿರುವುದು ರೂ. 38,500 ಕೋಟಿ.
ಇದು ಹಿಂದೆಂದೂ ನೀಡದಷ್ಟು ಹಣ ಎಂದಿದ್ದಾರೆ.

* ಇದು ಖಂಡಿತಾ ನಿಜವಲ್ಲ.
  2010–11ರಲ್ಲಿ ಆಗಿನ ಬೆಲೆಗಳಲ್ಲಿ 39377 ಕೋಟಿ ರೂ. ಕೊಡಲಾಗಿತ್ತು. ಈಗಿನ ಬೆಲೆಗಳಲ್ಲಿ ಅದು 61445 ಕೋಟಿ ರೂ.ಗಳಾಗುತ್ತದೆ.
* ಅಲ್ಲದೆ ಎನ್‌ಡಿಎ ಸರಕಾರದ ಹಿಂದಿನ ಎರಡು ಬಜೆಟ್‌ಗಳಲ್ಲಿ ಈ ಯೋಜನೆಗೆ ಮಾಡಿದ ಕಡಿತದಿಂದಾಗಿ 14 ರಾಜ್ಯಗಳಿಗೆ ಕೇಂದ್ರ ಸರಕಾರ 6000 ಕೋಟಿ ರೂ.ಗಳಷ್ಟು ಬಾಕಿ ಕೊಡಬೇಕಾಗಿದೆ. ಅದನ್ನು ಪರಿಗಣಿಸಿದರೆ ಕಳೆದ ವರ್ಷದ ಮಟ್ಟದಲ್ಲೇ ಉಳಿಯಬೇಕಾದರೂ ರೂ.46,000 ಕೋಟಿ ಕೊಡಬೇಕಾಗಿತ್ತು
* ಕನಿಷ್ಟ 100ದಿನಗಳ ಬದಲು 200 ದಿನಗಳ ಕೆಲಸ ಕೊಡುವ ಭರವಸೆ ನೀಡಿದ್ದರೂ, ವಾಸ್ತವವಾಗಿ ಕಳೆದ ವರ್ಷ ಕೊಟ್ಟದ್ದು ಸರಾಸರಿ 38 ದಿನಗಳು ಮಾತ್ರ. ಈ ವರ್ಷವೂ ಹೆಚ್ಚೆಂದರೆ ಇದೇ ಪ್ರಮಾಣ ಉಳಿಯುತ್ತದೆ.


- ಹಿಂದಿದ್ದ ರಾಷ್ಟ್ರೀಯ ಯೋಜನಾ ಆಯೋಗ ಪರಿಶಿಷ್ಟ ಬುಡಕಟ್ಟುಗಳ ಉಪಯೋಜನೆಗೆ 8.6% ಖರ್ಚು ಮಾಡಬೇಕು ಎಂದು ವಿಧಿಸಿತ್ತು. ಆದರೆ ಈ ಬಜೆಟಿನಲ್ಲಿ ಕೊಟ್ಟಿರುವುದು 4.4% ಮಾತ್ರ. ರೂ. 24,000 ಕೋಟಿ ಕಡಿತ **ಅಂದರೆ ಆದಿವಾಸಿಗಳ ಮೇಲೆ ಯುದ್ಧ ಮುಂದುವರೆಯುತ್ತಿದೆ.**
- ಪರಿಶಿಷ್ಟ ಜಾತಿಗಳಿಗೆ ಉಪಯೋಜನೆಗೆ 16% ಖರ್ಚು ಮಾಡಬೇಕೆಂದು ಯೋಜನಾ ಆಯೋಗ ವಿಧಿಸಿತ್ತು. ಈ ಬಜೆಟಿನಲ್ಲಿ ಕೊಟ್ಟಿರುವುದು 7%, ರೂ.52470 ಕೋಟಿ ಕಡಿತ **ಅಂದರೆ ದಲಿತರ ಮೇಲೆ ಯುದ್ಧ ಮುಂದುವರೆದಿದೆ.**
- * ರಸಗೊಬ್ಬರ ಸಬ್ಸಿಡಿಯಲ್ಲಿ 2000ಕೋಟಿ ರೂ. ಕಡಿತ, ಆಹಾರ ಸಬ್ಸಿಡಿಯಲ್ಲಿ 5000 ಕೋಟಿ ರೂ. ಕಡಿತ. **ಅಂದರೆ ಬಡವರ ಮೇಲೆ ಯುದ್ಧ ಮುಂದುವರೆಯುತ್ತಿದೆ.**

ರೈತಾಪಿ ಜನಗಳ ಬದುಕು ಮತ್ತು ಆಸ್ತಿಗಳನ್ನು ಉಳಿಸಲು ಮತ್ತು ದೇಶದ 18 ರಾಜ್ಯಗಳಲ್ಲಿ ಬರದ ಪರಿಸ್ಥಿತಿಯಿಂದ ಉದ್ಯೋಗಾವಕಾಶ ಕಡಿಮೆಯಾಗಿ ನರಳುತ್ತಿರುವ ಕೃಷಿಕೂಲಿಕಾರರನ್ನು ರಕ್ಷಿಸಲು ಕ್ರಮ ಕೈಗೊಳ್ಳುವ ಬಗ್ಗೆ ನಿರ್ಲಕ್ಷ್ಯ ಈ ಬಜೆಟಿನಲ್ಲಿ ಕಾಣುತ್ತದೆ.

–ಅಖಿಲ ಭಾರತ ಕೃಷಿಕೂಲಿಕಾರರ ಸಂಘ

ಬಡ-ಪರ !

* ಕಳೆದ ಬಜೆಟಿನಲ್ಲಿ 14%ವಿದ್ದ ಸೇವಾ ತೆರಿಗೆ ನಂತರ 'ಸ್ವಚ್ಛತಾ ಸೆಸ್'ನಿಂದ 14.5% .ಈಗ 'ಕೃಷಿ ಕಲ್ಯಾಣ ಸೆಸ್' ಹಾಕಿ 15%ಕ್ಕೆ ಏರಿಸಲಾಗಿದೆ.
* ಬಡವರೂ ಸೇರಿದಂತೆ ಎಲ್ಲರಿಂದಲೂ ವಸೂಲು ಮಾಡುವ ಸೆಸ್ ಮತ್ತಿತರ ಪರೋಕ್ಷ ತೆರಿಗೆಗಳ ಪ್ರಮಾಣದಲ್ಲಿ 20,600 ಕೋಟಿ ರೂ. ಹೆಚ್ಚಳ, ಆದರೆ ಹೆಚ್ಚಾಗಿ ಹೆಚ್ಚು ಆದಾಯದ ವಿಭಾಗಗಳಿಂದ ವಸೂಲು ಮಾಡುವ ನೇರ ತೆರಿಗೆಗಳ ಪ್ರಮಾಣವನ್ನು 1060 ಕೋಟಿ ರೂ.ಗಳಷ್ಟು ಇಳಿಸಲಾಗುವುದಂತೆ! **ಜನಸಾಮಾನ್ಯರ ಜನಸಾಮಾನ್ಯರ ಮೇಲೆ ಹೆಚ್ಚಿನ ತೆರಿಗೆ ಹೊರೆ.**
* **ಕಳೆದ ವರ್ಷ ನೇರ ತೆರಿಗೆಗಳ ವಸೂಲಿಯಲ್ಲಿ ಬಜೆಟ್‌ನಲ್ಲಿ ಹೇಳಿದ್ದಕ್ಕಿಂತ** ರೂ. 46,000 ಕೋಟಿ ಕಡಿಮೆ ವಸೂಲಿಯಾಗಿದೆ. ಆದರೆ ಪೆಟ್ರೋಲ್–ಡೀಸೆಲ್ ಮೇಲೆ ಮತ್ತಿತರ ಸರಕುಗಳ ಮೇಲೆ ಅಬಕಾರಿ ಸುಂಕಗಳನ್ನು ಏರಿಸಿ ರೂ. 54,000 ಕೋಟಿ ಹೆಚ್ಚು ಪರೋಕ್ಷ ತೆರಿಗೆಗಳನ್ನು ವಸೂಲಿ ಮಾಡಿ ಹಣಕಾಸು ಕೊರತೆಯನ್ನು ಜಿಡಿಪಿಯ 3.9%ಕ್ಕೆ ಸೀಮಿತಗೊಳಿಸುವ ತಮ್ಮ ಗುರಿಯನ್ನು ಈಡೇರಿಸಿಕೊಂಡರು!
* ಈ ಹಿನ್ನೆಲೆಯಲ್ಲಿ 2016–17ರಲ್ಲಿ ಅವರೇ ಹಾಕಿಕೊಂಡಿರುವ ಹಣಕಾಸು ಕೊರತೆಯನ್ನು 3.5%ಕ್ಕೆ ಇಳಿಸುವ ಗುರಿಯನ್ನು ಹಾಕಿಕೊಂಡಿದ್ದಾರೆ. ತೆರಿಗೆಗಳನ್ನು ಲೆಕ್ಕ ಹಾಕಿರುವುದು ಜಿಡಿಪಿ 11% ದರದಲ್ಲಿ ಬೆಳೆಯುತ್ತದೆ ಎಂಬ ನಿರೀಕ್ಷೆಯಿಂದ. ಅದರೆ ಇದು ಸಾಧ್ಯವಿಲ್ಲವೆಂಬುದು ಈಗ ಖಚಿತ. ಆದ್ದ–ರಿಂದ ಇನ್ನೆಷ್ಟು ಹೆಚ್ಚಿನ ಪರೋಕ್ಷ ತೆರಿಗೆಗಳ ಹೊರೆಗಳಿಗೆ ಜನಸಾಮಾನ್ಯರು ಸಿದ್ಧರಾಗಬೇಕು?



ವ್ಯಂಗ್ಯ ಚಿತ್ರ ಕೃಪೆ: ಗೋಕುಲ್, ಡೆಕ್ಕನ್ ಕ್ರಾನಿಕಲ್

ಭರ್ಜರಿ ಮಾತುಗಳ ನಡುವೆ ಕಾರ್ಮಿಕರು ಎತ್ತಿರುವ ಪ್ರಶ್ನೆಗಳಿಗೆ ಉತ್ತರವೇ ಇಲ್ಲ–ಸಿಐಟಿಯು

* ಹಿಂದಿನ ಎನ್‌ಡಿಎ ಸರಕಾರ ಆರಂಭಿಸಿದ್ದ ಶೇರು ಹಿಂಪಡಿಕೆ ಇಲಾಖೆಗೆ ಈಗ 'ಹೂಡಿಕೆ ಮತ್ತು ಸಾರ್ವಜನಿಕ ಆಸ್ತಿ ನಿರ್ವಹಣೆಯ ಇಲಾಖೆ' ಎಂಬ ಮರುನಾಮಕರಣ

* **ಸಾರ್ವಜನಿಕ ವಲಯದ ಉದ್ದಿಮೆಗಳ ಶೇರುಗಳನ್ನು ಮಾತ್ರವಲ್ಲ, ಅವುಗಳ ಆಸ್ತಿಗಳನ್ನೂ ಮಾರಾಟ ಮಾಡುವ ಹುನ್ನಾರ ಈ ಬಜೆಟಿನಲ್ಲಿ ಕಾಣುತ್ತಿದೆ.**

ಸಾರ್ವಜನಿಕ ವಲಯದ ಉದ್ದಿಮೆಗಳ ಶೇರು ಮಾರಾಟದಿಂದ 56,500 ಕೋಟಿ ರೂ.ಗಳನ್ನು ಎತ್ತುವ ಪ್ರಸ್ತಾವವೂ ಈ ಬಜೆಟಿನಲ್ಲಿದೆ. ತೈಲವಲಯವನ್ನು ದೇಶೀ–ವಿದೇಶೀ ಖಾಸಗಿ ಕಾರ್ಪೊರೇಟ್‌ಗಳಿಗೆ ಭಾರೀ ರಿಯಾಯ್ತಿಗಳನ್ನು ನೀಡಿ ಇನ್ನಷ್ಟು ತೆರೆದು ಕೊಡಲಾಗುತ್ತದೆ.

ಸಾರ್ವಜನಿಕ ವಲಯದ ಸಾಮಾನ್ಯ ವಿಮಾ ಕಂಪನಿಗಳ ಶೇರುಗಳ ಮಾರಾಟ ಮಾಡಲಾಗುತ್ತದೆ.

ಭಾರತದ ಆಹಾರ ಉತ್ಪನ್ನಗಳ ಮಾರಾಟಕ್ಕೆ 100ಶೇ. ಎಫ್‌ಡಿಐಗೆ ಆಹ್ವಾನ ಕೊಡಲಾಗುತ್ತಿದೆ!

* **ಮೋಟಾರು ವಾಹನ ಕಾಯ್ದೆಯನ್ನು ತಿದ್ದುಪಡಿ ಮಾಡಿ ಪ್ರಯಾಣಿಕ ಸಾರಿಗೆ ವಲಯುವನ್ನು ಖಾಸಗಿಯುವರಿಗೆ ತೆರೆಯಲಾಗುತ್ತದೆ,** ಈ ಮೂಲಕ ಲಾಭದಾಯಕ ರೂಟ್‌ಗಳನ್ನು ಖಾಸಗಿಯವರಿಗೆ ವಹಿಸಿ ಲಾಭದಾಯಕವಲ್ಲದ, ಆದರೆ ಅಗತ್ಯವಾದ ರೂಟ್‌ಗಳನ್ನು ಮಾತ್ರ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳು ನಡೆಸುವಂತಹ ಪರಿಸ್ಥಿತಿಯ ನಿರ್ಮಾಣಕ್ಕೆ, ಆಮೂಲಕ ಅವನ್ನು ಸಾಯಿಸುವ ಹುನ್ನಾರಕ್ಕೆ ಅವಕಾಶ ಕಲ್ಪಿಸಲಾಗಿದೆ.

* ದೊಡ್ಡ ಕಾರ್ಪೊರೇಟ್‌ಗಳು ಸಾರ್ವಜನಿಕ ವಲಯದ ಬ್ಯಾಂಕುಗಳಿಂದ ಪಡೆದ ಸಾಲಗಳನ್ನು ಮರುಪಾವತಿ ಮಾಡದೆ ಉಳಿಸಿಕೊಂಡ ಬೃಹತ್ ಮೊತ್ತಗಳ ವಸೂಲಿಗೆ ಏನೂ ಕ್ರಮಗಳಿಲ್ಲ, ಬೇಕೆಂದೇ ಬಾಕಿ ಮಾಡಿಕೊಂಡವರಿಗೆ ಶಿಕ್ಷೆಯಿಲ್ಲ, ಅತ್ತ **ಸಾರ್ವಜನಿಕ ವಲಯದ ಬ್ಯಾಂಕುಗಳ ಬ್ಯಾಲನ್ಸ್ ಶೀಟುಗಳನ್ನು ಶುದ್ಧಗೊಳಿಸಲು ಜನರಿಂದ ವಸೂಲಿ ಮಾಡಿದ ತೆರಿಗೆ ಹಣವನ್ನು ಕೊಡುವ ಪ್ರಸ್ತಾವ ಮಾತ್ರ ಇದೆ.**

* ಹಣಕಾಸು ಮಂತ್ರಿಗಳು ಕಾರ್ಪೊರೇಟ್ ತೆರಿಗೆಗಳನ್ನು ಇಳಿಸುವ ಮಾತಾಡಿದ್ದಾರೆ. ಆದರೆ ಹಣದುಬ್ಬರದಿಂದ ಅರ್ಥಹೀನವಾಗಿರುವ **ಆದಾಯ ತೆರಿಗೆಯ ಸ್ಲಾಬ್‌ಗಳನ್ನು ಏರಿಸುವ ಮಾತಿಲ್ಲ ಬದಲಿಗೆ, ಕಾರ್ಮಿಕರ, ಸಂಬಳದಾರರ ಜೀವನಪರ್ಯಂತದ ಭವಿಷ್ಯ ನಿಧಿ ಉಳಿತಾಯದ ಮೇಲೆ ತೆರಿಗೆ ಹಾಕುವ ಪ್ರಸ್ತಾವ ಇಟ್ಟಿದ್ದಾರೆ.** ಇದೇ ವ್ಯಕ್ತಿ , ಎರಡು ವರ್ಷಗಳ ಹಿಂದೆ, ರಾಜ್ಯಸಭೆಯಲ್ಲಿ ಪ್ರತಿಪಕ್ಷದ ನಾಯಕರಿದ್ದಾಗ ವೈಯಕ್ತಿಕ ತೆರಿಗೆಯ ಕನಿಷ್ಟ ಮಿತಿಯನ್ನು ರೂ.2ಲಕ್ಷದಿಂದ ರೂ.5ಲಕ್ಷಕ್ಕೆ ಏರಿಸಬೇಕು ಎಂದಿದ್ದರು!

* ನೇಮಕಾತಿಗಳ ಮೇಲೆ ಸರಕಾರದ ನಿಷೇಧ ಮುಂದುವರೆಯುತ್ತಿದೆ, ಹಲವಾರು ಉದ್ಯಮಗಳಲ್ಲಿ ಸಾವಿರಾರು ಉದ್ಯೋಗಗಳು ಇಲ್ಲವಾಗುತ್ತಿವೆ. ಇಂತಹ ಸನ್ನಿವೇಶದಲ್ಲಿ ಸರಕಾರ ಮೂರು ವರ್ಷಗಳ ಕಾಲ ಭವಿಷ್ಯ ನಿಧಿಯ ಪಾಲನ್ನು ತೆತ್ತು ಉದ್ಯೋಗಾವಕಾಶ ನಿರ್ಮಿಸುವ ಹಾಸ್ಯಾಸ್ಪದ ನಿರೀಕ್ಷೆ ಇಟ್ಟುಕೊಂಡಿದೆ!

* ಸಾವಿರಾರು ವಿದ್ಯಾವಂತ ಯುವಜನರು ಸರಿಯಾದ ಉದ್ಯೋಗ ಸಿಗದೆ ಪರದಾಡುತ್ತಿರುವಾಗ 'ಸ್ಕಿಲ್ ಡೆವಲಪ್‌ಮೆಂಟ್'(ಕೌಶಲ್ಯ ಅಭಿವೃದ್ಧಿ) ಕೇಂದ್ರಗಳನ್ನು ಸ್ಥಾಪಿಸುವ ಮಾತಿಗೆ ಏನರ್ಥ?

***ಸರಕಾರ ಮತ್ತೆ ಈ ಬಜೆಟಿನಲ್ಲಿ ಅಸಂಘಟಿತ ಕಾರ್ಮಿಕರು ಮತ್ತು ಸ್ಕೀಮ್ ಕೆಲಸಗಾರರನ್ನು ನಿರ್ಲಕ್ಷಿಸಿದೆ** .ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ಒದಗಿಸಲು ಒಂದು ರಾಷ್ಟ್ರೀಯ ನಿಧಿಯನ್ನು ರಚಿಸಬೇಕು, ಲಕ್ಷಾಂತರ ಅಂಗನವಾಡಿ, ಆಶಾ, ಬಿಸಿಯೂಟ, ಎನ್‌ಸಿಎಲ್‌ಪಿ ಸಿಬ್ಬಂದಿ ಮತ್ತು ಇತರ ಸ್ಕೀಮ್‌ಗಳಲ್ಲಿ ಕೆಲಸ ಮಾಡುತ್ತಿರುವವರನ್ನು ಕಾರ್ಮಿಕರು ಎಂದು ಗುರುತಿಸಿ ಅವರಿಗೆ ಕನಿಷ್ಟ ಕೂಲಿ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ಕೊಡಬೇಕು ಎಂಬ **ದೇಶದ ಕಾರ್ಮಿಕ ಆಂದೋಲನದ ಒಕ್ಕೊರಲಿನ ಬೇಡಿಕೆಗಳನ್ನು ಈ ಬಜೆಟ್ ಸಂಪೂರ್ಣವಾಗಿ ನಿರ್ಲಕ್ಷಿಸಿದೆ.**

* ಕೇಂದ್ರ ಕಾರ್ಮಿಕ ಸಂಘಟನೆಗಳು ಸರಕಾರ ಕರೆದ ಬಜೆಟ್‌ಪೂರ್ವ ಸಭೆಯಲ್ಲಿ ಎತ್ತಿದ ಯಾವುದೇ ಪ್ರಶ್ನೆಯನ್ನು ಪರಿಗಣಿಸದ ಹಣಕಾಸು ಮಂತ್ರಿಗಳು ಮಾಲಕರ ಬೇಡಿಕೆಗಳನ್ನು ಮಾತ್ರ ಉದಾರವಾಗಿ ಸ್ವೀಕರಿಸಿದ್ದಾರೆ. ಅಂಗಡಿಗಳು ಮತ್ತು ಇತರ ವಾಣಿಜ್ಯ ಸಂಸ್ಥೆಗಳಲ್ಲಿ ಕೆಲಸ ಮಾಡುವ ನೌಕರರಿಗೆ ಕಾನೂನು ಪ್ರಕಾರ ಇರುವ ವಾರದ ರಜಾವನ್ನು ರದ್ದು ಮಾಡಲು ಅದು ಒಪ್ಪಿದೆ, ಈಮೂ;ಲಕ ಈ ನೌಕರರಿಗೆ ವಾರದ ರಜಾದಿನವನ್ನು ನಿರಾಕರಿಸಿದೆ ಮತ್ತು ಕೆಲಸದ ಅವಧಿಯನ್ನು ಹೆಚ್ಚಿಸಿದೆ.

2016–17ರ ಬಜೆಟ್ ಆಡಂಬರದ ಮಾತುಗಳ ಕಸರತ್ತು ಮಾತ್ರ, ಅದರಲ್ಲಿ ಜನಸಾಮಾನ್ಯರಿಗೆ, ರೈತರಿಗೆ ಕಾರ್ಮಿಕರಿಗೆ ಯಾವುದೇ ಗಮನಾರ್ಹ ಪರಿಹಾರದ ಪ್ರಸ್ತಾವಗಳಿಲ್ಲ . ಆಡಂಬರದ ಮಾತುಗಳ ನಡುವೆ ಕಾರ್ಪೊರೇಟ್ ವಲಯಕ್ಕೆ ಇನ್ನಷ್ಟು ಸೌಲಭ್ಯಗಳನ್ನು ಕಲ್ಪಿಸಿರುವುದನ್ನು ಮರೆಮಾಚುವ ಪ್ರಯತ್ನ ಇದರಲ್ಲಿ ಕಾಣುತ್ತದೆ.


–ಸಿಐಟಿಯು

ಮಹಿಳೆಯರನ್ನು ಉಪೇಕ್ಷಿಸುವ ಬಜೆಟ್– ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ

* **'ಲಿಂಗ ಬಜೆಟ್'**ಎನ್ನುವುದು ಒಟ್ಟು ಖರ್ಚಿನಲ್ಲಿ ಮಹಿಳೆಯರ ಪ್ರಯೋಜನಕ್ಕೆಂದು ಎಷ್ಟು ಖರ್ಚು ಮಾಡಲಾಗುತ್ತದೆ ಎಂಬುದನ್ನು ಅಂದಾಜು ಮಾಡುತ್ತದೆ. **ಇದರಲ್ಲಿ ಏನೇನೂ ಹೆಚ್ಚಳವಾಗಿಲ್ಲ.** 2015–16ರಲ್ಲಿ ಪರಿಷ್ಕೃತ ಅಂದಾಜಿನ ಪ್ರಕಾರ 4.55ಶೇ. ಖರ್ಚಾಗಿದೆ. ಈ ವರ್ಷ ಅದು 4.58ಶೇ. ಅಷ್ಟೇ
* 1.2 ಕೋಟಿ ಎಲ್‌ಪಿಜಿ(ಅಡುಗೆ ಅನಿಲ) ಸಂಪರ್ಕಗಳನ್ನು ಕೊಡಲು ಆರಂಭಿಕ ಖರ್ಚಿಗಾಗಿ 2000 ಕೋಟಿ ರೂ.ಗಳನ್ನು ಮೀಸಲಿಟ್ಟು ಬಡ ಮಹಿಳೆಯರ ಸಂಕಟವನ್ನು ಶಮನಗೊಳಿಸುವ ದೊಡ್ಡ ಪ್ರದರ್ಶನ ನಡೆಸಲಾಗಿದೆ. ಇದನ್ನು ಲೆಕ್ಕ ಹಾಕಿದರೆ ತಲಾ ಕುಟಂಬಕ್ಕೆ 1300ರೂ. ಬರುತ್ತದೆ, ಅಂದರೆ **ವರ್ಷದಲ್ಲಿ ಎರಡು ಸಿಲಿಂಡರ್‌ಗಳಿಗಾಗುವಷ್ಟು !** ಇಂತಹ ಹೆಚ್ಚಿನ ಕುಟುಂಬಗಳಿಗೆ ಈಗ ಮಾರುಕಟ್ಟೆ ಬೆಲೆಯಾದ 600ರೂ. ತೆರುವ ಶಕ್ತಿಯಿಲ್ಲ. ಸಿಲಿಂಡರ್‌ಗಳ ಮೇಲೆ ಮಿತಿ ಮತ್ತು ನೇರ ನಗದು ವರ್ಗಾವಣೆ(ಡಿಬಿಟಿ)ಯ ಜಾರಿಯಿಂದಾಗಿ ಈಗಾಗಲೇ ಹಲವು ಬಡ ಮತ್ತು ಮಧ್ಯಮ ವರ್ಗದ ಕುಟುಂಬಗಳಿಗೆ ಬಹಳಷ್ಟು ತೊಂದರೆ ಉಂಟಾಗಿದೆ.
* 'ಪರಿವರ್ತನಕಾರಿ' ಎಂದು ಹೇಳಿಕೊಂಡಿರುವ ಬಜೆಟ್' ಕೃಷಿ ದುಡಿಮೆಯಲ್ಲಿ ತೊಡಗಿರುವವರಲ್ಲಿ ದೊಡ್ಡ ಸಂಖ್ಯೆಯಲ್ಲಿರುವ ಮಹಿಳೆಯರಿಗೆ, ರೈತರನ್ನು ಬೆಂಬಲಿಸುವ ಹೆಸರಿನಲ್ಲಿ ದೊಡ್ಡ ಮೋಸ ಮಾಡಿದೆ. **ಮುಂದಿನ ಐದು ವರ್ಷಗಳಲ್ಲಿ ರೈತರ ಆದಾಯವನ್ನು ದುಪ್ಪಟ್ಟು ಮಾಡುವ ದಾವೆ ಇದೆ. ಆದರೆ ಇದನ್ನು ಈಡೇರಿಸುವುದು ಹೇಗೆ ಎಂಬ ಬಗ್ಗೆ ಬಜೆಟಿನಲ್ಲಿ ಏನೂ ಇಲ್ಲ.**
* **ಗ್ರಾಮೀಣ ಮಾರುಕಟ್ಟೆಗಳಿಗೆ 100ಶೇ. ಎಫ್‌ಡಿಐಗೆ ಅವಕಾಶ ಕೊಡಲಾಗಿದೆ. ಇದು ಸಣ್ಣ ರೈತರು, ಅದರಲ್ಲೂ ಮಹಿಳೆಯರ ಮೇಲೆ ವಿನಾಶಕಾರೀ ಪರಿಣಾಮ ಬೀರಲಿದೆ,** ಭಾರತದ ಕೃಷಿ ಮಾರುಕಟ್ಟೆಗಳನ್ನು ದೊಡ್ಡ ಬಹುರಾಷ್ಟ್ರೀಯ ಕಂಪನಿಗಳ ಗುತ್ತೇದಾರಿ ಹತೋಟಿಗೆ ಒಳಪಡಿಸುತ್ತದೆ.
* ಕಳೆದ ವರ್ಷ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿಗೆ ನೀಡಬೇಕಾದ ಹಣವನ್ನು ಅರ್ಧಕ್ಕೆ ಇಳಿಸಲಾಯಿತು, 21194 ಕೋಟಿ ರೂ.ಗಳ ಬದಲು ಕೇವಲ 10382 ಕೋಟಿ ರೂ.ಗಳನ್ನು ಕೊಡಲಾಯಿತು. ಮಹಿಳಾ ಮತ್ತು ಮಕ್ಕಳ ಅಭಿವೃದಿ ಇಲಾಖೆಯಿಂದ ಹಣಕಾಸು ಮಂತ್ರಿಗಳು ತೀವ್ರ ಟೀಕೆಯನ್ನು ಎದುರಿಸಿದ ನಂತರ ಅದನ್ನು 17352 ಕೋಟಿ ರೂ.ಗಳಿಗೆ ಏರಿಸಲಾಯಿತು. ಈ ವರ್ಷ ಕೊಟ್ಟಿರುವ ಹಣ 17408 ಕೋಟಿ ರೂ.ಗಳು. ಇದು ಹಿಂದಿನ ಹಲವು ವರ್ಷಗಳಲ್ಲಿ ಕೊಟ್ಟಿರುವುದಕ್ಕಿಂತಲೂ ಬಹಳಷ್ಟು ಕಡಿಮೆ. **'ಮಾ ಔರ್ ಬೇಟಿಯಾಂ' ಎಂದು ತಾಯಿ ಮತ್ತು ಮಕ್ಕಳ ಕಲ್ಯಾಣದ ಬಗ್ಗೆ ಮೋದಿ ಸರಕಾರದ ಮಾತುಗಳು ಕೇವಲ ಬಾಯುಪಚಾರಕ್ಕೆ.**
* **ಐಸಿಡಿಎಸ್‌ಗೆ ನೀಡುವ ಹಣದಲ್ಲಿ ಕಡಿತ ಮುಂದುವರೆದಿದೆ.** 2015–16ರಲ್ಲಿ ಈ ಬಾಬ್ತಿನಲ್ಲಿ ಹಣದಲ್ಲಿ ಭಾರೀ ಖಡಿತ ಮಾಡಿ 8000ಕೋಟಿ ರೂ.ಗಳನ್ನಷ್ಟೇ ಕೊಡಲಾಗಿತ್ತು. ನಂತರ ವಾಸ್ತವವಾಗಿ ಖರ್ಚು ಮಾಡಿದ ಮೊತ್ತ 15394 ಕೋಟಿ ರೂ. ಈ ವರ್ಷ ಕೊಟ್ಟಿರುವುದು, ಅದಕ್ಕಿಂತ ಕಡಿಮೆ, 14,000 ಕೋಟಿ ರೂ. ಹಣದುಬ್ಬರವನ್ನು ಪರಿಗಣಿಸದಿದ್ದರೂ, ಇದು ಕಳೆದ ವರ್ಷದ ವಾಸ್ತವ ಖರ್ಚಿಗಿಂತ 10%ದಷ್ಟು ಕಡಿಮೆ.
* ಕಳೆದೆರಡು ವರ್ಷಗಳಲ್ಲಿ ಮಧ್ಯಾಹ್ನದ ಊಟ(ಬಿಸಿಯೂಟ) ಸ್ಕೀಮಿಗೆ ಎನ್‌ಡಿಎ ಸರಕಾರ ಹಣ ನೀಡಿಕೆಯಲ್ಲಿ ದೊಡ್ಡ ಕಡಿತ ಮಾಡಿತು. 2014–15ರಲ್ಲಿ ಇದಕ್ಕೆ ಕೊಟ್ಟದ್ದು 13152 ಕೋಟಿ ರೂ. ಈ ವರ್ಷ ಅದನ್ನು ಕೇವಲ 9700 ಕೋಟಿ ರೂ.ಗಳಿಗೆ ಇಳಿಸಲಾಗಿದೆ.

ಮುಂದಿನ ವರ್ಷದಿಂದ 'ಯೋಜನಾ' ಮತ್ತು 'ಯೋಜನೇತರ' ಎಂಬ ವ್ಯತ್ಯಾಸವನ್ನು ತೆಗೆದು ಹಾಕುವುದಾಗಿ ಹಣಕಾಸು ಮಂತ್ರಿಗಳು ಪ್ರಕಟಿಸಿದ್ದಾರೆ. ಅಂದರೆ, ಇನ್ನು ಮುಂದೆ ಆದ್ಯತೆಗಳನ್ನು ಗುರುತಿಸಿಕೊಳ್ಳುವುದಿಲ್ಲ, ಬಡತನ ನಿವಾರಣೆ, ಮಹಿಳೆಯರು, ದಲಿತರು, ಬುಡಕಟ್ಟು ಜನಗಳು ಮತ್ತು ಸಮಾಜದ ಇತರ ವಂಚಿತ ವಿಭಾಗಗಳ ವಿಶಿಷ್ಟ ಆವಶ್ಯಕತೆಗಳ ಮೇಲೆ ಬಜೆಟ್ ಸಂಪನ್ಮೂಲಗಳನ್ನು ನಿರ್ದಿಷ್ಟವಾಗಿ ನೀಡುವ ಮೂಲಕ ಗಮನ ಕೇಂದ್ರೀಕರಿಸಲಾಗುವುದಿಲ್ಲ ಎಂದೇ ಇದರ ಅರ್ಥ. ಇಂತಹ ಅಭಿವೃದ್ಧಿ ಗುರಿಗಳತ್ತ ಆರ್ಥಿಕ ಧೋರಣೆಗಳನ್ನು ತಿರುಗಿಸುವುದಿಲ್ಲ ಎಂದೇ ಹೇಳಿರುವಂತಾಗಿದೆ. ಈ ಬಜೆಟ್ ಸ್ಪಷ್ಟವಾಗಿ ಮಾರುಕಟ್ಟೆಯ ಹಿತಾಸಕ್ತಿಯನ್ನು ಎತ್ತಿ ಹಿಡಿಯುತ್ತದೆ. ಅದರಲ್ಲಿ ಮಹಿಳೆಯರಿಗೆ ಸ್ಥಾನವಿಲ್ಲ

–ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ



ವ್ಯಂಗ್ಯಚಿತ್ರ ಕೃಪೆ: ಸತೀಶ್ ಆಚಾರ್ಯ

ಎಲ್ಲರಿಗೂ ಆರೋಗ್ಯ ಇನ್ನೂ ಕನಸಷ್ಟೇ

* ಬಿಜೆಪಿಯ ಚುನಾವಣಾ ಪ್ರಣಾಳಿಕೆ 'ಎಲ್ಲರಿಗೂ ಆರೋಗ್ಯ'ದ ಮಾತಾಡಿದೆ. ಇದಕ್ಕೆ ಜಿಡಿಪಿಯ 2%ದಷ್ಟು ಖರ್ಚು ಮಾಡಬೇಕು. ಆದರೆ ಈ ಬಾರಿಯ ಆರೋಗ್ಯ ಬಜೆಟ್‌ನಲ್ಲಿ 9–10ಶೇ. ಹೆಚ್ಚಳ ಮಾಡಿದರೂ, ಅದು ಇನ್ನೂ ಜಿಡಿಪಿಯ 0.24% ದಲ್ಲೇ ಇದೆ.

* ಈ ಬಜೆಟ್ ಯಾವುದೇ ಪರಿಣಾಮ ಬೀರಲಾರದ ಆರೋಗ್ಯ ವಿಮಾ ಮಾದರಿಯನ್ನೇ ಹಿಡಿದಿದೆ. ಎರಡು ಸ್ಕೀಮುಗಳನ್ನು ಪ್ರಕಟಿಸಲಾಗಿದೆ–ಒಂದು, ಬಿಪಿಎಲ್ ಕುಟುಂಬಗಳಿಗೆ 1ಲಕ್ಷ ರೂ. ಆರೋಗ್ಯ ವಿಮೆ ಮತ್ತು ಎರಡು, ರಾಷ್ಟ್ರೀಯ ಡಯಲಿಸಿಸ್ ಸೇವಾ ಕಾರ್ಯಕ್ರಮ

* ಈ ಬಜೆಟಿನಲ್ಲಿ ಆರೋಗ್ಯಕ್ಕೆ ಕೊಟ್ಟಿರುವ ಎಲ್ಲ 19,000 ಕೋಟಿ ರೂ.ಗಳನ್ನುಆರೋಗ್ಯ ವಿಮಾ ಕಂಪನಿಗಳಿಗೆ ಪ್ರೀಮಿಯಂ ಆಗಿ ತೆತ್ತರೂ 8 ಕೋಟಿಯಷ್ಟಿರುವ ಬಿಪಿಎಲ್ ಕುಟುಂಬಗಳಿಗೆ ಅದನ್ನು ಹಂಚಿದಾಗ ಹೆಚ್ಚೆಂದರೆ ತಲಾ ರೂ.2500 ಬರುತ್ತದೆ, ಇದು ಖಾಸಗಿ ಆಸ್ಪತ್ರೆಗಳ ಹೊರರೋಗಿ ವಿಭಾಗಕ್ಕೆ ನಾಲ್ಕೈದು ಬಾರಿ ಹೋಗಲಷ್ಟೇ ಸಾಲುವಂತದ್ದು.

* ವಾಸ್ತವವಾಗಿ ಈ ಎರಡೂ ಸ್ಕೀಮುಗಳಲ್ಲಿ ಬಡವರಿಗೆ ಆರೋಗ್ಯ ಸೇವೆಯನ್ನು ಒದಗಿಸುವುದಕ್ಕಿಂತ ಹೆಚ್ಚಾಗಿ, ಪಿಪಿಪಿ ಮಾದರಿಯಲ್ಲಿ ಖಾಸಗಿ ಆಸ್ಪ ತ್ರೆಗಳಿಗೆ ನೆರವಾಗುವ ಕಾತುರವಷ್ಟೇ ಕಾಣುತ್ತದೆ.

* ಅಲ್ಲದೆ ಈ ವಿಮಾ ದಾರಿಯಿಂದ ರಾಷ್ಟ್ರೀಯ ಆರೋಗ್ಯ ಮಿಶನ್‌ಗೆ ಸಾಕಷ್ಟು ಹಣ ಉಳಿಯುವುದಿಲ್ಲ

ಶಿಕ್ಷಣಕ್ಕೆ ದೊರೆತಿರುವುದು ಇನ್ನೂ ಕಡಿಮೆ

* ಕಳೆದ ಬಜೆಟಿನಲ್ಲಿ ಶಿಕ್ಷಣಕ್ಕೆ ಕೊಟ್ಟಿರುವ ಹಣ ಜಿಡಿಪಿಯ 0.50ಶೇ. ಇತ್ತು, ಒಟ್ಟು ಬಜೆಟ್ ಖರ್ಚಿನ 3.8% ಇತ್ತು. ಈ ಬಾರಿ ಅದು ಅನುಕ್ರಮವಾಗಿ 0.48% ಮತ್ತು 3.7%ಕ್ಕೆ ಇಳಿದಿದೆ.

* ಕೌಶಲ್ಯ ಬೆಳವಣಿಗೆಗೆ ರೂ.1804 ಕೋಟಿ ಕೊಡಲಾಗಿದೆ. ಆದರೆ ಯುಜಿಸಿ/ ಐಐಟಿಗಳು/ಐಐಎಂಗಳು/ಎನ್‌ಐಟಿಗಳಿಗೆ ನೀಡುವ ಹಣವನ್ನು ಅರ್ಧಕ್ಕೆ ಇಳಿಸಿರುವಾಗ ಈ ಹಣದಿಂದ ಎಂತಹ ಕೌಶಲ್ಯ ಬೆಳವಣಿಗೆ ಸಾಧ್ಯ ಎಂಬ ಪ್ರಶ್ನೆ ಎದ್ದಿದೆ.

* ಬಜೆಟಿನಲ್ಲಿ ಹೇಳಿರುವ ಎರಡು ಸ್ಕೀಮುಗಳು ಉನ್ನತ ಶಿಕ್ಷಣ ಹಣಕಾಸು ಏಜೆಂಸಿ ಮತ್ತು ಬೃಹತ್ ತೆರೆದ ಶಿಕ್ಷಣದ ಉದ್ಯಮಶೀಲತೆ ಶಿಕ್ಷಣ ಮತ್ತು ತರಬೇತಿ ಶಿಕ್ಷಣ ವ್ಯವಸ್ಥೆಯೊಳಗೆ ತಾರತಮ್ಯತೆಯನ್ನು ಬೆಳೆಸುವ ಕ್ರಮಗಳು. ಮೊದಲಿನದ್ದು ಹಣವಿದ್ದವರಿಗೇ ಶಿಕ್ಷಣವನ್ನು ಸೀಮಿತಗೊಳಿಸಿದರೆ, ಎರಡನೆಯದ್ದು ದೊಡ್ಡ ಬಂಡವಳಿಗರಿಗೆ ಅಗ್ಗದ ಶ್ರಮವನ್ನು ಪೂರೈಸುವಂತದ್ದು.

ಬಜೆಟ್ 2016 ನನ್ನ ಪರೀಕ್ಷೆ:ಮೋದಿ



ಕಾ. ಅಬ್ರಹಾಂ ಕರ್ಕಡರಿಗೆ ಶ್ರದ್ಧಾಂಜಲಿ

ಕುಂದಾಪುರದಲ್ಲಿ ಕೇಂದ್ರವಾಗಿಟ್ಟು ಉಡುಪಿ, ದ.ಕ., ಉತ್ತರ ಕನ್ನಡ ಜಿಲ್ಲೆಗಳಲ್ಲಿ ಹಂಚಿನ ಕಾರ್ಖಾನೆ ಕಾರ್ಮಿಕರ ಬಲಿಷ್ಟ ಸಂಘಟನೆಯನ್ನು ಕಟ್ಟಿ, ಕುಂದಾಪುರ ತಾಲೂಕಿನಲ್ಲಿ ಭೂಮಾಲೀಕರ ತೀವ್ರ ದಬ್ಬಾಳಿಕೆಯನ್ನು ಎದುರಿಸಿ ರೈತರಿಗೆ ಭೂಮಿಯನ್ನು ಒದಗಿಸಿಕೊಟ್ಟ ರೈತ ಚಳುವಳಿಯ ಧೀಮಂತ ನಾಯಕರೂ, ದ.ಕ.ಮತ್ತು ಉಡುಪಿ ಜಿಲ್ಲೆಗಳಲ್ಲಿ ಸಿಪಿಐ(ಎಂ) ಪಕ್ಷವನ್ನು ಬಲಿಷ್ಟಗೊಳಿಸಲು ದುಡಿದು ಕಳೆದ ಜನವರಿ 31 ರಂದು ತಮ್ಮ 80ರ ವಯಸ್ಸಿನಲ್ಲಿ ನಿಧನರಾದ ಕಾ|ಅಬ್ರಹಾಂ ಕರ್ಕಡ ಅವರಿಗೆ ದ.ಕ.ಸಿಪಿಐ(ಎಂ) ಪಕ್ಷದ ವತಿಯಿಂದ ಮಾರ್ಚ್ 1 ರಂದು ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಮಂಗಳೂರಿನ ಸರಕಾರಿ ನೌಕರರ ಸಂಘದ ಸಭಾಂಗಣದಲ್ಲಿ ನಡೆದ ಶ್ರದ್ಧಾಂಜಲಿ ಸಭೆಯಲ್ಲಿ ಸಿಪಿಐ(ಎಂ) ಅಲ್ಲದೆ ಸಿಪಿಐ ಪಕ್ಷದ ಸಂಗಾತಿಗಳು, ಅಬ್ರಹಾಂ ಕರ್ಕಡ ಅವರ ಕುಟುಂಬದ ಸದಸ್ಯರು ಭಾಗವಹಿಸಿದ್ದರು.

ಸಿಪಿಐ(ಎಂ)ನ ಹಿರಿಯ ಮುಖಂಡ ಕೆ.ಆರ್.ಶ್ರೀಯಾನ್, ಸಿಪಿಐ ಪಕ್ಷದ ಹಿರಿಯ ಮುಖಂಡ ಬಿ.ಕೆ.ಕೃಷ್ಣಪ್ಪ ಇಬ್ಬರೂ ತಮ್ಮ ಸಮವಯಸ್ಕರಾದ ಅಬ್ರಹಾಂ ಕರ್ಕಡರು ಸಂಘಟನೆಯಲ್ಲಿ ಕ್ರಿಯಾಶೀಲರಾದಂದಿನಿಂದ ತಾವು ಗಮನಿಸಿದ ಅವರ ಸಂಘಟನಾ ಶಕ್ತಿ, ಸಮರ್ಪಣಾ ಭಾವ, ಪಕ್ಷ ನಿಷ್ಠೆ, ಹೋರಾಟದ ಕೆಚ್ಚು ಹಾಗೂ ಧೈರ್ಯಶಾಲಿತ್ವದ ಬಗ್ಗೆ ಕೊಂಡಾಡಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಸಿಪಿಐ(ಎಂ) ರಾಜ್ಯ ಸೆಕ್ರಟಾರಿಯಟ್ ಸದಸ್ಯ ಜೆ.ಬಾಲಕೃಷ್ಣ ಶೆಟ್ಟಿ, ಪ್ರಾಸ್ತಾವಿಕ ಮಾತನಾಡಿದ ಪಕ್ಷದ ಜಿಲ್ಲಾ ಕಾರ್ಯದರ್ಶಿ ವಸಂತ ಆಚಾರಿ, ಧನ್ಯವಾದ ನೀಡಿದ ಪಕ್ಷದ ರಾಜ್ಯ ಸಮಿತಿ ಸದಸ್ಯ ಯಾದವ ಶೆಟ್ಟಿ ಕಾಡಾ ಅಬ್ರಹಾಂ ಕರ್ಕಡರ ವ್ಯಕ್ತಿತ್ವದಿಂದ ತಾವು ಕಲಿತುಕೊಂಡ ಸಂಗತಿಗಳನ್ನು ವಿವರಿಸಿದರು.



ವಾ. ಉಚ್ಚಿಲ್

ಬದಲಿ ಉದ್ಯೋಗ ಆಗ್ರಹಿಸಿ ಅಂಬ್ಲಮೊಗರಿನಲ್ಲಿ ಬೀಡಿ ಕಾರ್ಮಿಕರ ಪ್ರತಿಭಟನೆ

ಆರೋಗ್ಯಕ್ಕೆ ಹಾನಿಕರ ಎನ್ನುವ ನಿಟ್ಟಿನಲ್ಲಿ ಬೀಡಿ ಕೈಗಾರಿಕೆಗಳನ್ನು ಸ್ಥಗಿತಗೊಳಿಸಲು ಕೇಂದ್ರ ಹಾಗೂ ರಾಜ್ಯ ಸರಕಾರಗಳು ಕಾನೂನು ರಚಿಸಿ ಅನುಷ್ಠಾನಕ್ಕೆ ಮುಂದಾಗಿದೆ. ಇದರಿಂದ ಲಕ್ಷಾಂತರ ಬೀಡಿ ಕಾರ್ಮಿಕರು ನಿರ್ಗತಿಕರಾಗುವರು. ಇವರಿಗೆ ಬದಲಿ ಉದ್ಯೋಗವನ್ನು ಸರಕಾರ ಒದಗಿಸಬೇಕೆಂದು ಆಗ್ರಹಿಸಲಾಯಿತು. ಗ್ರಾಮ ಗ್ರಾಮಗಳಲ್ಲೂ ಕಾರ್ಮಿಕರ ಹೆಸರು ನೋಂದಣೆಯ ಭಾಗವಾಗಿ ಕೋಟೆಕಾರು ಸರ್ಕಲ್ ಬೀಡಿ ಲೇಬರ್ ಯೂನಿಯನ್ ನೇತೃತ್ವದಲ್ಲಿ ಅಂಬ್ಲಮೊಗರು ಗ್ರಾಮ ಪಂಚಾಯತು ಮುಂದೆ ಬೀಡಿ ಕಾರ್ಮಿಕರು ಪ್ರತಿಭಟನೆ ನಡೆಸಿದರು.

ಪ್ರತಿಭಟನಾಕಾರರನ್ನುದ್ದೇಶಿಸಿ ಯೂನಿಯನ್ ಅಧ್ಯಕ್ಷರಾದ ಪದ್ಮಾವತಿ ಶೆಟ್ಟಿ, ಕಾರ್ಯದರ್ಶಿ ಜಯಂತ ನಾಯ್ಕ್ ಮಾತನಾಡಿದರು. ಯೂನಿಯನ್ ಮುಖಂಡರಾದ ಸುಂದರ ಕುಂಪಲ, ವಿಲಾಸಿನಿ, ತಾ.ಪಂ.ಮಾಜಿ ಸದಸ್ಯೆ ಶಾಲಿನಿ ಎಸ್.ಪೂಜಾರಿ, ಭಾಗವಹಿಸಿದ್ದರು.

ನಾಳಿನ ಕಾರ್ಯಕ್ರಮಗಳು :

ಮಾರ್ಚ್ 06: ಬಿಜಿವಿಎಸ್ ಹಾಸನ ಜಿಲ್ಲಾ ಸಮ್ಮೇಳನ, ಕಸಾಪ ಭವನ, ಹಾಸನ.

ಮಾರ್ಚ್ 11 : ಕಾರ್ಮಿಕರ ಬೃಹತ್ ವಿಧಾನಸೌಧ ಚಲೋ

ಮಾರ್ಚ್ 30: ಹಾಸ್ಟೆಲ್ ಮತ್ತು ವಸತಿ ಶಾಲಾ ಹೊರಗುತ್ತಿಗೆ ನೌಕರರ ಅನಿರ್ದಿಷ್ಟ ಧರಣಿ, ಬೆಂಗಳೂರು.

ವೆಬ್ ಸೈಟಿನಲ್ಲಿ ಏನಿದೆ?

ಜನಶಕ್ತಿ ಕನ್ನಡ ವಾರಪತ್ರಿಕೆ

janashakthi.co.in

* ಮಹಿಳೆ ಮತ್ತು ದೇಹ ರಾಜಕಾರಣ ಕುರಿತು ಉಪನ್ಯಾಸ – ಹಾಸನ
* ತುಮಕೂರಿನಲ್ಲಿ ಗುತ್ತಿಗೆ ಮುನಿಸಿಪಲ್ ಕಾರ್ಮಿಕರ ಪ್ರತಿಭಟನೆ
* ವಿನಾಯಕ ಸಿಎನ್‌ಸಿ ಕಾರ್ಮಿಕರ ಪ್ರತಿಭಟನೆ, ತುಮಕೂರು.
* ಕುಂದಾಪುರ : ಹಾಸ್ಟೆಲ್ ನೌಕರರ ಸಮಾವೇಶ
* ತುಮಕೂರು ಶೆಟ್ಟಿಹಳ್ಳಿ ಅಂಡರ್‌ಪಾಸ್ ಕಾಮಗಾರಿ ಪೂರ್ಣಗೊಳಿಸಲು ಆಗ್ರಹ
* ವಿವಿದೆಡೆ ನಡೆದ ಅಂಗನವಾಡಿ ಹೋರಾಟದ ವರದಿಗಳು
* ಗ್ರಾಮ ಪಂಚಾಯತಿ ನೌಕರರ ಜಿಲ್ಲಾ ಮಟ್ಟದ ಹೋರಾಟ

ನಾಟಕ ಇಲ್ಲಿಗೆ ಮುಗಿಯಬೇಕಾಗಿತ್ತು...... ಪುಟ 16 ರಿಂದ

ಅಲಂಕಾರ, ಊಟದ ಮೇಜಿನ ಎರಡೂ ದಿಕ್ಕಿಗೂ ಹಚ್ಚಿಡುವ ದೈತ್ಯಾಕಾರದ ಮೇಣದ ಬತ್ತಿ ಎಲ್ಲವೂ ಇಡೀ ದೃಶ್ಯವನ್ನು ಒಂದು ಚಿತ್ರಪಟದಂತೆ ಕಟ್ಟಿ ನಿಲ್ಲಿಸುತ್ತದೆ.

ಅಂತಹದೇ ಇನ್ನೊಂದು ದೃಶ್ಯ : ರಾಣಿ ಧರ್ಮಾಧಿಕಾರಿಯನ್ನು ಭೇಟಿ ಮಾಡಲು ಹೋಗುತ್ತಾಳೆ. ಅವರಿಬ್ಬರ ನಡುವೆ ಅಕ್ರಮ ಸಂಬಂಧವಿದೆ. ಅದನ್ನು ಪ್ರೇಕ್ಷಕರಿಗೆ ತಿಳಿಯ ಪಡಿಸಲು ನಿರ್ದೇಶಕರು ಬಳಸುವುದು ಕೇವಲ ಕೆಲವು ಸ್ವರಗಳು. ಹೌದು ನಾಲ್ಕೈದು ಸ್ವರಗಳ ಸಂಗೀತದ ಗುನುಗುನುವಿಕೆ ಅವರಿಬ್ಬರ ಸಂಬಂಧದ ಇನ್ನೊಂದು ನೆಲೆಯನ್ನು ಅತ್ಯಂತ ನವಿರಾಗಿ ನಮಗೆ ಹೇಳಿಬಿಡುತ್ತದೆ. ಆ ದೃಶ್ಯದ ಕೊನೆಯಲ್ಲಿ ರಾಣಿ ಮತ್ತು ಧರ್ಮಾಧಿಕಾರಿ ಕೈಗಳನ್ನು ಸ್ಪರ್ಶಿಸುತ್ತಾರೆ. ಅದರ ಹೊರತಾಗಿಯೂ ಅಥವಾ ಅದಕ್ಕಿಂತಲೂ ತೀವ್ರವಾಗಿ ಈ ಹಮ್ಮಿಂಗ್ ಅವರಿಬ್ಬರ ಸಂಬಂಧದ ಉತ್ಕಟತೆಯನ್ನು ಕಟ್ಟಿಕೊಟ್ಟುಬಿಡುತ್ತದೆ.

ಇವು ಕೇವಲ ಎರಡು ಉದಾಹರಣೆಗಳು ಮಾತ್ರವೇ. ಸಣ್ಣ ಸಣ್ಣ ವಿವರಗಳು, ಪಾತ್ರಗಳ ಮುಖಭಾವ, ಸಂಗೀತ ಹೇಗೆ ಕಥೆಯನ್ನು ನಾಟಕವಾಗಿಸಬಲ್ಲವು ಎಂದು ತೋರಿಸುವ ಉದಾಹರಣೆಗಳು.

ವಿಚಾರಣೆಯ ನಾಟಕ

ಕಡೆಯಲ್ಲಿ ನ್ಯಾಯಾಲಯದ ಅಣುಕು ದೃಶ್ಯ: ಐಗುಪ್ತದಲ್ಲಿ ತೀರ್ಪು ಏನು ಎನ್ನುವುದು ನ್ಯಾಯಸಭೆಯ ಮೊದಲೇ ನಿರ್ಧಾರವಾಗಿರುತ್ತದೆ, ರಾಜ, ಮಂತ್ರಿ ಮತ್ತು ಧರ್ಮಾಧಿಕಾರಿಯ ಎದುರಿನಲ್ಲಿ ರೈತನಾಯಕ ತನ್ನ ಮೇಲೆ ಹೊರೆಸಲಾಗಿರುವ ಆರೋಪದಲ್ಲಿ ಹುರುಳಿಲ್ಲ ಎಂದು ಸಿದ್ಧಪಡಿಸಿ ತೋರಿಸುತ್ತಾನೆ. ಆದರೆ ಆ ನ್ಯಾಯಾಲಯದಲ್ಲಿ ನೀರಾನೆ ಪ್ರಾಂತ್ಯದ ರೈತ ದಂಗೆ ಆರೋಪವಾಗಿ ಕಂಡರೂ ಅದರ ಹಿಂದಿನ ಲೆಕ್ಕಾಚಾರಗಳೇ ಬೇರೆ ಇರುತ್ತದೆ. ಭೂಮಾಲಿಕರಿಗೆ ನೀರಾನೆ ಪ್ರಾಂತ್ಯದಲ್ಲಾದದ್ದು ಇನ್ನೆಲ್ಲೂ ಮರುಕಳಿಸದಿರಲಿ ಎನ್ನುವ ಎಚ್ಚರ ಇದ್ದರೆ, ಧರ್ಮಾಧಿಕಾರಿಗೆ ಆ ಮೂಲಕ ತನ್ನ ಹಿಂಬಾಲಕರನ್ನು ತೃಪ್ತಿಪಡಿಸಿ, ಮಹಾಮಂತ್ರಿಯ ಬಲವನ್ನು ಕಡಿಮೆ ಮಾಡಬೇಕು, ತನ್ನ ಪ್ರೇಯಸಿ ಮಹಾರಾಣಿಯ ಇಚ್ಛೆಯಂತೆ ರಾಜಕುಮಾರನಿಗೆ ಪಟ್ಟಕಟ್ಟಿ ಆ ಮೂಲಕ ತನ್ನ ಬಲ ಹೆಚ್ಚಿಸಿಕೊಳ್ಳಬೇಕು ಎನ್ನುವ ಹಂಬಲ, ರಾಣಿಗೆ ತನ್ನ ಮಗನನ್ನು ಯುವರಾಜನನ್ನಾಗಿ ಮಾಡಿ ಆ ಮೂಲಕ ತಾನು ಅಧಿಕಾರವನ್ನು ಕೈಮುಷ್ಟಿಯಲ್ಲಿ ಹಿಡಿದುಕೊಳ್ಳುವ ಬಯಕೆ... ಹೀಗೆ ಏನೇನೋ ಲೆಕ್ಕಾಚಾರಗಳು. ಇಲ್ಲಿ ಮನೆಪ್ಪಾ ಒಂದು ಪಗಡೆಯ ಕಾಯಿ ಅಷ್ಟೇ.

ವಿಚಾರಣೆಯ ನಾಟಕ ಮುಗಿದು, ರಾಣಿ ಮನೆಪ್ಪಾನಿಗೆ ಶಿರಚ್ಛೇಧದ ಶಿಕ್ಷೆ ವಿಧಿಸುತ್ತಾಳೆ. ಬೆಳಕು ಮಂಕಾಗುತ್ತದೆ, ಪೂರ್ತಿ ನಂದುವುದಿಲ್ಲ. ಆ ಬೆಳಕಿನಲ್ಲಿ ರಾಣಿಯ ವೇಷಭೂಷ ನಾವು ಕಾಣುವಂತೆಯೇ ಬದಲಾಗುತ್ತದೆ. ಅದೇ ರಾಣಿ ಈಗ ಕೈಯ್ಯೂರಿನ ನ್ಯಾಯಾಲಯದಲ್ಲಿ ನ್ಯಾಯಾಧೀಶೆ. ಹೌದು ವೇಷಭೂಷಣ ಮಾತ್ರ ಬದಲಾಗುತ್ತದೆ. ಅಧಿಕಾರದ ಭಾಷೆ ಬದಲಾಗುವುದಿಲ್ಲ, ಪಟ್ಟುಗಳು ಬದಲಾಗುವುದಿಲ್ಲ. ಇಲ್ಲೂ ಸಹ ಚಿರಕಂಡ, ಅಬೂಬಕರ್ ಮತ್ತು ಗೆಳೆಯರಿಗೆ ವಿಚಾರಣೆಯ ನಾಟಕದ ನಂತರ ಗಲ್ಲುಶಿಕ್ಷೆ ವಿಧಿಸಲಾಗುತ್ತದೆ. ಅವರ ವಿರುದ್ಧದ ಯಾವ ಅಪರಾಧಗಳೂ ಸಾಬೀತಾಗದೆ ಇದ್ದರೂ...

ನಾಟಕ ಇಲ್ಲಿಗೆ ಮುಗಿಯ ಬೇಕಾಗಿತ್ತು

ಈಗ ರಂಗದ ಮೇಲೆ ಎರಡು ನೇಣಿನ ಕುಣಿಕೆಗಳು : ಒಂದು ಮನೆಪ್ಪಾನಿಗೆ ಮತ್ತೊಂದು ಕಯ್ಯೂರಿನ ರೈತನಿಗೆ... ಇಲ್ಲ ಎರಡಲ್ಲ... ನನಗೆ ಅಲ್ಲಿ ಇನ್ನೊಂದು ಕುಣಿಕೆ ಕಾಣಿಸಿತು, ಅದು ವೇಮಲನ ಕೊರಳನ್ನು ಬಿಗಿದಿದ್ದ ಕುಣಿಕೆ... ಯಾಕೋ ಮನಸ್ಸು ಭಾರವಾಗುತ್ತಿತ್ತು. ಹಿನ್ನಲೆಯಲ್ಲಿ ನ್ಯಾಯಾಧಿಶೆ ಮತ್ತೊಮ್ಮೆ ರೂಪ ಬದಲಿಸುತ್ತಿದ್ದಳು... ತಂಪು ಕನ್ನಡಕ, ಬಿಳುಪು ಬಣ್ಣ, ಎತ್ತರದ ನಿಲುವು, ಹಿನ್ನೆಲೆಯಲ್ಲಿ ರಣಹದ್ದುಗಳ ಕೇಕೆ.... ಅವಳು ಹದ್ದಾಗಿದ್ದಳು..

ನಾಟಕ ಇಲ್ಲಿಗೆ ಮುಗಿಯ ಬೇಕಾಗಿತ್ತು, ಹಾಗೆ ಮುಗಿದಿದ್ದರೆ ಅದು ಕೇವಲ ಒಂದು ನೋವಿನ ಕಥೆಯನ್ನು ಮಾತ್ರ ಹೇಳುತ್ತಿತ್ತು. ಅದರೆ ಅದು ಹಾಗಾಗಲಿಲ್ಲ. ರಂಗದ ಒಂದು ತುದಿಯಿಂದ ಇನ್ನೊಂದು ತುದಿಗೆ ನಿಧಾನವಾಗಿ ಒಂದು ಕೆಂಪಿನ ಮಹಾಪೂರ ಹರಿಯತೊಡಗುತ್ತದೆ. ನಂತರ ಒಬ್ಬರ ಹಿಂದೊಬ್ಬರು, ಅವರ ಹಿಂದೆ ಇನ್ನೊಬ್ಬರು, ಅವರ ಹಿಂದೆ ಮತ್ತೊಬ್ಬರು ಕೆಂಪು ಬಾವುಟವನ್ನು ಹಿಡಿದು ಧಡ ಧಡ ದಾಪುಗಾಲಿಟ್ಟು ಬರುತ್ತಿರುತ್ತಾರೆ, ರಂಗದ ಒಂದು ತುದಿಯಿಂದ ಇನ್ನೊಂದು ತುದಿಗೆ. ಅನ್ಯಾಯದ ಒಂದು ಹತ್ಯೆ ಹೇಗೆ ಇನ್ನೂ ನೂರು ಜನರನ್ನು ಹೋರಾಟದ ಹಾದಿಗೆ ಕರೆತರುತ್ತದೆ ಎನ್ನುವುದು ಕಡೆಯ ದೃಶ್ಯದಲ್ಲಿ ಅತ್ಯಂತ

ಪರಿಣಾಮಕಾರಿಯಾಗಿ ಮೂಡಿಬಂದಿದೆ. ಅದೇ ಪಾತ್ರಧಾರಿಗಳು, ಅಷ್ಟೇ ಪಾತ್ರಧಾರಿಗಳು ಒಬ್ಬರ ಹಿಂದೆ ಮತ್ತೊಬ್ಬರು ಐದಾರು ಸಲ ರಂಗದ ಎಡಗಡೆಯಿಂದ ರಂಗವನ್ನು ಪ್ರವೇಶಿಸಿ, ರಂಗದುದ್ದಕ್ಕೂ ನಡೆದು, ರಂಗದ ಬಲಗಡೆಯಿಂದ ನಿಷ್ಕ್ರಮಿಸಿ, ಹಿಂಬಾಗದಲ್ಲಿ ಓಡಿ, ಮತ್ತೆ ಎಡಗಡೆಯಿಂದ ರಂಗವನ್ನು ಪ್ರವೇಶಿಸುತ್ತಾರೆ, ಎಲ್ಲೂ ತೆರಪಿಲ್ಲದೆ. ಅದೊಂದು ಪ್ರತಿಭಟನೆಯ ಮಹಾಪೂರ. ಕಡೆಯಲ್ಲಿ ಆ ಪಾತ್ರಗಳು ಕೆಂಪು ಧ್ವಜವನ್ನು ಹಿಡಿದು, ಥೇಟ್ ಚಿರಸ್ಮರಣೆಯ ಪಾತ್ರಗಳಂತೆ ಫ್ರೀಜ್ ಆಗಿ ನಾಟಕ ಮುಗಿಯುತ್ತದೆ.


ಸಮುದಾಯ ರೆಪರ್ಟರಿಗೆ ಒಂದು ಸಲಾಂ

ಎರಡೂ ಕಥೆಗಳನ್ನೂ ಶ್ರೀಪಾದಭಟ್ ಅವರು ಒಂದುಗೂಡಿಸಿರುವ ತಂತ್ರದಲ್ಲಿ, ಕುಸುರಿಯಲ್ಲಿ ಅವರ ಕಸುಬುದಾರಿಕೆ ಮನಸ್ಸೆಳೆಯುತ್ತದೆ. ಒಂದು ದೃಶ್ಯದಿಂದ ಇನ್ನೊಂದು ದೃಶ್ಯಕ್ಕೆ, ಒಂದು ಕಾಲದಿಂದ ಇನ್ನೊಂದು ಕಾಲಕ್ಕೆ ಎಲ್ಲೂ ಜರ್ಕ್ ಗಳಿಲ್ಲ, ಸರಾಗವಾಗಿ ಕಾಲ ಮತ್ತು ದೇಶ ಪಲ್ಲಟವಾಗುತ್ತಿರುತ್ತದೆ. ಫೆರೋಗಳ ಕಾಲದ ಕಥೆ ಹೇಳುವಾಗ ರಂಗ ಸಜ್ಜಿಕೆಯಲ್ಲಿ ಕಂಡು ಬರುವ ವೈಭವ ಮತ್ತು ಕಯ್ಯೂರಿನ ಕಥೆಯಲ್ಲಿ ಬರುವ ಸಾಮಾಜಿಕ ಕಥೆಯ ಚಿತ್ರಣ ಎರಡಕ್ಕೂ ಇರುವ ಭಿನ್ನತೆ ಅತ್ಯಂತ ಸಹಜವಾಗಿ ಅವೇ ಸಲಕರಣೆಗಳೊಂದಿಗೆ ಮೂಡಿ ಬರುತ್ತದೆ. ಅದು ನೋಡುಗರನ್ನು ಕಾಲ ಮತ್ತು ದೇಶಗಳಿಗೆ ಅಣಿಗೊಳಿಸುತ್ತದೆ. ನಾಟಕದ ಧನಾತ್ಮಕ ಅಂಶವೆಂದರೆ ಅದರ ರಂಗಸಜ್ಜಿಕೆ. ಸಿಂಹಾಸನ, ರಾಜನ ಪಲ್ಲಕ್ಕಿ, ಭೂಮಾಲಿಕರ ದಿವಾನ್ ಎಲ್ಲವೂ ನಮ್ಮ ಕಣ್ಣೆದುರಲ್ಲೇ ಚಕ ಚಕ ಎಂದು ಬದಲಾಗುತ್ತಿರುತ್ತದೆ. ಅಲ್ಲಿ ಎಲ್ಲಿಯೂ ಅನಗತ್ಯವಾದ ಅತಿ ಕಾಣಿಸಿಕೊಂಡಿಲ್ಲ. ಎರಡೂ ಕಾಲಕ್ಕೂ ಹೊಂದುವ ರೀತಿಯಲ್ಲಿ ಹಿನ್ನಲೆ ಮತ್ತು ಧ್ವಜಗಳು ಬಳಕೆ ಆಗಿವೆ. ಕಥೆ ಹೇಳುವ ತಂತ್ರದ ಭಾಗವಾಗಿ ಪಾತ್ರಧಾರಿಗಳೇ ಸೂತ್ರಧಾರಿಗಳಾಗಿ ಬದಲಾಗುವ ವಿಧಾನ ನಿರೂಪಣೆಗೆ ಒಂದು ವೇಗ ಒದಗಿಸಿದೆ.


ಎಂ ಎಸ್ ಸತ್ಯು ಅವರ ರಂಗವಿನ್ಯಾಸ, ದಾಮೋದರ ನಾಯ್ಕರ ರಂಗಸಜ್ಜಿಕೆ ಅದ್ಭುತವಾಗಿದೆ. ನಾಟಕವನ್ನು ಒಂದು ದೃಶ್ಯಕಾವ್ಯವನ್ನಾಗಿಸುವ ದಿಸೆಯಲ್ಲಿ ಇವೆರಡರ ಜೊತೆಯಲ್ಲಿ ವಿನಯಚಂದ್ರ ಅವರ ಬೆಳಕಿನ ವಿನ್ಯಾಸದ ಕೊಡುಗೆ ಗಣನೀಯವಾದುದು. ಸಂಗೀತ ಬಿಟ್ ಗಳಾಗಿ ಕೆಲವು ಪರಿಣಾಮಕಾರಿ ಹೊಳಹುಗಳನ್ನು ಕೊಟ್ಟರೂ ಒಟ್ಟಾರೆ ನಾಟಕವನ್ನು ಗಣನೆಗೆ ತೆಗೆದುಕೊಂಡರೆ ಅದರ ಪರಿಣಾಮ ಕಡಿಮೆ ಎಂದೇ ತೋರುತ್ತದೆ. ಕಾಲ ದೇಶಗಳ ಪಲ್ಲಟವನ್ನು ತೋರುವಲ್ಲಿ ಎರಡು ಭಿನ್ನ ಸಂಪ್ರದಾಯವನ್ನು ಸಂಗೀತದ ಮೂಲಕ ಕಟ್ಟಿಕೊಡುವ ಸಾಧ್ಯತೆಯನ್ನು ಬಳಸಿಕೊಳ್ಳಬಹುದಿತ್ತು ಎನ್ನಿಸುತ್ತದೆ. ಪಾತ್ರಧಾರಿಗಳೆಲ್ಲರೂ ಅತ್ಯಂತ ಪರಿಣಾಮಕಾರಿಯಾಗಿ ತಮ್ಮ ತಮ್ಮ ಪಾತ್ರಗಳನ್ನು ಕಟ್ಟಿಕೊಟ್ಟಿದ್ದಾರೆ. ಆ ಬಗ್ಗೆ ಎರಡು ಮಾತಿಲ್ಲ. ಯಾ-ರೇ ಒಬ್ಬರನ್ನು ಹೆಸರಿಸಿದರೂ ಅದು ಇನ್ನೊಬ್ಬ ಪಾತ್ರಧಾರಿಗೆ ಅನ್ಯಾಯ ಮಾಡಿದಂತೆ ಎನ್ನುವಂತೆ ಎಲ್ಲರೂ ಪರಿಣಾಮಕಾರಿಯಾಗಿ ಪಾತ್ರಗಳನ್ನು ನಿರ್ವಹಿಸಿದ್ದಾರೆ. ನಿರ್ದೇಶಕ ಶ್ರೀಪಾದಭಟ್ಟರ ಬಗ್ಗೆ ಹೆಚ್ಚಿಗೆ ಹೇಳುವುದೇನು, ನಿನ್ನೆಗಳನ್ನು ಇಂದಿನ ಜೊತೆ ಮುಖಾಮುಖಿಯಾಗಿಸಿ, ನಿನ್ನೆಗಳ ಹೋರಾಟವನ್ನು ಇಂದಿಗೂ ವಿಸ್ತರಿಸಿ ಅವರು ಮತ್ತೊಂದು ಮಾತಾಡುವ ಚಿತ್ರಗಳನ್ನು ಜೋಡಿಸಿಕೊಟ್ಟ ಪಯಣವನ್ನು ಕಟ್ಟಿ-ಕೊಟ್ಟಿದ್ದಾರೆ. ಅವರ ಕಲಾವಂತಿಕೆಗೆ ಶರಣು. 'ಕಾವ್ಯರಂಗ' ಮತ್ತು 'ಮೃತ್ಯುಂಜಯ' ನಾಟಕಗಳನ್ನು ನಮ್ಮೆದಿರು ತಂದು ನಿಲ್ಲಿಸಿದ ಸಮುದಾಯ ರೆಪರ್ಟರಿಗೆ ಒಂದು ಸಲಾಂ.

ಫೋಟೋಗಳು: ಕಿರಣ್ ಭಟ್

ಮೂಲ: ಇಗ್ನೇಶಿಯಸ್ ರಾಮೊನೆಟ್
ಸಂಗ್ರಹಾನುವಾದ : ಕೆ. ಪ್ರಕಾಶ್



ಕ್ಯಾಸ್ಟ್ರೋ ಕಥೆ 5



COLEGIO DE DOLORES
APARTADO 1
SANTIAGO DE CUBA

DIVISION OF
NOV 27 1940
DEPARTMENT OF STATE

Santiago de Cuba
Nov 6 1940
Mr Franklin Roosvelt,
President of the United States.

My good friend Roosvelt I don't know very English, but I know as much as write to you.
I like to hear the radio, and I am very happy, because I heard in it, that you will be President for a new (periodo)
I am twelve years old. I am a boy but I think very much but I do not think that I am writting to the President of the United States.
If you like, give me a ten dollars bill green american, in the letter, because never, I have not seen a ten dollars bill green american and I would like to have one of them.
My address is:
Sr. Fidel Castro
Colegio de Dolores
Santiago de Cuba
Oriente Cuba.
I don't know very English but I know very much Spanish and I suppose you don't know very Spanish but you know very English because you are American but I am not American.
(Thank you very much)
Good by. Your friend,
Fidel Castro
Fidel Castro

If you want iron to make your sheaps ships I will show to you the bigest (minas) of iron of the land. They are in Mayarí Oriente Cuba.

ಅಧ್ಯಕ್ಷ ರೂಸ್‌ವೆಲ್ಟ್‌ಗೆ ಬಾಲಕ ಫಿಡೆಲ್ ಪತ್ರ

ಶಾಲೆಯ ರಿಪೋರ್ಟ್ ಕಾರ್ಡನ್ನು ಪೋಷಕರಿಗೆ ತೋರಿಸಿ ಅವರಿಂದ ಸಹಿ ಪಡೆದು ಶಾಲೆಗೆ ಹಿಂದಿರುಗಿಸುವ ಪದ್ಧತಿಯಿತ್ತು. ಸಾಧಾರಣವಾಗಿ ಅಂಕಗಳನ್ನು ಆಧರಿಸಿ ಐದು ಗ್ರೇಡ್‌ಗಳನ್ನು ನೀಡಲಾಗುತ್ತಿತ್ತು. ಎಕ್ಸಲೆಂಟ್ ಅತ್ಯುತ್ತಮವಾದರೆ, ಫೇಲ್ ಕೊನೆಯದು. ಪ್ರತಿಯೊಂದು ವಿಷಯದಲ್ಲೂ ಎಕ್ಸಲೆಂಟ್ ಬರದಿದ್ದರೆ ಪ್ರತಿ ಗುರುವಾರ ನೀಡುತ್ತಿದ್ದ ಐದು ಸೆಂಟಾವೋ ಮತ್ತು ಪ್ರತಿ ಭಾನುವಾರ ನೀಡುತ್ತಿದ್ದ ಇಪ್ಪತ್ತು ಸೆಂಟಾವೊಗಳನ್ನು ನೀಡುವುದಿಲ್ಲವೆಂದು ಮನೆಯೊಡತಿ ಬೆದರಿಸುತ್ತಿದ್ದಳು. ಗುರುವಾರದ ಹಣದಿಂದ ಅರ್ಜೆಂಟೈನ್ ಕಾಮಿಕ್ ಪುಸ್ತಕ 'ಎಲ್ ಗೋರಿಯನ್' ಭಾನುವಾರದ ಹಣದಿಂದ ಸಿನಿಮಾಕ್ಕೆ ಹತ್ತು, ಐಸ್‌ಕ್ರೀಮ್‌ಗೆ ಐದು ಮತ್ತು ಪೋರ್ಕ್ ಸ್ಯಾಂಡ್‌ವಿಚ್‌ಗೆ ಐದು ಸೆಂಟಾವೊಗಳು ನಿಂತು ಹೋಗುವ ಆತಂಕ ಫಿಡೆಲ್‌ಗೆ. ಇದಕ್ಕೊಂದು ದಾರಿ ಕಂಡುಕೊಳ್ಳಲು ತೀರ್ಮಾನಿಸಿದ ಫಿಡೆಲ್, ಎರಡು ರಿಪೋರ್ಟ್ ಕಾರ್ಡ್‌ಗಳ ಮೊರೆಹೊಕ್ಕ. ನಿಜವಾದ ಅಂಕಗಳಿರುವ ಮಾರ್ಕ್ಸ್ ಕಾರ್ಡನ್ನು ತಾನೇ ಸಹಿ ಮಾಡಿ ಶಾಲೆಗೆ ಹಿಂದಿರುಗಿಸುವುದು, ಎಲ್ಲದರಲ್ಲೂ ಎಕ್ಸಲೆಂಟ್ ಇರುವ ಸುಳ್ಳು ಮಾರ್ಕ್ಸ್ ಕಾರ್ಡನ್ನು ಮನೆಯೊಡತಿಗೆ ತೋರಿಸಿ ಸಹಿ ಮಾಡಿಸಿ ಅದನ್ನು ತನ್ನ ಬಳಿಯೇ ಇಟ್ಟುಕೊಳ್ಳುವ ಕಪಟ ನಾಟಕ ಪ್ರಾರಂಭಿಸಿದ. ಇದರಿಂದ ಫಿಡೆಲ್ ಶಾಲೆಯಲ್ಲೇ ಅತ್ಯುತ್ತಮ ವಿದ್ಯಾರ್ಥಿಯೆಂದು ಮನೆಯೊಡತಿ ನೆರೆಹೊರೆಯವರಲ್ಲಿ ಬೀಗುತ್ತಿದ್ದಳು. ಆದ–ರೆ ಸೆಮಿಸ್ಟರ್ ಕೊನೆಯಲ್ಲಿ ಫಿಡೆಲ್‌ಗೆ ಪೀಕಲಾಟ ಶುರುವಾಯಿತು. ಪ್ರತಿ ವಿಷಯದಲ್ಲೂ ಅತ್ಯುತ್ತಮ ಗ್ರೇಡ್ ಪಡೆದ ವಿದ್ಯಾರ್ಥಿಗಳಿಗೆ ನೀಡುವ ಪ್ರಶಸ್ತಿಗಳನ್ನು ಪಡೆದುಕೊಳ್ಳಲು ಆಕೆ ಸಮಗ್ರವಾದ ವೇಷಭೂಷಣಗಳೊಂದಿಗೆ ತಯಾರಾಗಿ ಬಂದೇ ಬಿಟ್ಟಳು.

ರಿಪೋರ್ಟ್ ಕಾರ್ಡ್ ಪೋರ್ಜರಿ!

ಪ್ರಶಸ್ತಿ ಪ್ರಧಾನ ಸಮಾರಂಭ ಪ್ರಾರಂಭವಾಗುತ್ತಿದ್ದಂತೆ ಫಿಡೆಲ್‌ಗೆ ಎದೆ ಬಡಿತ ತೀವ್ರವಾಯಿತು. ಈ ಪರಿಸ್ಥಿತಿಯನ್ನು ಹೇಗೆ ನಿಭಾಯಿಸಬೇಕೆಂದು ಯೋಚನೆ ಮಾಡಿರಲಿಲ್ಲ. ಪ್ರತಿ ವಿಷಯದಲ್ಲೂ ಹೆಸರು ಕರೆದಾಗಲೆಲ್ಲಾ ಬೇರೆಯವರ ಹೆಸರೇ ಬರುತ್ತಿತ್ತು. ಮನೆಯೊಡತಿ ದುರುಗುಟ್ಟಿ ನೋಡುತ್ತಿದ್ದಂತೆ, ಇದೇನಿದು ತನ್ನ ಹೆಸರೇ ಕರೆಯುತ್ತಿಲ್ಲವಲ್ಲ ಎಂದು ಆಶ್ಚರ್ಯಪಡುವಂತೆ ಫಿಡೆಲ್ ನಟಿಸಲು ಪ್ರಾರಂಭಿಸಿದ. ಕಾರ್ಯಕ್ರಮ ಮುಗಿಯಿತು, ಮೊದಲ ಗ್ರೇಡ್ ಇರಲಿ ಯಾವ ಗ್ರೇಡ್ ಸಹ ಬಂದಿರಲಿಲ್ಲ. ಏನಾದರೂ ಆಕೆಗೆ ಹೇಳಲೇಬೇಕಾದ ಸಂದರ್ಭ ಬಂದೇ ಬಂತು. 'ಓಹ್ ಏನಾಯಿತೆಂದು ಈಗ ನೆನಪಾಗುತ್ತಿದೆ. ನಾನು ವರ್ಷದ ಮಧ್ಯಭಾಗದವರೆಗೂ ಶಾಲೆಗೆ ಬಂದಿರಲಿಲ್ಲವಾದ್ದರಿಂದ, ಆ ಅವಧಿಯ ಅಂಕಗಳು ನನಗೆ ಬರಲಿಲ್ಲ. ಆದ್ದರಿಂದ ನನಗೆ ಯಾವುದೇ ಪ್ರಶಸ್ತಿಗಳು ಸಿಗಲಿಲ್ಲ' ಎಂದು ಹೇಳುವಷ್ಟರಲ್ಲಿ ಫಿಡೆಲ್ ಬೆವತು ಹೋಗಿದ್ದ. ಆದರೆ ಆ ವಿವರಣೆ ಮನೆಯೊಡತಿಗೆ ಸಮಾಧಾನ ತಂದಿತ್ತು.

ಮೊದಲೇ ಹೇಳಿದ ಹಾಗೆ ಆರನೇ ತರಗತಿಯ ಮೊದಲ ಭಾಗದಲ್ಲೇ ಶಸ್ತ್ರಚಿಕಿತ್ಸೆಯಾಗಿದ್ದರಿಂದ ಮೂರು ತಿಂಗಳ ರಜೆ. ವಾಪಸ್ ಮತ್ತದೇ ಕಥೆ. ಮನೆಯೊಡತಿಯ ಒತ್ತಡ. ಎಲ್ಲ ವಿಷಯಗಳಲ್ಲೂ ಅತಿ ಹೆಚ್ಚು ಅಂಕ ಪಡೆಯಬೇಕು. ಆ ಎಲ್ಲಾ ಪೊಳ್ಳುತನ, ತೋರಿಕೆಯ ಒಣಜಂಭ ಯಾವುದೂ ಸರಿಹೊಂದಲಿಲ್ಲ. ಮನೆ ತೊರೆಯಲು ತೀರ್ಮಾನಿಸಿದ. ಆ ಪರಿಸ್ಥಿತಿ ಹೇಗಿತ್ತೆಂದರೆ, ನಿಜವಾಗಿ ಹೇಳುವುದಾದರೆ ಫಿಡೆಲ್ ಓದುವ ಆಸಕ್ತಿಯನ್ನೇ ಕಳೆದುಕೊಂಡ. ಮನೆಯೊಡತಿ ವಸತಿ ಶಾಲೆಗಟ್ಟುವ ಬೆದರಿ–ಕೆ ಹಾಕಿದಳು. ಫಿಡೆಲ್‌ನೊಳಗಿನ ಬಂಡಾಯಗಾರ ಜಾಗೃತನಾದ. ಆ ಮನೆಯ ಯಾವ ಚೌಕಟ್ಟನ್ನೂ ಪಾಲಿಸಲು ನಿರಾಕರಿಸಿದ. ಕೊನೆಗೆ ಉಸಿರುಗಟ್ಟುವ ವಾತಾವರಣದಿಂದ ಹೊರಬಂದ. ಇಂತಹ ಎಲ್ಲ ಅನುಭವಗಳಿಂದ ಸಾಕಷ್ಟು ಕಲಿತಿದ್ದ ಫೀಡೆಲ್ ಏಳನೇ ತರಗತಿಗೆ ಬರುವಷ್ಟರಲ್ಲಿ ಅತ್ಯುತ್ತಮ ವಿದ್ಯಾರ್ಥಿಯಾಗಿ ಮಾರ್ಪಟಿದ್ದ.

10 ಡಾಲರ್ ಕೇಳಿ ಅಧ್ಯಕ್ಷ ರೂಸ್‌ವೆಲ್ಟ್‌ಗೆ ಪತ್ರ!

ಸುಮಾರು 1939, ಎರಡನೇ ಮಹಾಯುದ್ಧ ಹೊಸ್ತಿಲಲ್ಲಿ ಜಗತ್ತು ನಿಂತಿದ್ದಾಗ, ಇಂಗ್ಲಿಷ್ ಓದುತ್ತಿದ್ದ ಫಿಡೆಲ್ ಅಮೆರಿಕದ ಅಧ್ಯಕ್ಷ ಫ್ರಾಂಕ್ಲಿನ್ ರೂಸ್‌ವೆಲ್ಟ್‌ಗೆ ಪತ್ರ ಬರೆದ ಪ್ರಸಂಗ ಸಾಕಷ್ಟು ಸುದ್ದಿಯಾಯಿತು. ಅಮೇರಿಕದ 'ಹತ್ತು ಡಾಲರ್'1ಗಳ ನೋಟನ್ನು ತನ್ನ ಬಳಿ ಇಟ್ಟುಕೊಳ್ಳಬೇಕೆಂದು ಬಹಳ ಆಸೆಯಿತ್ತು. ಅದನ್ನು ಕಳುಹಿಸಿಕೊಡುವಂತೆ ರೂಸ್‌ವೆಲ್ಟ್‌ಗೆ ಬರೆದ ಪತ್ರವದು. ಅದರಲ್ಲಿ ಡಾಲರ್ ವಿಚಾರವಲ್ಲದೆ, ಕೊನೆಯಲ್ಲಿ ಈ ರೀತಿ ಬರೆದ; 'ನಿಮ್ಮ ಹಡಗುಗಳನ್ನು ಮಾಡಲು ಕಬ್ಬಿಣ ಬೇಕಾಗಿದ್ದರೆ, ನಮ್ಮ ನಾಡಿನ ಅತ್ಯಂತ ದೊಡ್ಡ ಕಬ್ಬಿಣದ ಗಣಿಗಳನ್ನು ನಿಮಗೆ ತೋರಿಸುತ್ತೇನೆ. ಅವು ಕ್ಯೂಬಾದ ಓರಿಯಂಟೆ ಪ್ರಾಂತ್ಯದ ಮಾಯಾರಿಯಲ್ಲಿದೆ'. ಇದರಿಂದ ಸ್ವಲ್ಪ ದಿನಗಳ ನಂತರ ಫಿಡೆಲ್ ಇಡೀ ಶಾಲೆಯ ಚರ್ಚೆಯ ಕೇಂದ್ರಬಿಂದುವಾದರು. ಅಮೇರಿಕ ಅಧ್ಯಕ್ಷರಿಂದ ಬಾಲಕ ಫಿಡೆಲ್‌ಗೆ ಬರೆದ ಪತ್ರವನ್ನು ಶಾಲೆಯ ನೋಟಿಸ್ ಬೋರ್ಡ್‌ನಲ್ಲಿ ಹಾಕಲಾಗಿತ್ತು. ಕ್ಯೂಬಾ ಕ್ರಾಂತಿಯ ನಂತರ, ಅಮೇರಿಕನ್ನರು ಫಿಡೆಲ್‌ನ ಈ ಪತ್ರವನ್ನು ಕಂಡು ಹಿಡಿದು ಪ್ರಕಟಿಸಿದರಂತೆ. ಈ ಕುರಿತು ನಂತರ ಕೆಲವರು ಆಡಿಕೊಳ್ಳುತ್ತಿದ್ದ ಮಾತನ್ನು ಫಿಡೆಲ್ ನೆನಪಿಸಿಕೊಳ್ಳುತ್ತಾರೆ; 'ರೂಸ್‌ವೆಲ್ಟ್ ಏನಾದರೂ ಆಗ ಕೇವಲ ಹತ್ತು ಡಾಲರುಗಳನ್ನು ಕಳುಹಿಸಿದ್ದರೆ, ನಾನು ಅಮೇರಿಕಕ್ಕೆ ಇಷ್ಟೊಂದು ತಲೆನೋವು ಕೊಡುತ್ತಿರಲಿಲ್ಲ'. ಹತ್ತು ಡಾಲರುಗಳು ರೂಸ್‌ವೆಲ್ಟ್‌ಗೆ ಒಬ್ಬ ಉತ್ತಮ ಸ್ನೇಹಿತನನ್ನು ನೀಡುತ್ತಿತ್ತು! ಚರಿತ್ರೆ ಹಾಗಾಗಲಿಲ್ಲ.

ಫಿಡೆಲ್ ಅಮೆರಿಕದ ಅಧ್ಯಕ್ಷ ಫ್ರಾಂಕ್ಲಿನ್ ರೂಸ್‌ವೆಲ್ಟ್‌ಗೆ ಪತ್ರ ಬರೆದ ಪ್ರಸಂಗ ಸಾಕಷ್ಟು ಸುದ್ದಿಯಾಯಿತು. ಅಮೇರಿಕದ 'ಹತ್ತು ಡಾಲರ್'ಗಳ 1 ನೋಟನ್ನು ತನ್ನ ಬಳಿ ಇಟ್ಟುಕೊಳ್ಳಬೇಕೆಂದು ಬಹಳ ಆಸೆಯಿತ್ತು. ಅದನ್ನು ಕಳುಹಿಸಿಕೊಡುವಂತೆ ರೂಸ್‌ವೆಲ್ಟ್‌ಗೆ ಬರೆದ ಪತ್ರವದು. ಈ ಕುರಿತು ನಂತರ ಕೆಲವರು ಆಡಿಕೊಳ್ಳುತ್ತಿದ್ದ ಮಾತನ್ನು ಫಿಡೆಲ್ ನೆನಪಿಸಿಕೊಳ್ಳುತ್ತಾರೆ; 'ರೂಸ್‌ವೆಲ್ಟ್ ಏನಾದರೂ ಆಗ ಕೇವಲ ಹತ್ತು ಡಾಲರುಗಳನ್ನು ಕಳುಹಿಸಿದ್ದರೆ, ನಾನು ಅಮೇರಿಕಕ್ಕೆ ಇಷ್ಟೊಂದು ತಲೆನೋವು ಕೊಡುತ್ತಿರಲಿಲ್ಲ'. ಹತ್ತು ಡಾಲರುಗಳು ರೂಸ್‌ವೆಲ್ಟ್‌ಗೆ ಒಬ್ಬ ಉತ್ತಮ ಸ್ನೇಹಿತನನ್ನು ನೀಡುತ್ತಿತ್ತು! ಚರಿತ್ರೆ ಹಾಗಾಗಲಿಲ್ಲ.

ಫಿಡೆಲ್ ಬಂಡಾಯಗಾರನಾಗಿ ಹುಟ್ಟಿರಲಿಲ್ಲ. ಆದರೆ ಬಂಡಾಯದ ಘಟನೆಗಳು ಮತ್ತೆ ಮತ್ತೆ ಸಂಭವಿಸಿದವು. ಶಾಲೆಯಲ್ಲಿ, ಮನೆಯಲ್ಲಿ ಮನಸ್ಸು ಕಂಡಲ್ಲೆಲ್ಲಾ ಎಲ್ಲಿ ಆನ್ಯಾಯ ಎಂದು ಅನಿಸಿದೆಯೋ ಅಲ್ಲಿ ಪ್ರತಿಭಟಿಸುವ ಪ್ರವೃತ್ತಿ ಬೆಳೆದು ಬಂತು. ಜಮೀನ್ದಾರಿ ವಾತಾವರಣದಲ್ಲಿ ಹುಟ್ಟಿದ ಫಿಡೆಲ್‌ಗೆ, ಕ್ಯೂಬಾದ ಬಂಡವಾಳಶಾಹಿ ಕ್ರೌರ್ಯದ ನೆನಪುಗಳು ಮಾಸದೆ ಉಳಿದವು. ತನ್ನ ಹಳ್ಳಿಯ ಹಸಿದ, ಬರಿಗಾಲಿನ ಬಡ ಕಷ್ಟಜೀವಿಗಳ ಹೃದಯವಂತ ಜನರನ್ನು ಬೃಹತ್ ಅಮೇರಿಕನ್ ಸಕ್ಕರೆ ಕಂಪನಿಗಳು ದುಡಿಸಿಕೊಳ್ಳುತ್ತಿದ್ದ ಅಮಾನುಷ ಪರಿಸ್ಥಿತಿಗಳನ್ನು ಫಿಡೆಲ್ ಮನಸ್ಸಿನಾಳಕ್ಕೆ ಇಳಿಸಿಕೊಂಡಿದ್ದ. '... ಕಷ್ಟಕರ ಪರೀಕ್ಷೆಗಳನ್ನು ದಾಟುವಲ್ಲಿ, ತೊಂದರೆಗಳನ್ನು ನಿವಾರಿಸಿಕೊಳ್ಳುವಲ್ಲಿ, ಸಂಘರ್ಷಗಳನ್ನು ಎದುರಿಸುವಲ್ಲಿ, ತೀರ್ಮಾನಗಳನ್ನು ಮಾಡುವಲ್ಲಿ ನನ್ನ ಗುಣವು ರೂಪುಗೊಂಡಿದೆ, ಹಾಗೆಯೇ ಬಂಡಾಯಗಳು ... ಒಂದು ನಿರ್ದಿಷ್ಟ ತರ್ಕದ ಆಧಾರದಲ್ಲಿ, ವಿಷಯಗಳನ್ನು ವಿಶ್ಲೇಷಿಸುವ ಮೂಲಕ ಆ ಇಡೀ ಸಮಾಜವನ್ನು ಪ್ರಶ್ನಿಸಲು ಆರಂಭಿಸಿದೆ, ಅದೂ ನನ್ನಷ್ಟಕ್ಕೇ ಸ್ವತಂತ್ರವಾಗಿ... ಬೈಗುಳಗಳು, ಅನ್ಯಾಯ ಅಥವಾ ಮತ್ತೊಬ್ಬ ವ್ಯಕ್ತಿಗಾಗುವ ಸರಳ ಅವಮಾನದಂತಹ ಅನುಭವಗಳನ್ನೂ ಸಹಿಸಲಾಗದ ತಪ್ಪುಗಳು ಎಂಬ ಜಾಗೃತಿ, ತಿಳಿವಳಿಕೆ ಬರಲಾರಂಭಿಸಿತು. ನ್ಯಾಯ, ನೀತಿ, ಸಮಾನತೆಯ ಕುರಿತು ಸಂವೇದನೆ ಬೆಳೆಸಿಕೊಂಡೆ. ಇವೆಲ್ಲಕ್ಕೂ ಮೇಲಾಗಿ ಪ್ರಶ್ನಾತೀತವಾದ ಬಂಡಾಯದ ಗುಣ ನನ್ನ ರಾಜಕೀಯ ಮತ್ತು ಕ್ರಾಂತಿಕಾರಿ ಪ್ರವೃತ್ತಿಯ ಮೇಲೆ ದೃಢವಾದ ಪ್ರಭಾವವನ್ನು ಬೀರಿದೆ' ಎಂದು ತನ್ನ ಬಾಲ್ಯದ ಬಂಡಾಯದ ಬೆನ್ನ ಹಿಂದಿನ ಅಂಶಗಳನ್ನು ಫಿಡೆಲ್ ನೆನಪಿಸಿಕೊಳ್ಳುತ್ತಾರೆ.

ಯೂನಿವರ್ಸಿಟಿ ಪ್ರವೇಶ

1945ರ ಸೆಪ್ಟೆಂಬರ್‌ನಲ್ಲಿ ಫಿಡೆಲ್ ಯೂನಿವರ್ಸಿಟಿ ಪ್ರವೇಶಿಸಿದರು. ಒಬ್ಬ ದೊಡ್ಡ ಜಮೀನ್ದಾರನ ಮಗನಾಗಿ ಈ ಸಾಧನೆಯನ್ನು ಮಾಡಲು ಸಾಧ್ಯವಾಯಿತು. ಬೈರನ್‌ನಲ್ಲಿ ಇವರೊಂದಿಗಿದ್ದ ಯಾರೊಬ್ಬರಿಗೂ ಕನಿಷ್ಟ 6ನೇ ತರಗತಿಯನ್ನೂ ಮುಟ್ಟಲಾಗಿರಲಿಲ್ಲ. ಇನ್ನು ಹವಾನಾದಲ್ಲಿದ್ದ ವಿಶ್ವವಿದ್ಯಾಲಯಕ್ಕೆ ಬರುವ ಮಾತೇ ಇರಲಿಲ್ಲ. ಅಕಸ್ಮಾತಾಗಿ ಯಾರಾದರೂ ಹೈಸ್ಕೂಲ್ ಮುಟ್ಟಿದರೂ ದೂರದ ಹವಾನಾಕ್ಕೆ ಬರುವ ಸ್ಥಿತಿಯಲ್ಲಿರಲಿಲ್ಲ. ಹವಾನಾ ವಿವಿ ಕ್ಯೂಬಾದ ಸಿರಿವಂತರಿಗೆ ಮತ್ತು ಮಧ್ಯಮವರ್ಗದವರಿಗಾಗಿತ್ತು. ಹೀಗಿದ್ದರೂ ಅಲ್ಲಿ ಹಲವಾರು ಯುವಜನರು ಸಾಮಾಜಿಕ ಉದ್ದೇಶಗಳಿಗೆ, ಆದರ್ಶಗಳಿಗೆ, ಬದಲಾವಣೆಗೆ ಆಕರ್ಷಿತರಾದರು. ತಮ್ಮ ವರ್ಗಸಹಜವಾಗಿದ್ದ ವ್ಯಕ್ತಿ–ಕೇಂದ್ರಿತ ಚಿಂತನೆಗಳಿಂದ ಆಗಾಗ ಹೊರಬಂದರು. ಕ್ಯೂಬಾದ ಚರಿತ್ರೆಯುದ್ದಕ್ಕೂ ಇಂತಹವರ ಹೋರಾಟಗಳನ್ನು ಗಮನಿಸಬಹುದು.

ನ್ಯಾಯದ ಕೆಲವು ಪ್ರಾರಂಭಿಕ ಕಲ್ಪನೆಗಳು ಮತ್ತು ಬಂಡಾಯದ ಸ್ಫೂರ್ತಿಯೊಂದಿಗೆ ಮಾತ್ರ ವಿಶ್ವವಿದ್ಯಾಲಯ ಪ್ರವೇಶಿಸಿದ ಫಿಡೆಲ್ ಅಲ್ಲಿ ಕ್ರಾಂತಿಕಾರಿಯಾದರು. ಇಂದಿಗೂ ಬದ್ಧರಾಗಿ ಉಳಿದಿರುವ ಮೌಲ್ಯಗಳ ಮಾರ್ಕ್ಸ್‌ವಾದಿ–ಲೆನಿನ್‌ವಾದಿಯಾದರು. ಫಿಡೆಲ್‌ಗಿದ್ದ ಬಂಡಾಯದ ಗುಣದ ಜೊತೆಗೆ ಜ್ಞಾನದ ಮತ್ತು ಚಿಂತನೆಗಳ ಹಸಿವು ಮತ್ತು ಅದರೊಂದಿಗೆ ಅವರಿಗಿದ್ದ ಕುತೂಹಲ ಮತ್ತು ಉತ್ಸಾಹದ ಗುಣಗಳೂ ಸೇರಿ ವಿಭಿನ್ನ ವ್ಯಕ್ತಿತ್ವ ರೂಪುಗೊಳ್ಳಲು ಸಹಾಯವಾಯಿತು.

ಬಂಡಾಯದಿಂದ ಕ್ರಾಂತಿಕಾರಿಯತ್ತ

ಅರ್ಥಶಾಸ್ತ್ರ ಮತ್ತು ಇತರೆ ಅಗತ್ಯವಾದ ವಿಷಯಗಳ ಸ್ವಲ್ಪ ಜ್ಞಾನದೊಂದಿಗೆ ಫಿಡೆಲ್ 'ಆದರ್ಶವಾದಿ ಕಮ್ಯುನಿಸ್ಟ್'ನಾಗಿ ಪರಿವರ್ತನೆಯಾದರು. ಬಂಡವಾಳಶಾಹಿ ಸಮಾಜದ ಮೂಲಸೂತ್ರಗಳ ಅರಿವು ಆಳವಾಗಿ ಅರ್ಥವಾಗದಿದ್ದರೂ ತಮ್ಮ ಜೀವನದ ಅನುಭವದ ಆಧಾರದಲ್ಲಿ ಬಂಡವಾಳಶಾಹಿ ವ್ಯವಸ್ಥೆಯ ರಾಜಕೀಯ ಅರ್ಥಶಾಸ್ತ್ರವನ್ನು ಪ್ರಶ್ನಿಸಲು ಆರಂಭಿಸಿದರು. ವಿವಿಯ ಮೊದಲ ವರ್ಷದಲ್ಲಿ ಪೋರ್ಟೆಲಾ ಎಂಬ ರಾಜಕೀಯ ಅರ್ಥಶಾಸ್ತ್ರದ ಪ್ರಸಿದ್ಧ ಪ್ರಾಧ್ಯಾಪಕರು ಬಂಡವಾಳಶಾಹಿಯ ನಿಯಮಗಳನ್ನು ವಿವರಿಸಿದರು. ಆದರೆ ಉಳಿದ ಯಾವ ಸಿದ್ಧಾಂತಗಳನ್ನೂ ಹೇಳಲಿಲ್ಲ. ಆದರೂ ಆ ಪಾಠವನ್ನು ಕೇಳುತ್ತಲೇ ತಮ್ಮೊಳಗೆ ವಿಪರೀತ ಅನುಮಾನಗಳನ್ನು ಬೆಳೆಸಿಕೊಂಡರು. ಪ್ರಶ್ನಿಸಲು ಆರಂಭಿಸಿದರು. ಏಕೆಂದರೆ ಫಿಡೆಲ್ ಸ್ವತಃ ಬೃಹತ್ ಲ್ಯಾಟಿಫಂಡಿಯೋದಲ್ಲಿ ಬೆಳೆದಿದ್ದರು. ವಿಶ್ವದ ಹಲವಾರು ಆದರ್ಶವಾದಿಗಳ ರೀತಿಯಲ್ಲಿ ಮಾನವ ಸಮಾಜದ ಸಮಸ್ಯೆಗಳನ್ನು ಮತ್ತು ವ್ಯವಸ್ಥೆಯನ್ನು ಪ್ರಶ್ನಿಸಲು ತೊಡಗಿದರು.

ಫಿಡೆಲ್ ಯೂನಿವರ್ಸಿಟಿಯಲ್ಲಿ ತರಗತಿಗಳಿಗೆ ಹಾಜರಾದದ್ದು ಕಡಿಮೆ. ಆವರಣದ ಪುಟ್ಟ ಬೆಂಚುಗಳಲ್ಲಿ ಕುಳಿತು ಇತರೆ ವಿದ್ಯಾರ್ಥಿಗಳಿಂದ ತರಗತಿಯ ವಿಷಯಗಳನ್ನು ಕೇಳುತ್ತಿದ್ದರು. ಅದಕ್ಕಿಂತಲೂ ಮುಖ್ಯವಾದ ವಿಚಾರವೆಂದರೆ ಫಿಡೆಲ್ ವಿವರಿಸುತ್ತಿದ್ದ ಸಿದ್ಧಾಂತಗಳನ್ನು ಆಲಿಸಲು ವಿದ್ಯಾರ್ಥಿಗಳ ಗುಂಪು ಯಾವಾಗಲೂ ಸುತ್ತುವರಿದಿರುತ್ತಿತ್ತು. ತಮ್ಮ ವಾದಗಳ ಮೂಲಕ ಅವರನ್ನು ಆಕರ್ಷಿಸುತ್ತಿದ್ದರು. ಯೂನಿವರ್ಸಿಟಿಯಲ್ಲಿರುತ್ತಿದ್ದ ನಿಯಮಗಳನ್ನು ಅನುಸರಿಸಿ ತಮ್ಮ ಕೊನೆಯ ವರ್ಷದಲ್ಲಿ ಮೂರು ಮೇಜರ್‌ಗಳನ್ನು – ಕಾನೂನು, ರಾಜತಾಂತ್ರಿಕ ಕಾನೂನು ಮತ್ತು ಸಮಾಜ ವಿಜ್ಞಾನಗಳನ್ನು – ತೆಗೆದುಕೊಂಡರು. ಒಂದೇ ಬಾರಿಗೆ ಮೂರು ಪದವಿಗಳನ್ನು ಪಡೆಯುವ ಆಕಾಂ–ಕ್ಷೆ ರೂಪುಗೊಳ್ಳುವಷ್ಟರಲ್ಲಿ ಫಿಡೆಲ್‌ರ ರಾಜಕೀಯ ಚಿಂತನೆಗಳು ಸ್ಪಷ್ಟವಾಗಿ ರೂಪ ಪಡೆದುಕೊಳ್ಳುತ್ತಿತ್ತು. ಅರ್ಥಶಾಸ್ತ್ರದಲ್ಲಿ ಆಳಕ್ಕೆ ಅಭ್ಯಾಸ ಮಾಡಬೇಕೆಂಬ ಆಲೋಚನೆ ಬಂದಾಗ ಬ್ರಿಟನ್‌ನಲ್ಲೋ ಅಥವಾ ಅಮೇರಿಕದಲ್ಲೋ ಓದಬೇಕೆಂದು ಬಯಸಿದ್ದರು. ಅಷ್ಟೊತ್ತಿಗೆ ಫಿಡೆಲ್ ದಿನದಲ್ಲಿ ಹದಿನೈದು–ಹದಿನಾರು ಗಂಟೆ ಕೂತಕಡೆಯಿಂದ ಪಕ್ಕ ಸರಿಯದೆ ಓದಲು ಪ್ರಾರಂಭಿಸಿದರು.


ಪಿಎಫ್ ಮೇಲೆ ತೆರಿಗೆಯ ಗೊಂದಲ- 'ಉತ್ತಮ ಆಳ್ವಿಕೆ'ಯ ಪರಿ!

ಭವಿಷ್ಯ ನಿಧಿಯ ಮೇಲೆ ತೆರಿಗೆ ಹಾಕುವ ಹಣಕಾಸು ಮಂತ್ರಿಗಳ ಬಜೆಟ್ ಸೂಚನೆ ವ್ಯಾಪಕ ಪ್ರತಿಭಟನೆಗಳಿಗೆ ಕಾರಣವಾಗಿದೆ. ಹೀಗೆ ಪ್ರತಿಭಟಿಸಿದವರಲ್ಲಿ 'ಅಚ್ಛೇದಿನ್'ಗಳ ಬಗ್ಗೆ ಬಹಳ ನಂಬಿಕೆಯಿರುವ ಅವರ ಪರಿವಾರದವರು ಮತ್ತು ಬೆಂಬಲಿಗರೂ ಇದ್ದಾರೆ ಎಂಬುದು ಒಂದು ಸಂಗತಿಯಾದರೆ, ಈ ಪ್ರತಿಭಟನೆಗೆ ಸರಕಾರದ ವಿವಿಧ ವಕ್ತಾರರುಗಳಿಂದ ಬಂದ ವಿಭಿನ್ನ ಸ್ಪಷ್ಟೀಕರಣಗಳು ಈ ಸರಕಾರದ 'ಉತ್ತಮ ಆಳ್ವಿಕೆ'ಯನ್ನು ತೋರಿಸುತ್ತದೆಯೇ ಅಥವ 'ಕನಿಷ್ಟ ಸರಕಾರ, ಗರಿಷ್ಟ ಆಳ್ವಿಕೆ' ಯನ್ನು ತೋರಿಸುತ್ತದೆಯೇ ಎಂಬ ಬಗ್ಗೆಯೂ ಜಿಜ್ಞಾಸೆ ಮೂಡಿಸುವಂತಾಗಿದೆ.

ನೌಕರರ ಭವಿಷ್ಯ ನಿಧಿ(ಇಪಿಎಫ್) ಮತ್ತು ಇಎಸ್ಐ ಮೇಲೆ ಈ 'ಒಳ್ಳೆಯ ದಿನ'ಗಳ ಆರಂಭದಿಂದಲೇ ಸ ರಕಾರ ಕಣ್ಣು ಹಾಕಿತ್ತು. ಏಕೆಂದರೆ ಕಾರ್ಮಿಕರ ಎಲ್ಲ ಉಳಿತಾಯಗಳನ್ನೂ ಶೇರು ಮಾರುಕಟ್ಟೆಗೆ ತಳ್ಳುವುದು ಎಲ್ಲ ನವ-ಉದಾರವಾದಿಗಳ ಗುರಿ ತಾನೇ?

ಇಪಿಎಫ್ ಚಂದಾದಾರರು ಎನ್‌ಪಿಎಸ್(ಹೊಸ ಪಿಂಚಣಿ ಯೋಜನೆ) ಮತ್ತು ಇಎಸ್ಐ ಚಂದಾದಾರರು ವೈದ್ಯಕೀಯ ವಿಮಾ ವ್ಯವಸ್ಥೆಯನ್ನು ಆರಸಿಕೊಳ್ಳುವಂತೆ ಮಾಡಬೇಕು ಎಂಬ ಹಣಕಾಸು ಮಂತ್ರಿಗಳ ಪ್ರಯತ್ನ ಕಾರ್ಮಿಕ ಸಂಘಟನೆಗಳ ಐಕ್ಯ ಪ್ರತಿರೋಧದಿಂದಾಗಿ ಸಾಧ್ಯವಾಗಲಿಲ್ಲ. ನಂತರ ಕೇಂದ್ರ ಭವಿಷ್ಯ ನಿಧಿ ಮಂಡಳಿಯಲ್ಲಿ ಎಲ್ಲ ಕಾರ್ಮಿಕರ ಪ್ರತಿನಿಧಿಗಳ ವಿರೋಧವನ್ನೂ ಲೆಕ್ಕಿಸದೆ ಭವಿಷ್ಯ ನಿಧಯ 5ರಿಂದ 15ಶೇ.ವನ್ನು ಶೇರು ಮಾರುಕಟ್ಟೆಗೆ ತಿರುಗಿಸುವಂತೆ ಸರಕಾರ ಬಲವಂತ ಮಾಡಿತು.

ಈ ಬಜೆಟಿನಲ್ಲಿ 60% ಭವಿಷ್ಯ ನಿಧಿಯ ಮೇಲೆ ತೆರಿಗೆ ವಿಧಿಸಲಾಗುವುದು




ವ್ಯಂಗ್ಯಚಿತ್ರ: ಗೋಕುಲ್, ಡೆಕ್ಕನ್ ಕ್ರಾನಿಕಲ್

ಎಂಬ ಸೂಚನೆ ಇದೇ ದಾರಿಯ ಮುಂದಿನ ಮೈಲಿಗಲ್ಲಾಗಿತ್ತು. ಭಾರತೀಯ ಜನತೆಯ ಎಲ್ಲ ಸಂಪನ್ಮೂಲಗಳನ್ನು ಲೂಟಿ ಮಾಡಲು ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳಕ್ಕೆ ಅನುಕೂಲ ಕಲ್ಪಿಸುವ ಅವರ ನೀತಿಗಳ ಭಾಗವಿದು ಎಂದು ಸಿಐಟಿಯು ಪ್ರಧಾನ ಕಾರ್ಯದರ್ಶಿ ತಪನ್ ಸೆನ್ ಹೇಳುತ್ತಾರೆ. ಕಾರ್ಪೊರೇಟ್‌ಗಳಿಗೆ ಎಲ್ಲ ರೀತಿಯ ವಿನಾಯ್ತಿ-ರಿಯಾಯ್ತಿ ಕೊಡುವ ಸರಕಾರ ಕಾರ್ಮಿಕರ ಆದಾಯದ ಮೆಲೆ ಮಾತ್ರ ಈ ಮೂಲಕ ಎರಡೆರಡು ಬಾರಿ ತೆರಿಗೆ ಹಾಕುವ ಪ್ರಯತ್ನ ನಡೆಸಿದೆ ಎಂದು ಅವರು ಹೇಳಿದ್ದಾರೆ.

ಪ್ರತಿಭಟನೆಯನ್ನು ಕಂಡ ಸರಕಾರದ ಒಬ್ಬ ವಕ್ತಾರರು ಕೇವಲ ಬಡ್ಡಿಯ ಮೇಲೆ ತೆರಿಗೆ ಹಾಕಲಾಗವುದು ಎಂದರು. ಮತ್ತೊಬ್ಬರು ಯಾವುದಾದರೂ ಅನ್ಯುಟಿ(ವಾರ್ಷಿಕವಾಗಿ ಹಣಬರುವ) ಯೋಜನೆಗಳಲ್ಲಿ ಭವಿಷ್ಯ ನಿಧಿಯ ಹಣವನ್ನು ತೊಡಗಿಸಿದರೆ ತೆರಿಗೆ ಬೀಳುವದಿಲ್ಲ ಎಂದರು. ಮತ್ತೊಬ್ಬರು ತಿಂಗಳಿಗೆ 15,000ರೂ.ಗಿಂತ ಹೆಚ್ಚು ಸಂಬಳ ದವರಿಗೆ ಮಾತ್ರ ಅನ್ವಯವಾಗುತ್ತದೆ ಎಂದರು. ಮೂರುವರೆ ಕೋಟಿ ಚಂದಾದಾರರಲ್ಲಿ ಇವರ ಸಂಖ್ಯೆ ಸುಮಾರು 70ಲಕ್ಷ ಮಾತ್ರ ಎಂದರು. ಈ ಎಲ್ಲ ಗೊಂದಲಗಳಿಂದಾಗಿ ಪ್ರಧಾನ ಮಂತ್ರಿಗಳ ಕಚೇರಿ ಮಧ್ಯಪ್ರವೇಶ ಮಾಡುವಂತಾಗಿದೆ. ಕೊನೆಗೆ ಹಣಕಾಸು ಮಂತ್ರಿಗಳು ಬಜೆಟ್ ಮೇಲೆ ಚರ್ಚೆಗೆ ಉತ್ತರ ಕೊಡುವಾಗ ಅಂತಿಮ ಸ್ಪಷ್ಟೀಕರಣ ನೀಡುತ್ತಾರೆ ಎನ್ನಲಾಗಿದೆ. ಅಂದರೆ ಸರಕಾರಕ್ಕೇ ಈ ಬಗ್ಗೆ ಸ್ಪಷ್ಟತೆ ಇನ್ನೂ ಬ್ಬಂದಿಲ್ಲವೆಂದು ಅರ್ಥವೇ?

ಕಾರ್ಮಿಕ ಮಂತ್ರಿಗಳು ಈ ವಿಷಯವನ್ನು ಸಂಬಂಧಪಟ್ಟ ಎಲ್ಲರೊಂದಿಗೆ ಚರ್ಚಿಸುತ್ತಿದ್ದೇವೆ ಎಂದು ಮಾರ್ಚ್ 2ರಂದು ರಾಜ್ಯಸಭೆಗೆ ಹೇಳಿದ್ದಾರೆ. ಆದರೆ "ನಾನೂ ಒಬ್ಬ ಇದಕ್ಕೆ ಸಂಬಂಧಪಟ್ಟ ಒಂದು ಮಹತ್ವದ ಸಂಘಟನೆಯನ್ನು ಪ್ರತಿನಿಧಿಸುತ್ತಿದ್ದೇನೆ, ಕಾರ್ಮಿಕ ಇಲಾಖೆ ಕ-ರೆದ ಯಾವ ಸಭೆಯನ್ನೂ ತಪ್ಪಿಸಿಲ್ಲ, ಆದರೆ ಯಾವುದೇ ಸಂದರ್ಭದಲ್ಲೂ ಕಾರ್ಮಿಕ ಸಂಘಟನೆಗಳು ಭವಿಷ್ಯ ನಿಧಿಯಿಂದ ಹಿಂತೆಗೆದುಕೊಳ್ಳುವ ಮೊತ್ತದ ಮೇಲೆ ತೆರಿಗೆ ಹಾಕುವ ಸೂಚನೆಯನ್ನು ಒಪ್ಪಿಲ್ಲ" ಎಂದು ತಪನ್ ಸೆನ್ ಹೇಳಿದ್ದಾರೆ.

ಕಾರ್ಪೊರೇಟ್‌ಗಳ ಪರವಾಗಿ ನಿಂತು ಕೊಂಡೂ ಕಾರ್ಮಿಕರಿಗೆ, ರೈತರಿಗೆ 'ಒಳ್ಳೆಯ ದನ'ಗಳ ಭರವಸೆ ನೀಡುವುದರ ವೈರುಧ್ಯವೇ ಈ ಗೊಂದಲ ಎಂಬುದರಲ್ಲಿ ಸಂದೇಹವಿಲ್ಲ. ಇದು ಹಿಡಿಯಷ್ಟು ಮಂದಿಯ ಹಿತ ಕಾಯುವವರು 'ಕಡಿಮೆ ಸರಕಾರ'ವೇನೋ ಕೊಡಬಹದು, ಆದರೆ 'ಗರಿಷ್ಟ ಆಳ್ವಿಕೆ' ಕೊಡಲು ಸಾಧ್ಯವೇ ಎಂಬ ಪ್ರಶ್ನೆಯನ್ನೂ ಎತ್ತುತ್ತದೆ.



ಟಿಐಎಸ್‌ಎಸ್‌ನಲ್ಲಿ ಜೆಎನ್‌ಯು ಪ್ರಾಧ್ಯಾಪಕರ ಆಹ್ವಾನಿತ ಉಪನ್ಯಾಸ ರದ್ದು

ಟಾಟಾ ಇನ್ಸ್‌ಟಿಟ್ಯೂಟ್ ಆಫ್ ಸೋಶಿಯಲ್ ಸೈನ್ಸ್ ಅಥವ ಟಿಐಎಸ್‌ಎಸ್ ಮುಂಬೈಯಲ್ಲಿರುವ ಒಂದು ಪ್ರತಿಷ್ಠಿತ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆ. ಇಲ್ಲಿ 'ಸಮಕಾಲೀನ ಯುಗದಲ್ಲಿ ಡಾ. ಅಂಬೇಡ್ಕರ್ ರವರ ಸ್ವಾಧೀನ' ಎಂಬ ವಿಷಯದ ಮೇಲೆ ಉಪನ್ಯಾಸ ಮಾಡಲು ಜೆಎನ್‌ಯು ಪ್ರಾಧ್ಯಾಪಕ ಪ್ರೊ. ವಿವೇಕ್ ಕುಮಾರ್ ಅವರನ್ನು ಆಹ್ವಾನಿಸಲಾಗಿತ್ತು. ಆದರೆ ಅವರ ಉಪನ್ಯಾಸ ಕೇಳಲೆಂದೇ ಬಂದವರು ಟಿಐಎಸ್‌ಎಸ್‌ನ ಪ್ರೊ.ಅವತ್ತಿ ರಾಮಯ್ಯ ಅವರ ಅಂಬೇಡ್ಕರ್ ರವರ ರಾಷ್ಟ್ರವಾದದ ವಿಚಾರ ಕುರಿತ ಉಪನ್ಯಾಸವನ್ನು ಕೇಳಬೇಕಾಯಿತು. ಜೆಎನ್‌ಯು ಪ್ರಾಧ್ಯಾಪಕರ ಉಪನ್ಯಾಸ ರದ್ದಾಗಿದೆ ಎಂದು ಮೊದಲೇ ಹೇಳಿರಲಿಲ್ಲವಂತೆ. ಉಪನ್ಯಾಸ ಆರಂಭವಾಗುವ ವೇಳೆಗಷ್ಟೇ ಅದನ್ನು ಪ್ರಕಟಿಸಲಾಯಿತಂತೆ. ಪ್ರೊ. ವಿವೇಕ್ ದಿಲ್ಲಿ ಟ್ರಾಫಿಕ್‌ನಲ್ಲಿ ಸಿಕ್ಕಿ ಹಾಕಿಕೊಂಡಿದ್ದರಿಂದ ವಿಮಾನ ಹತ್ತಲಾಗಲಿಲ್ಲ, ತನ್ನ ಭೇಟಿಯನ್ನು ರದ್ದು ಮಾಡಿದರು ಎಂದು ಅಲ್ಲಿ ಹೇಳಲಾಯಿತಂತೆ. (ಇಂಡಿಯನ್ ಎಕ್ಸ್‌ಪ್ರೆಸ್, ಫೆ.28)

ಆದರೆ ಅದರ ಮೊದಲು ಪ್ರೊ. ವಿವೇಕ್ ಕುಮಾರ್ ಗ್ವಾಲೇರ್‌ಗೆ ಹೋಗಿದ್ದಾಗ ಒಂದು ವಿಚಾರ ಸಂಕಿರಣದಲ್ಲಿ ಬಲಪಂಥೀಯ ಗುಂಪಿನವರು ಅವರ ಮೇಲೆ ಹಲ್ಲೆ ನಡೆಸಿದರು ಎನ್ನಲಾಗಿದೆ. ಮುಂಬೈಗೆ ವಿಮಾನ ತಪ್ಪಿ ಹೋಯಿತು, ಯಾರೂ ತನ್ನನ್ನು ಬರಬೇಡಿ ಎಂದಿರಲಿಲ್ಲ ಎಂದು ಅವರು ಹೇಳಿದ್ದಾರೆ. ನಾನೊಬ್ಬ ಅಂಬೇಡ್ಕರ್ ವಿಚಾರಗಳನ್ನು ಪ್ರತಿಪಾದಿಸುವ ಅಧ್ಯಾಪಕ, ನನ್ನನ್ನು ವಿರೋಧಿಸುತ್ತೇವೆನ್ನುವವರಿಗೆ ಅಂಬೇಡ್ಕರ್ ಅವರಲ್ಲಿ ನಂಬಿಕೆ ಇಲ್ಲವೇ ಎಂದು ಅವರು ಪ್ರಶ್ನಿಸಿದ್ದಾರೆ.


ಜೆಎನ್‌ಯು ನಂತರ ಈ ಟಿಐಎಸ್‌ಎಸ್ ಬಲಪಂಥೀಯ ಶಕ್ತಿಗಳ ಮುಂದಿನ ಗುರಿ ಎಂಬ ವರದಿಗಳ ಹಿನ್ನೆಲೆಯಲ್ಲಿ ಈ ಘಟನೆ ನಡೆದಿದೆ ಎಂಬುದು ಕೆಲವರ ಗುಮಾನಿ. ಟ್ರಾಂಬೆ ಪೋಲೀಸ್ ಈ ಸಂಸ್ಥೆಯ ಕ್ಯಾಂಪಸ್‌ನಲ್ಲಿ ಈ ಸಂದರ್ಭಕ್ಕಾಗಿ 50 ಸಿಬ್ಬಂದಿಯನ್ನು ನೇಮಿಸಿತ್ತು, ಅದರೆ ಅವರಿಗೂ ಅವರು ಬಂದಿಲ್ಲ ಎಂಬ ವಿಷಯ ತಿಳಿಸಿರಲಿಲ್ಲವಂತೆ.

ರೈಲ್ವೆ ಬಜೆಟ್ ದರ ಏರಿಕೆ ಮಾಡಲಿಲ್ಲವೇಕೆ?

ಈ ವರ್ಷದ ರೈಲ್ವೆ ಬಜೆಟಿನಲ್ಲಿ ಪ್ರಯಾಣಿಕ, ಸಾಗಾಣಿಕೆ ದರಗಳನ್ನು ಏರಿಸದಿರುವುದು ಒಂದು ಸಾಧನೆ ಎಂಬಂತೆ 'ಅಚ್ಛೇದಿನ'ವಾಲಾಗಳು ಹೇಳುತ್ತಿದ್ದಾರೆ.

ಕಳೆದ ಡಿಸೆಂಬರಿನಲ್ಲೇ 33ಶೇ. ಏರಿಕೆ ಮಾಡಿದ್ದರಿಂದ ಇದು ಸಾಧ್ಯವಿರಲಿಲ್ಲ ಎಂಬುದು ಒಂದು ಕಾರಣವಾದರೆ, ರೈಲ್ವೆ ಇಲಾಖೆ ಪ್ರಯಾಣಿಕರ ಗಮನಕ್ಕೆ ಬಾರದಂತೆ ಹೆಚ್ಚಿನ ದರ ವಸೂಲಿ ಮಾಡುವ ತಂತ್ರಗಳನ್ನು ಬಳಸುತ್ತಿದೆ ಎಂದು ಅಖಿಲ ಬಾರತ ಲೋಕೋ ರನ್ನಿಂಗ್ ಸ್ಟಾಫ್ ಸಂಘಟನೆಯ ಟಿಪ್ಪಣಿಯಿಂದ ಕಂಡು ಬರುತ್ತದೆ.

ಈಗ '30-40ಶೇ. ಟಿಕೆಟುಗಳನ್ನು 'ತತ್ಕಾಲ್' ಮೂಲಕವೇ ಮಾರಲಾಗುತ್ತದೆ, ಇದರ ದರಗಳು ಹೆಚ್ಚು, ಇವನ್ನು ರದ್ದು ಮಾಡುವಂತಿಲ್ಲ, ಮತ್ತು ಯಾವ ರೀತಿಯ ದರ ರಿಯಾಯ್ತಿಗಳೂ ಇದಕ್ಕೆ ಅನ್ವಯವಾಗುತ್ತಿಲ್ಲ. ರೈಲ್ವೆ ಇಲಾಖೆ ಈಗ ಪ್ರೀಮಿಯಂ ಟ್ರೈನುಗಳು ಎಂಬುದನ್ನು ಆರಂಭಿಸಿದ್ದು ಇವಕ್ಕೆ ಈಗಾಗಲೇ ಪ್ರಕಟಿಸಿರುವ ದರಗಳು ಅನ್ವಯಿಸುವುದಿಲ್ಲ. ಇದಲ್ಲದೆ ಸಾಮಾನ್ಯ ಟ್ರೈನುಗಳಿಗೂ ಈ ಪ್ರೀಮಿಯಂ ದರಗಳನ್ನು ಅನ್ವಯಿಸಲಾಗುವುದಂತೆ.



ವ್ಯಂಗ್ಯಚಿತ್ರ: ಸತೀಶ್‌ಆಚಾರ್ಯ, ಸಿಫಿ.ಕಾಂ

ಸದ್ಯದಲ್ಲೆ ಪ್ರಯಾಣಿಕರು ತತ್ಕಾಲ್ ಅಥವ ಪ್ರೀಮಿಯಂ ಇವೆರಡರಲ್ಲಿ ಒಂದನ್ನು ಮಾತ್ರ ಆಯ್ದುಕೊಳ್ಳಬೇಕಾದ 'ಒಳ್ಳೆಯ ದಿನಗಳು' ಬರಲಿವೆಯಂತೆ.

ಸಾರ್ವಜನಿಕ-ಖಾಸಗಿ ಪಾಲುದಾರಿಕೆ(ಪಿಪಿಪಿ)ಯ ನಿಜಸ್ವರೂಪ

ಪಿಪಿಪಿ ಮೂಲಕ ಮುಂದಿನ ಐದು ವರ್ಷಗಳಲ್ಲಿ 1ಲಕ್ಷ ಕೋಟಿ ರೂ. ಸಂಗ್ರಹಿಸುವ ಯೋಜನೆ ಇದ್ದು ಪ್ರತಿ ವರ್ಷ 20, 000 ಕೋಟಿ ರೂ. ಸಂಗ್ರಹಿಸಬೇಕಾಗಿತ್ತು. ಮೊದಲ ಎರಡು ವರ್ಷಗಳಿಗೆ 6000 ಕೋಟಿ ಮತ್ತು 1000ಕೋಟಿ ನಿಗದಿ ಮಾಡಲಾಗಿತ್ತು. ಅದು ಆಗಿಲ್ಲ. 3ನೇ ವರ್ಷಕ್ಕೆ 6000 ಕೋಟಿ ರೂ.ಗಳ ಗುರಿ ಕೊಡಲಾಗಿದೆ. ಅದೂ ಬರುವುದಿಲ್ಲ. ಇದರ ಪರಿಣಾಮವೆಂದರ ಐದನೇ ವರ್ಷದ ಕೊನೆಯ ವೇಳೆಗೆ ಹೆಚ್ಚಿನ ಯೋಜನೆಗಳು ಕಾರ್ಯಗತವಾಗಿರುವುದಿಲ್ಲ.

ಸಿಬ್ಬಂದಿಯ ಉತ್ಪಾದಕತೆ

ರೈಲ್ವೆ ಸಿಬ್ಬಂದಿಯ ಉತ್ಪಾದಕತೆಯನ್ನು ತಲಾ 1000 ಟ್ರಾಫಿಕ್ ಯುನಿಟ್‌ಗಳಲ್ಲಿ ಅಳೆಯಲಾಗುತ್ತದೆ. 1991ರಲ್ಲಿ ಇದು 346 ಇತ್ತು, 2012-13ರಲ್ಲಿ ಇದು 1467 ಆಗಿದೆ, ಅಂದರೆ ಸುಮಾರು ಐದು ಪಟ್ಟು ಹೆಚ್ಚಿದೆ. ಆದರೆ 2001-02ರಲ್ಲಿ ಸಿಬ್ಬಂದಿಯ ಒಟ್ಟು ಸಂಬಳ ಒಟ್ಟು ರೆವಿನ್ಯೂ ಖರ್ಚಿನ 38.33ಶೇ. ಇದ್ದದ್ದು 2012-13ರಲ್ಲಿ 34.24ಶೇ. ಕ್ಕೆ ಇಳಿದಿದೆ ಎಂದು ಸಿಬ್ಬಂದಿ ಸಂಘಟನೆ ಹೇಳಿದೆ. ಇದು ಆಗಿರುವುದು ರೈಲ್ವೆಯ ವಿಸ್ತರಣೆಯಾದರೂ ಹೊಸ ಹುದ್ದೆಗಳನ್ನು ಸೃಷ್ಟಿಸದಿರುವುದರಿಂದ ಮತ್ತು ಖಾಲಿ ಹುದ್ದೆಗಳನ್ನು ಭರ್ತಿ ಮಾಡದ್ದರಿಂದ. ಇದರಿಂದಾಗಿ 1990-91ರಲ್ಲಿ 16.54 ಲಕ್ಷ ಇದ್ದ ರೈಲ್ವೆ ನೌಕರರ ಸಂಖ್ಯೆ ಈಗ 13.05ಲಕ್ಷಕ್ಕೆ ಇಳಿದಿದೆ-ರೈಲು ಸೇವೆಗಳು ಮತ್ತು ಆಸ್ತಿಗಳಲ್ಲಿ ಅಪಾರ ವೃದ್ಧಿಯಾಗಿದ್ದರೂ ಕೂಡ!. ಸುರಕ್ಷತಾ ಸಿಬ್ಬಂದಿಯ ವಿಷಯದಲ್ಲೂ ಇದೇ ಕತೆ. ಅನಿಲ್ ಕಾಕೋಡ್ಕರ್ ಸಮಿತಿ 1.26 ಲಕ್ಷ ಸುರಕ್ಷತಾ ಸಿಬ್ಬಂದಿಯನ್ನು ನೇಮಿಸಿಕೊಳ್ಳಬೇಕೆಂದು ಹೇಳಿದ್ರೂ ನೇಮಸಿದ್ದು 25 ಸಾವಿರ ಸಿಬ್ಬಂದಿಯನ್ನು ಮಾತ್ರ.

ಇದೀಗ ಹೈಸ್ಪೀಡ್ ರೈಲುಗಳ ಬಗ್ಗೆ ಯೋಚಿಸುತ್ತಿರುವ ಇಲಾಖೆಯಲ್ಲಿನ ಸ್ಥಿತಿ.

ಮಹಿಷಾಸುರ ಜಯಂತಿಯ ಚರ್ಚೆ ನಡೆಸಿದ ಟಿವಿ ಸಂಯೋಜಕಿಗೆ 2000 ಬೆದರಿಕೆ ಕರೆಗಳು

ಸಿಂಧು ಸೂರ್ಯ ಕುಮಾರ್ ಏಶ್ಯಾನೆಟ್ ನ್ಯೂಸ್‌ಟಿವಿಯ ಮುಖ್ಯ ಸಂಯೋಜಕ ಸಂಪಾದಕಿ. ಅವರು ಫೆ.26ರಂದು ಜನಪ್ರಿಯ ಮಲೆಯಾಳಂ ಟಿವಿ ಸುದ್ದಿ ಶೋನಲ್ಲಿ ಮಹಿಷಾಸುರ ಜಯಂತಿಯನ್ನು ಆಚರಿಸುವುದು ದೇಶದ್ರೋಹವಾಗುತ್ತದೆಯೇ ಎಂಬ ಚರ್ಚೆಯನ್ನು ನಡೆಸಿದರು. ಆನಂತರ ಆಕೆಗೆ ಹಿಂದುತ್ವ-ಪರ ಗುಂಪುಗಳಿಂದ 2000 ಬೈಗುಳ ಕರೆಗಳು ಬಂದಿವೆ ಎಂದು ಇಂಡಿಯನ್ ಎಕ್ಸ್‌ಪ್ರೆಸ್(ಮಾ.1) ವರದಿ ಮಡಿದೆ. ಆಕೆ ದುರ್ಗೆಯನ್ನು ಸೂಳೆ ಎಂದು ಹೇಳಿರುವುದಾಗಿ ಅವರೆಲ್ಲರ ಆಪಾದನೆ.

ತಮಾಷೆಯೆಂದರೆ ಆಕೆಯ ಬಾಯಿಂದ ಆ ಮಾತೇ ಬಂದಿರಲಿಲ್ಲ. ಅದನ್ನು ಹೇಳಿದವರು ರಾಜ್ಯ ಬಿಜೆಪಿ ಕಾರ್ಯದರ್ಶಿ ವಿ ವಿ ರಾಜೇಶ್. ಅವರು ಜೆಎನ್‌ಯು ನಲ್ಲಿ ಹಣಚಲಾಗಿತ್ತು ಎನ್ನಲಾಗಿದ್ದ ಕರಪತ್ರವೊಂದನ್ನು ಓದುತ್ತ ಅದನ್ನು ಉದ್ಧರಿಸಿದ್ದರು.

ತಿರುವನಂತಪುರ ಪೋಲೀಸರು ಈ ಸಂಬಂಧದಲ್ಲಿ ಐವರನ್ನು ಬಂಧಿಸಿದ್ದು ಎಲ್ಲರೂ ಬಿಜೆಪಿ, ಆರೆಸ್ಸೆಸ್, ಹಿಂದುತ್ವ ಗುಂಪುಗಳಿಗೆ ಸಂಬಂಧಪಟ್ಟವರು. ಸಿಂಧುಗೆ ನಿಮಿಷಕ್ಕೊಂದರಂತೆ ಕರೆ ಬರುತ್ತಿತ್ತಂತೆ, ಹೆಚ್ಚಿನವರು ಆಕೆಯನ್ನು ಸೂಳೆ ಎಂದು ಬೈಯುತ್ತಿದ್ದಾರಂತೆ. ರಾಜ್ಯದ ಬಿಜೆಪಿ-ಆರೆಸ್ಸೆಸ್ ಮುಖಂಡರು ಈಬಗ್ಗೆ ಸ್ಪಷ್ಟೀಕರಣವನ್ನು ಕೂಡ ನೀಡಿಲ್ಲ, ಪತ್ರಿಕಾ ಸ್ವಾತಂತ್ರ್ಯದ ಬಗ್ಗೆ ಒಂದು ಸಾಮಾನ್ಯ ಹೇಳಿಕೆಯನ್ನಷ್ಟೇ ನೀಡಿ ಸುಮ್ಮನಾಗಿದ್ದಾರೆ ಎಂದು ಸಿಂಧು ಇಂಡಿಯನ್ ಎಕ್ಸ್‌ಪ್ರೆಸ್‌ಗೆ ತಿಳಿಸಿದ್ದಾರೆ.



ಅದು ಹಗೆಯುಗುಳುವ ಭಾಷಣವಲ್ಲ. ಆತ ಮಾತಾಡುವುದೇ ಹಾಗೆ

ವ್ಯಂಗ್ಯಚಿತ್ರ: ಮುಂಜುಲ್, ಡಿಎನ್‌ಎ

ಮರುಳು ಮಾತಿನ ಬಜೆಟ್ 2016



ಕೆ.ಎಂ.ನಾಗರಾಜ್

ಇದು ಮೋದಿ ಸರಕಾರದ 2016-17ರ ಬಜೆಟ್ ಬಗ್ಗೆ ಜನಸಾಮಾನ್ಯರ ದೃಷ್ಟಿಯಿಂದ ಯೋಚಿಸುವ ಆರ್ಥಿಕ ತಜ್ಞರ ಮತ್ತು ಇತರ ಪರಿಣಿತರ ಒಕ್ಕೊರಲಿನ ಅಭಿಪ್ರಾಯ. ಇದೇ ಸರಕಾರದ ಆರ್ಥಿಕ ಸಮೀಕ್ಷೆಯಲ್ಲಿ ಗುರುತಿಸಿದ ಕೆಲವು ಅಂಶಗಳನ್ನು ಕೂಡ ಬಜೆಟಿನಲ್ಲಿ ನಿರ್ಲಕ್ಷಿಸಲಾಗಿದೆ ಎಂದು ಇವರು ಅಭಿಪ್ರಾಯ ಪಟ್ಟಿದ್ದಾರೆ.

ಆರ್ಥಿಕ ಸಮೀಕ್ಷೆಯ ಕೆಲವು ಅಂಶಗಳು

ಆರ್ಥಿಕ ಅಸಮಾನತೆಗಳು

ಪಾರ್ಲಿಮೆಂಟಿನಲ್ಲಿ ಮಂಡಿಸಿದ 2015–16 ಸಾಲಿನ ಆರ್ಥಿಕ ಸಮೀಕ್ಷೆಯು ಆರ್ಥಿಕ ಅಸಮಾನತೆಗಳು ಹೆಚ್ಚುತ್ತಿವೆ ಮತ್ತು ಸಬ್ಸಿಡಿಯ ದೊಡ್ಡ ಭಾಗ ಶ್ರೀಮಂತರ ಪಾಲಾಗುತ್ತಿದೆ ಎಂದು ತಿಳಿಸಿದೆ. ಸಮೀಕ್ಷೆಯಲ್ಲಿ ಮೊದಲ ಬಾರಿಗೆ ಆರ್ಥಿಕ ಅಸಮಾನತೆಗಳ ವಿಷಯ ಪ್ರಸ್ತಾಪವಾಗಿದೆ. ಭಾರತಕ್ಕೆ ಇತ್ತೀಚೆಗೆ ಭೇಟಿ ನೀಡಿದ್ದ ಪ್ರಖ್ಯಾತ ಅರ್ಥಶಾಸ್ತ್ರಜ್ಞ ಥಾಮಸ್ ಪಿಕೆಟಿ ಒಂದು ಸಂದರ್ಶನದಲ್ಲಿ, ಭಾರತದಲ್ಲಿರುವ ಆರ್ಥಿಕ ಅಸಮಾನತೆಗಳ ಮಟ್ಟವನ್ನು ವ್ಯಾಖ್ಯಾನಿಸಲು ಮಾಹಿತಿಯ ಕೊರತೆ ಇದೆ ಎಂದು ಹೇಳಿದ್ದರು ಮತ್ತು ಭಾರತದ "ಗಣ್ಯರು" ಹೆಚ್ಚಿನ ತೆರಿಗೆ ಏಕೆ ಕೊಡಬಾರದು? ಎಂದು ಕೇಳಿದ್ದರು. ಕಾರಣ ಏನಿದ್ದರೂ, ಮಾಹಿತಿ ಹೊರಬಂದಿರುವುದು ಮುಖ್ಯ.

ತೆರಿಗೆಗಳು: ರಾಷ್ಟ್ರೀಯ ಒಟ್ಟು ಉತ್ಪತ್ತಿಯಲ್ಲಿ, 85% ಭಾಗ ತೆರಿಗೆ ವ್ಯಾಪ್ತಿಗೆ ಒಳಪಟ್ಟಿಲ್ಲ. ಕೇವಲ 15% ಭಾಗ ತೆರಿಗೆಗೆ ಒಳಪಟ್ಟಿದೆ. ಒಟ್ಟು ತೆರಿಗೆಗಳ ಪ್ರಮಾಣವು ಜಿಡಿಪಿಯ ಶೇ. 16.6 ರಷ್ಟಿದೆ. ಯೂರೋಪ್‌ನಲ್ಲಿ ಇದು ಸುಮಾರು ಶೇ.34% ರಷ್ಟಿದೆ. ಕೇವಲ 4% ಮತದಾರರು ತೆರಿಗೆ ಕೊಡುತ್ತಿದ್ದಾರೆ. ಇದು ಶೇ.23ರ ಮಟ್ಟ ತಲುಪಬೇಕು. ದುಡಿಯುವವರ ಪೈಕಿ ಕೇವಲ 5.5% ಮಂದಿ ತೆರಿಗೆ ಕೊಡುತ್ತಾರೆ. ಯುಪಿಎ ಸರ್ಕಾರ 2012–13ರಲ್ಲಿ ವೈಯುಕ್ತಿಕ ಆದಾಯ ತೆರಿಗೆಗೆ ಒಳಪಡದ ಆದಾಯದ ಮಿತಿಯನ್ನು ಏರಿಸಿರದಿದ್ದರೆ, ಇನ್ನೂ ಒಂದು ಕೋಟಿ ಅರುವತ್ತೈದು ಲಕ್ಷ ಮಂದಿ ತೆರಿಗೆ ವ್ಯಾಪ್ತಿಗೆ ಒಳಪಡುತ್ತಿದ್ದರು ಮತ್ತು ತೆರಿಗೆ ವಿನಾಯ್ತಿಗಳನ್ನು ಕ್ರಮೇಣ ನಿಲ್ಲಿಸಬೇಕು ಎಂದಿದೆ ಸಮೀಕ್ಷೆ.

ನೇರ ತೆರಿಗೆಗಳ ಸಂಗ್ರಹವು ಅಂದಾಜಿಗಿಂತ 45,000 ಕೋಟಿ ರೂಗಳಷ್ಟು ಕಡಿಮೆಯಾಗಿದೆ ಎಂದಿದೆ ಸಮೀಕ್ಷೆ.

ಬಂಡವಾಳ ಉಂಟಾಗುವ ಪ್ರಮಾಣ 2014–15ರಲ್ಲಿ ಶೇ.30.8 ರಷ್ಟಿತ್ತು. 2015–16ರಲ್ಲಿ ಅದು ಶೇ.29.4ಕ್ಕೆ ಇಳಿದಿದೆ. ರಫ್ತುಗಳು ಶೇ.17.6ರಷ್ಟು ಇಳಿದಿವೆ. ಆಮದುಗಳು ಶೇ. 15.5ರಷ್ಟು ಇಳಿದಿವೆ. ಕಳೆದ ದಶಕದಲ್ಲಿ, ಬ್ಯಾಂಕ್ ಸಾಲಗಳ ಬೆಳವಣಿಗೆಯ ದರ ಶೇ.20ರಷ್ಟಿತ್ತು. ಈಗ ಬ್ಯಾಂಕ್ ಸಾಲಗಳ ಬೆಳವಣಿಗೆಯ ದರ ಶೇ. 11ರ ಮಟ್ಟದಲ್ಲಿದೆ ಎಂದಿದೆ ಸಮೀಕ್ಷೆ.

ಸಬ್ಸಿಡಿ: ಸಬ್ಸಿಡಿಯ ಸೋರಿಕೆಯಾಗುತ್ತಿದೆ. ಅದನ್ನು ತಡೆಗಟ್ಟಬೇಕು. ಎಲ್‌ಪಿಜಿ ಸಬ್ಸಿಡಿ ಸಿಲಿಂಡರ್‌ಗಳನ್ನು 12ರಿಂದ 10ಕ್ಕೆ ಇಳಿಸಬೇಕು ಎಂದಿದೆ ಸಮೀಕ್ಷೆ.

ಎನ್‌ಪಿಎ – ಬ್ಯಾಂಕ್‌ಗಳ ಹೀನಾಯ ಪರಿಸ್ಥಿತಿ

ಎನ್‌ಪಿಎ (ವಸೂಲಾಗದ ಸಾಲಗಳು) ಸಮಸ್ಯೆ ಬ್ಯಾಂಕ್‌ಗಳನ್ನು ಕಿತ್ತು ತಿನ್ನುತ್ತಿದೆ

ಸುಮಾರು 4.38 ಲಕ್ಷ ಕೋಟಿ ರೂಗಳ ಎನ್‌ಪಿಎ ಮತ್ತು 5.40 ಲಕ್ಷ ಕೋಟಿ ರೂಗಳ ಒತ್ತಡಕ್ಕೊಳಗಾದ ಸಾಲಗಳು ಬ್ಯಾಂಕ್‌ಗಳನ್ನು ಅಪಾಯದ ಅಂಚಿಗೆ ತಳ್ಳಿವೆ. 2008ರ ಜಾಗತಿಕ ಆರ್ಥಿಕ ಬಿಕ್ಕಟ್ಟಿನಲ್ಲಿ ಮೊದಲು ಬಲಿಯಾದದ್ದು ಅಮೆರಿಕದ ಬ್ಯಾಂಕ್‌ಗಳು. ಅದೇ ಹಳ್ಳದಲ್ಲಿ ನಮ್ಮ ಬ್ಯಾಂಕ್‌ಗಳು ಬೀಳಲಿವೆ ಎನ್ನುತ್ತಾರೆ ತಜ್ಞರು.

ಬಜೆಟ್ ಪ್ರಸ್ತಾಪಗಳು

ಈ ವರ್ಷದ ಬಜೆಟ್‌ನಲ್ಲಿ ಒತ್ತು ಕೊಡುವ ಅಂಶ ಯಾವುದೆಂಬುದನ್ನು ಬಜೆಟ್ ಮಂಡಿಸುವ ಹಿಂದಿನ ದಿನವೇ ಮೋದಿಯವರು ಹೊರಗೆಡವಿದ್ದರು. ಉತ್ತರ ಪ್ರದೇಶದ ಬರೇಲಿಯಲ್ಲಿ ರೈತರ ರ್‍ಯಾಲಿಯೊಂದನ್ನು ಉದ್ದೇಶಿಸಿ ಮಾತನಾಡಿದ ಅವರು ಮುಂದಿನ ಆರು ವರ್ಷಗಳಲ್ಲಿ ರೈತರ ಆದಾಯ ದುಪ್ಪಟ್ಟಾಗಬೇಕೆಂದು ಕರೆ ನೀಡಿದ್ದರು.

ರೈತರ ಆದಾಯ ದುಪ್ಪಟ್ಟಾದಾಗ, ಅದರ ಸಾಧಕ ಬಾಧಕಗಳೇನು? ರೈತರು ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರಗಳೇನು? ಸಾಂಕ್ರಾಮಿಕ ರೋಗದಂತೆ ಹರಡುತ್ತಿರುವ ರೈತರ ಆತ್ಮಹತ್ಯೆ ಮೂರು ಲಕ್ಷದ ಗೆರೆ ದಾಟಿದೆ. ಎನ್‌ಡಿಎ ಸರ್ಕಾರ ಅಧಿಕಾರಕ್ಕೆ ಬಂದ ನಂತರ, ಆತ್ಮಹತ್ಯೆಗಳಲ್ಲಿ 26% ಹೆಚ್ಚಳವಾಗಿದೆ. ಈ ಸಮಸ್ಯೆಗೆ ಬಜೆಟ್‌ನಲ್ಲಿ ಪರಿಹಾರದ ಸೂಚನೆ ಏನಾದರೂ ಇದೆಯೇ? 2014ರ ಲೋಕ ಸಭಾ ಚುನಾವಣೆಗಳಲ್ಲಿ ಕೊಟ್ಟ ಭರವಸೆಗಳನ್ನು ಕಾರ್ಯರೂಪಕ್ಕೆ ತರುವ ಕಾರ್ಯಕ್ರಮ ಯಾವುದಾದರೂ ಇದೆಯೇ? ಬಜೆಟ್‌ನಲ್ಲಿ ಈ ಪ್ರಶ್ನೆಗಳಿಗೆ ಉತ್ತರಗಳಿಲ್ಲ.

ಚುನಾವಣಾ ಘೋಷಣೆಗಳು

ಗ್ರಾಮೀಣ ಭಾರತಕ್ಕೆ ಸಂಬಂಧಿಸಿದ ಬಜೆಟ್ ಪ್ರಸ್ತಾಪಗಳು, ಮೋದಿ ಸರ್ಕಾರ ಹೊಸ ಗೆಟಪ್ಪಿನಲ್ಲಿ ಕಾಣಿಸಿಕೊಳ್ಳುವ ಬಯಕೆಯನ್ನು ಸೂಚಿಸುತ್ತವೆ. 'ಬಜೆಟ್ ಜನಪರವಾಗಿದೆ' ಎಂದು ಬಡಾಯಿ ಕೊಚ್ಚಿಕೊಳ್ಳಲು ಸಹಾಯವಾಗುವಂತಹ ಕೆಲವು ಘೋಷಣೆಗಳಿವೆ. ಇನ್ನೆರಡು ತಿಂಗಳಲ್ಲಿ, ತಮಿಳುನಾಡು, ಕೇರಳ, ಪಶ್ಚಿಮ ಬಂಗಾಳ ಮತ್ತು ಅಸ್ಸಾಂ ರಾಜ್ಯಗಳ ವಿಧಾನ ಸಭೆಗಳಿಗೆ ಚುನಾವಣೆಗಳು ನಡೆಯಲಿವೆ. ಕನಸುಗಳನ್ನು ಮಾರಾಟಮಾಡಿ, ಆಮಿಷಗಳನ್ನೊಡ್ಡಿ, ಈಡೇರಿಸದ ಭರವಸೆಗಳ ಮೂಲಕ ವೋಟು ಬಾಚಿಕೊಳ್ಳುವುದರಲ್ಲಿ ಪ್ರಾವೀಣ್ಯತೆ ಪಡೆದಿರುವ ಬಿಜೆಪಿ, ಮತ್ತೊಮ್ಮೆ ವಿಕ್ರಮ ಸಾಧಿಸಬಹುದೆಂದು ಎಣಿಸಿದೆ. ದಿಲ್ಲಿ ಮತ್ತು ಬಿಹಾರದ ಮತದಾರರು ಈಗಾಗಲೇ ಚುರುಕು ಮುಟ್ಟಿಸಿದ್ದಾರೆ.

ಸರ್ಕಾರದ ಖರ್ಚುಗಳು ಇಳಿಯುತ್ತಿವೆ

ನಮ್ಮ ಬಜೆಟ್ "ಹಳ್ಳಿಗಳ, ರೈತರ ಮತ್ತು ಬಡವರ ಸಮಸ್ಯೆಗಳಿಗೆ, ಅಷ್ಟೇ ಏಕೆ, ದೇಶದ ಇಡೀ 125 ಕೋಟಿ ಜನರ ಸಮಸ್ಯೆಗಳಿಗೆ ಸ್ಪಂದಿಸುತ್ತದೆ" ಎಂದೂ ಮತ್ತು ಜಿಡಿಪಿ ಹೆಚ್ಚುತ್ತಿದೆ ಎಂದೂ ಬಿಜೆಪಿಯ ಮುಖಂಡರು ಹರ್ಷ ವ್ಯಕ್ತಪಡಿಸುತ್ತಾರೆ. ಆದರೆ, ಜಿಡಿಪಿಯ ಗಾತ್ರಕ್ಕೆ ಹೋಲಿಸಿದರೆ, ಸರ್ಕಾರದ ಖರ್ಚುಗಳು ಕ್ರಮೇಣ ಕಡಿಮೆಯಾಗುತ್ತಿವೆ ಎನ್ನುತ್ತಾರೆ ತಜ್ಞರು. 2009–10ರಲ್ಲಿ ಜಿಡಿಪಿಯ ಶೇ.15.9 ರಷ್ಟಿದ್ದ ಸರ್ಕಾರದ ವೆಚ್ಚಗಳು, 2015–16ರಲ್ಲಿ ಶೇ. 13.3ಕ್ಕೆ ಇಳಿದು, 2016–17ರಲ್ಲಿ ಶೇ.12.6 ಕ್ಕೆ ಇಳಿಯಲಿವೆ. ಹಾಗಾಗಿ. ಇಳಿಮುಖವಾಗುತ್ತಿರುವ ಸರ್ಕಾರದ ಖರ್ಚುಗಳು. ಜನ ಕಲ್ಯಾಣದ ಉದ್ದೇಶವನ್ನು ಈಡೇರಿಸುವುದು ಬೊಗಳೆಯ ಮಾತುಗಳಾಗುತ್ತವೆ. ಮೇಲಾಗಿ, ಆರ್ಥಿಕ ಅಸಮಾನತೆಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಮತ್ತು ಮಾನವ ಸಂಪನ್ಮೂಲದ ಲಾಭ ಪಡೆಯುವ ಉದ್ದೇಶದಿಂದ, ಆರೋಗ್ಯ ಮತ್ತು ಶಿಕ್ಷಣ ವಲಯಗಳಿಗೆ ಹೆಚ್ಚಿನ ಆದ್ಯತೆ ಕೊಡುವಂತೆ ಹೇಳಿದ್ದ ಆರ್ಥಿಕ ಸಮೀಕ್ಷೆಯ ಸೂಚನೆಯನ್ನು ಬಜೆಟ್ ಪುರಸ್ಕರಿಸಿಲ್ಲ.

ಅಂಕಿ ಅಂಶಗಳ ಮ್ಯಾಜಿಕ್

ಹಣ ಕಾಸು ಮಂತ್ರಿ ಅರುಣ್ ಜೇಟ್ಲಿಯವರು ಆಡುವ ಮಾತುಗಳಲ್ಲಿ ತೋರಿಸುವ ಚಮತ್ಕಾರಿಕೆಯನ್ನು ಬಜೆಟ್‌ನ ಅಂಕಿ ಅಂಶಗಳಲ್ಲೂ ತೋರಿಸಿದ್ದಾರೆ. ಅವರ ಮಾತಿನ ಜಾದೂಗಾರಿಕೆಗೆ ಅಮೃತಸರದ ಮತದಾರರು ಮರುಳಾಗಲಿಲ್ಲ, ಜೇಟ್ಲಿ ಚುನಾವಣೆಯಲ್ಲಿ ಸೋತರು ಎಂಬುದು ಬೇರೆ ಮಾತು.

ರೈತರ ಆದಾಯ ದುಪ್ಪಟ್ಟು ಮಾಡುವ ನಿಟ್ಟಿನಲ್ಲಿ ಕೃಷಿ, ಸಹಕಾರ ಮತ್ತು ರೈತ ಕಲ್ಯಾಣ ಇಲಾಖೆಗೆ 35,984 ಕೋಟಿ ರೂಗಳ ದೊಡ್ಡ ಮೊತ್ತ ಕೊಡುವುದಾಗಿ ಜೇಟ್ಲಿ ಹೇಳಿದ್ದಾರೆ. ಇದು ವ್ಯಾಪಕ ಪ್ರಚಾರ ಪಡೆದಿದೆ. ಆದರೆ, ಈ ಮೊತ್ತದಲ್ಲಿ, ರೈತರ ಅಲ್ಪಾವಧಿ ಸಾಲಗಳ ಮೇಲಿನ ಬಡ್ಡಿ ಹಣದ ಬಾಬ್ತು ಹಣ ಕಾಸು ಇಲಾಖೆ ಒದಗಿಸುವ 15,000ಕೋಟಿ ರೂಗಳ ಬಡ್ಡಿಯ ಸಬ್ಸಿಡಿಯನ್ನು ಸೇರಿಸಲಾಗಿದೆ. ಅಂದರೆ, ಖಾತೆಗಳ ವರ್ಗಾವಣೆಯ ಹಣವನ್ನೂ ಸೇರಿಸಲಾಗಿದೆ. ಇದು ರೈತರ ಉದ್ಧಾರದ ವೈಖರಿ!

ಉದ್ಯೋಗ ಖಾತ್ರಿ ಯೋಜನೆ

ಎಡ ಪಕ್ಷಗಳ ಮತ್ತು ಹಲವು ಸಾಮಾಜಿಕ ಕ್ರಿಯಾಶೀಲ ವ್ಯಕ್ತಿಗಳ/ಸಂಘಟನೆಗಳ ಒತ್ತಡದ ಫಲವಾಗಿ ಉದ್ಯೋಗ ಖಾತ್ರಿ ಯೋಜನೆಯನ್ನು 2005ರಲ್ಲಿ ಯುಪಿಎ ಸರ್ಕಾರ ಜಾರಿಗೆ ತಂದಿತ್ತು. ಯುಪಿಎ–2 ಅಧಿಕಾರಗಳಿಸುವಲ್ಲಿ ಈ ಯೋಜನೆ ಪ್ರಮುಖ ಕಾರಣ ಎಂದು ಹೇಳುವುದುಂಟು. ಹತ್ತು ವರ್ಷಗಳನ್ನು ಪೂರೈಸಿದ ಯೋಜನೆಯು ಎನ್‌ಡಿಎ ಸರ್ಕಾರವೂ ಸೇರಿದಂತೆ ಹಲವು ಪಟ್ಟಭದ್ರ ಹಿತಾಶಕ್ತಿಗಳ ಕೆಂಗಣ್ಣಿಗೆ ಗುರಿಯಾಗಿದೆ. "ಇದು ಕಾಂಗ್ರೆಸ್ಸಿನ ಅರುವತ್ತು ವರ್ಷಗಳ ಆಡಳಿತ ವೈಫಲ್ಯದ ಸ್ಮಾರಕ" ಎಂದು ಮೋದಿ ಹೇಳಿದ್ದರು. ಈ ಕಾಯ್ದೆಯ ಬಗ್ಗೆ ಅಷ್ಟು ತಿರಸ್ಕಾರವಿದೆ ಅವರಿಗೆ. ಈ ಯೋಜನೆಯನ್ನು ವಿಕೃತಗೊಳಿಸಲು ಎನ್‌ಡಿಎ ಸರ್ಕಾರ ಹಲವು ಬಾರಿ ಪ್ರಯತ್ನಿಸಿದೆ.

ಸರ್ಕಾರದ ಸಾಮಾಜಿಕ ಕಳಕಳಿಯನ್ನು ಒರೆಗೆ ಹಚ್ಚುವ ಮಾಪಕದಂತಿದೆ ಈ ಯೋಜನೆ. 2011–12ರಲ್ಲಿ ಈ ಯೋಜನೆಗೆ ಯುಪಿಎ–2 ಸರ್ಕಾರ 39,337 ಕೋಟಿ ರೂಗಳನ್ನು ನಿಗದಿಪಡಿಸಿತ್ತು. ನಂತರದ ಅವಧಿಯಲ್ಲಿ ಯುಪಿಎ–2 ಸರ್ಕಾರ ಪ್ರತಿ ವರ್ಷವೂ ಯೋಜನೆಗೆ ನಿಗದಿಪಡಿಸುವ ಹಣವನ್ನು ಕಡಿಮೆ ಮಾಡುತ್ತಾ ಬಂದಿದೆ ಮತ್ತು ಎನ್‌ಡಿಎ ಸರ್ಕಾರವೂ ಕಡಿತದ ಪ್ರಮಾಣವನ್ನು ಹೆಚ್ಚಿಸಿದೆ. ಆದರೆ, ಈ ವರ್ಷ 38,552 ಕೋಟಿ ರೂಗಳನ್ನು ನಿಗದಿಪಡಿಸಲಾಗಿದೆ. ಇದು ಅತ್ಯಂತ ಹೆಚ್ಚಿನ ಮೊತ್ತ ಎಂದು ಜೇಟ್ಲಿ ಹೇಳಿದ್ದಾರೆ. ಇದು ಸುಳ್ಳು ಮತ್ತು ಅರ್ಥಹೀನ ಹೇಳಿಕೆ ಎಂದು ಸುಮಾರಾಗಿ ಎಲ್ಲ ಆರ್ಥಿಕತಜ್ಞರೂ ಹೇಳುತ್ತಿದ್ದಾರೆ. ಕೊನೆಯ ಪಕ್ಷ, 2011–12ರ ಮಟ್ಟದ ಉದ್ಯೋಗ ಒದಗಿಸಲು ಈಗ ಸುಮಾರು 65,000 ಕೋಟಿ ರೂ ಗಳು ಬೇಕಾಗುತ್ತದೆ. ಯೋಜನೆಯ ಆರಂಭದಲ್ಲಿ, ಅದನ್ನು 100 ದಿನಗಳಿಂದ 200 ದಿನಗಳಿಗೆ ವಿಸ್ತರಿಸುವ ಭರವಸೆ ಕೊಡಲಾಗಿತ್ತು, ಕಳೆದ ವರ್ಷ, ಸರಾಸರಿ, 38 ದಿನಗಳ ಉದ್ಯೋಗ ಒದಗಿಸಲಾಗಿದೆ. ಇದು, ಬಡತನ ನಿವಾರಿಸುವ ಬದ್ಧತೆ!

ಸಮಗ್ರ ಶಿಶು ಅಭಿವೃದ್ಧಿ ಯೋಜನೆ

ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಭಾರತ ಅನೇಕ ಸಣ್ಣ ಪುಟ್ಟ ದೇಶಗಳಿಗಿಂತಲೂ ಕೆಳಗಿದೆ. 0–5 ವರ್ಷದ ಮಕ್ಕಳ ಮರಣದ ಪ್ರಮಾಣ ಭಾರತದಲ್ಲಿ ಹೆಚ್ಚಿದೆ ಮತ್ತು ಭಾರತದ ಮಕ್ಕಳ ಒಟ್ಟು ಸಂಖ್ಯೆಯಲ್ಲಿ ಶೇ.45 ರಷ್ಟು ಮಕ್ಕಳು ಅಪೌಷ್ಠಿಕತೆಯಿಂದ ನರಳುತ್ತಿವೆ. ಇಂತಹ ಪರಿಸ್ಥಿತಿಯಲ್ಲೂ ಸರ್ಕಾರ ಈ ಇಲಾಖೆಗೆ ನಿಗದಿಪಡಿಸಿರುವ 15,873 ಕೋಟಿ ರೂಗಳು ಏನೇನೂ ಸಾಲದು.

ಆರೋಗ್ಯ ಮತ್ತು ಶಿಕ್ಷಣ

ಆರೋಗ್ಯ ಸೇವೆಗಳು ಮತ್ತು ಶಿಕ್ಷಣದ ಸಲುವಾಗಿ ಸರ್ಕಾರ ಮಾಡುತ್ತಿರುವ ಖರ್ಚು, ಬೇರೆ ದೇಶಗಳಿಗೆ ಹೋಲಿಸಿದರೆ, ತೀರಾ ಕೆಳ ಮಟ್ಟದಲ್ಲಿದೆ. ಈಗ ಪ್ರಸ್ತಾಪಿಸಿರುವ ಡಯಾಲಿಸಿಸ್ ಸೇವೆಗಳ ಹೆಚ್ಚಿನ ಪ್ರಯೋಜನ ದೊರಕುವುದು ಖಾಸಗಿ ಕಂಪೆನಿಗಳಿಗೆ. ಆರೋಗ್ಯ ವಿಮೆಯ ಲಾಭ ದೊರೆಯುವುದೂ ಖಾಸಗಿ ವಿಮಾ ಸಂಸ್ಥೆಗಳಿಗೆ. 2015–16ರಲ್ಲಿ ಜಿಡಿಪಿಯ ಶೇ.0.5ರಷ್ಟನ್ನು ಶಿಕ್ಷಣಕ್ಕೆ ನಿಗದಿಪಡಿಸಲಾಗಿತ್ತು ಈ ವರ್ಷ ಅದು ಜಿಡಿಪಿಯ ಶೇ.0.48ರಷ್ಟಕ್ಕೆ ಇಳಿದಿದೆ. ಬಿಜೆಪಿ, ಎಲ್ಲರಿಗೂ ಆರೋಗ್ಯದ ಭರವಸೆ ಕೊಟ್ಟಿತ್ತು. ಜಿಡಿಪಿಯ ಶೇ.0.24 ರಷ್ಟನ್ನು ಆರೋಗ್ಯಕ್ಕೆ ನಿಗದಿಪಡಿಸಿದೆ. ಇದು ಯಾವ ಮೂಲೆಗೂ ಸಾಲದು.

ತೆರಿಗೆಗಳ ಬದಲಿಗೆ ಸೆಸ್ ಏಕೆ?

ಗ್ರಾಮೀಣ ಜನತೆಗೆ ಕೆಲವು ಸೇವೆಗಳನ್ನು ವಿಸ್ತರಿಸುವ ಹೆಸರಿನಲ್ಲಿ ವಿವಿಧ ವಸ್ತುಗಳ ಮೇಲೆ 0.5%ನಿಂದ 2.5% ವರೆಗೆ ಸೆಸ್ ವಿಧಿಸಲಾಗಿದೆ. ಈ ಸೆಸ್ ಸಂಗ್ರಹವನ್ನು ರಾಜ್ಯಗಳ ಜೊತೆ ಹಂಚಿಕೊಳ್ಳುವುದಿಲ್ಲ. ತೆರಿಗೆಗಳನ್ನು ರಾಜ್ಯಗಳ ಜೊತೆ ಹಂಚಿಕೊಳ್ಳಬೇಕಾಗುತ್ತದೆ.



ಬಡವರ–ಪರ, ರೈತರ ಪರ ಎಂಬ ಆಡಂಬರದ ಮಾತುಗಳೇನೋ ಇವೆ, ಆದರೆ ಅಸಮರ್ಪಕ ಸಂಪನ್ಮೂಲ ನೀಡಿಕೆ ಮತ್ತು ಹಣಕಾಸು (ಕೊರತೆಯನ್ನು ಸೀಮಿತಗೊಳಿಸುವ) ಗುರಿಯಿಂದಾಗಿ ಸರಕಾರ ತನ್ನ ಬೆಳವಣಿಗೆ ಕಾರ್ಯತಂತ್ರಕ್ಕೆ ಈಗ ಬಹಳಷ್ಟು ಅಗತ್ಯವಿರುವ 'ಮಾನವೀಯ ಮುಖ'ವನ್ನು ಕೊಡಲಾರದಾಗಿದೆ.

–ಡಾ.ಸಿ.ಪಿ. ಚಂದ್ರಶೇಖರ್



ಹಣಕಾಸು ಮಂತ್ರಿಗಳ ಭಾಷಣದ ಒತ್ತು.....ಆಕರ್ಷಕ ಹೆಸರುಗಳನ್ನು ಹೊತ್ತ ಸಾಲು ಸಾಲು ಸ್ಕೀಮುಗಳನ್ನು ನೋಡಿ ಬಲಪಂಥೀಯ ಎನ್‌ಡಿಎ ಸರಕಾರ ಇದ್ದಕ್ಕಿದ್ದಂತೆ ಒಂದು 'ಸಮಾಜವಾದಿ' ತಿರುವು ತಗೊಂಡಂತೆ ಭಾಸವಾಗಬಹುದು. ಆದರೆ ವಾಸ್ತವತೆ ಬೇರೆಯೇ ಆಗಿದೆ......ಸಾಮಾಜಿಕವಾಗಿ ಶೋಚನೀಯ ಪರಿಸ್ಥಿತಿಯಲ್ಲಿರುವವರಿಗೆ ಶಿಕ್ಷಣವಾಗಲಿ, ಆರೋಗ್ಯ ವಾಗಲಿ, ಪಿಂಚಣಿಯಾಗಲಿ, ಹತಾಶ ರೈತರಿಗಾಗಲೀ ಅಥವ ಮನರೇಗಾಕ್ಕಾಗಲೀ, 2016ರ ಬಜೆಟಿನಲ್ಲಿ ತೀವ್ರಗಾಮಿಯಾದದ್ದು ಏನೂ ಇಲ್ಲ.

–ಜಿ.ಸಂಪತ್



ಒಳ್ಳೆಯ ಸುದ್ದಿ ಎಂದರೆ, ಎನ್‌ಡಿಎ ಸರಕಾರ– ಎರಡು ವರ್ಷಗಳಿಗೂ ಹೆಚ್ಚು ಕಾಲದ ನಿರಾಕರಣೆಯ ನಂತರ– ಕೊನೆಗೂ ಕೃಷಿ ಬಿಕ್ಕಟ್ಟಿನ ಬಗ್ಗೆ ಬೇಸಾಯಗಾರರ ಹಣಕಾಸು ಪರಿಸ್ಥಿತಿ ಹದಗೆಡುತ್ತಿರುವ ಬಗ್ಗೆ ಎಚ್ಚೆತ್ತುಕೊಂಡಿದೆ. ಆದರೆ ಖರ್ಚು ಮಾಡುವ ಪ್ರಶ್ನೆ ಬಂದಾಗ, ಹಣ ನೀಡಿಕೆಗಳನ್ನು ನಿಜವಾಗಿಯೂ ಹೆಚ್ಚಿಸುವ ಬದಲು ಕೈಚಳಕಕ್ಕೆ ಮೊರೆ ಹೋಗಿದ್ದಾರೆ. ಕೃಷಿ, ಸಾಮಾಜಿಕ ವಲಯಗಳು ಮತ್ತು ಉದ್ಯೋಗ ನಿರ್ಮಾಣ ಯೋಜನೆಗಳಿಗೆ ಹೆಚ್ಚಿನ ಹಣ ಕೊಟ್ಟು ಇದನ್ನು ನೇರವಾಗಿಯೂ ಮತ್ತು ಪರೋಕ್ಷವಾಗಿಯೂ ಮಾಡಬಹುದು. ರಸ್ತೆಗಳು, ರೈಲುಗಳ ಮೇಲೆ(ಹೈಸ್ಪೀಡ್ ರೈಲು ಸಂಪರ್ಕ ಇತ್ಯಾದಿಗಳ ಮೇಲೆ) ಹೆಚ್ಚು ಹಣ ಹಾಕುವುದು ಒಂದು ಪರಿಣಾಮಕಾರಿ ಬದಲಿ ಅಲ್ಲ. ಬೇಸರದ ಸಂಗತಿಯೆಂದರೆ ಇದನ್ನು ಸರಕಾರ ಇನ್ನೂ ಕಲಿತಿಲ್ಲ

–ಪ್ರೊ. ಜಯತಿ ಘೋಷ್



ಕೃಷಿ ವಲಯಕ್ಕೆ ಸಂಬಂಧಪಟ್ಟಂತೆ ಜೇಟ್ಲಿ ಎರಡು ಮಹತ್ವದ ಪ್ರಕಟಣೆ ಮಾಡಿದ್ದಾರೆ. ಒಂದು, ಧಾನ್ಯಖರೀದಿಯ 'ವಿಕೇಂದ್ರೀಕರಣ' ಅಂದರೆ ದೇಶದ ಬಹುಭಾಗಗಳಲ್ಲಿ ಎಫ್‌ಸಿಐ(ಭಾರತ ಅಹಾರ ನಿಗಮ) ಧಾನ್ಯ ಖರೀದಿ ಮಾಡುವುದಿಲ್ಲ, ಇದನ್ನು ರಾಜ್ಯ ಸರಕಾರಗಳು ಅಥವ ಅವರು ಅಧಿಕಾರ ನೀಡುವ ಖಾಸಗಿಯವರು ವಹಿಸಿ ಕೊಳ್ಳುತ್ತಾರೆ.... ಎರಡನೆಯ ಪ್ರಕಟಣೆ, ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡಲು 100ಶೇ. ವಿದೇಶಿ ಒಡೆತನದ ಕಂಪನಿಗಳಿಗೆ ಅವಕಾಶ. ಅಂದರೆ ರೈತಾಪಿ ಜನ ಮಾರಾಟದ ವಲಯದಲ್ಲೂ ಬಹುರಾಷ್ಟ್ರೀಯ ಕಂಪನಿಗಳ ಮರ್ಜಿಗೆ ಎಸೆಯಲ್ಪಡುತ್ತಾರೆ......ಇವೆರಡೂ ಪರಸ್ಪರ ಸಂಬಂಧಪಟ್ಟ ಪ್ರಕಟಣೆಗಳು. ಎಫ್‌ಸಿಐ ಇರುವ ವರೆಗೆ ಭಾರತೀಯ ಮಾರುಕಟ್ಟೆಯಿಂದ ತಾವು ದೂರ ಉಳಿಯುತ್ತೇವೆ ಎಂಬುದನ್ನು ಬಹುರಾಷ್ಟ್ರೀಯ ಕಂಪನಿಗಳು ಎಂದೂ ಗುಟ್ಟಾಗಿ ಇಟ್ಟಿಲ್ಲ. ಜೇಟ್ಲಿ ಮತ್ತು ಎನ್‌ಡಿಎ ಇದರಿಂದ ರೈತರ ಆದಾಯಗಳು ಹೆಚ್ಚುತ್ತವೆ ಎಂದು ಭಾವಿಸಿದ್ದರೆ ಅವರಿಗೆ ಜಗತ್ತಿನ ಬಗ್ಗೆ, ಅಥವ ವಸಾಹತುಶಾಹೀ ಆಳ್ವಿಕೆಯಲ್ಲಿ ಭಾರತೀಯ ಆರ್ಥಿಕದ ಬಗ್ಗೆ ಏನೂ ತಿಳಿದಿಲ್ಲ. –ಪ್ರೊ. ಪ್ರಭಾತ್ ಪಟ್ನಾಯಕ್



ಸಾಮಾಜಿಕ ಸ್ವಾಸ್ಥ್ಯ ಕೆಡಿಸಿದ ಜಾಟ್ ಮೀಸಲಾತಿ ಚಳವಳಿ

ತಮಗೂ ಮೀಸಲಾತಿ ಸೌಲಭ್ಯ ನೀಡಬೇಕೆಂದು ಹರ್ಯಾಣದಲ್ಲಿ ಮೇಲ್ಜಾತಿಯ ಜಾಟ್ ಸಮುದಾಯದವರು ನಡೆಸಿದ ಚಳವಳಿ ಹತ್ತಾರು ಜನರ ಬಲಿತೆಗೆದುಕೊಂಡಿದೆ, ಸಾವಿರಾರು ಕೋಟಿ ರೂಪಾಯಿ ಮೌಲ್ಯದ ಆಸ್ತಿಪಾಸ್ತಿಗೆ ನಷ್ಟ ಉಂಟುಮಾಡಿದೆ. ಸತತ ನಾಲ್ಕು ದಿನಗಳ ಕಾಲ ರಾಜ್ಯದಲ್ಲಿ ಒಂದು ಸರಕಾರವೇ ಇಲ್ಲವೇನೋ ಎನ್ನುವ ರೀತಿಯಲ್ಲಿ ಚಳವಳಿಕಾರರು ದರ್ಬಾರು ನಡೆಸಿದರು. 20 ಜನರು ಮೃತಪಟ್ಟಿದ್ದಾರೆಂದು ಸರಕಾರ ಅಧಿಕೃತ ವರದಿಗಳು ಹೇಳಿವೆ. ಆದರೆ ಈ ಸಂಖ್ಯೆ ಇನ್ನೂ ಜಾಸ್ತಿಯಿರಬಹುದು ಎಂದು ಅಂ-ದಾಜು ಮಾಡಲಾಗಿದೆ. ಸರಕಾರಿ ಮತ್ತು ಖಾಸಗಿ ಆಸ್ತಿಪಾಸ್ತಿಗೆ ಮಾರು 20,000 ಕೋಟಿ ರೂಪಾಯಿ ನಷ್ಟ ಆಗಿರಬಹುದೆಂದು ಅಸೋಚಮ್ (ಕೈಗಾರಿಕಾ ಸಂಘಗಳ ಮಹಾಸಂಸ್ಥೆ) ಹೇಳಿದೆ. ಇದು 24 ಸಾವಿರ ಕೋಟಿಗೂ ಮೀರಬಹುದು ಎಂದು ಕೆಲವು ಮಾಧ್ಯಮ ವರದಿಗಳು ಹೇಳಿವೆ. ಈ ಎಲ್ಲಕ್ಕಿಂತ ಹೆಚ್ಚಾಗಿ ಜಾತಿ ಆಧಾರದ ಮೇಲೆ ನಡೆದ ಈ ಚಳವಳಿ ಸಾಮಾಜಿಕ ಸೌಹಾರ್ದ ಮತ್ತು ಪರಸ್ಪರ ವಿಶ್ವಾಸಕ್ಕೆ ಉಂಟುಮಾಡಿದ ಧಕ್ಕೆ ಊಹೆಗೂ ನಿಲುಕದಂಥದ್ದು. ಸಾಮಾನ್ಯ ಜನರು ಅದರಲ್ಲೂ ಜೀವನಾಧಾರಕ್ಕೆ ಚಿಕ್ಕಪುಟ್ಟ ಮೂಲಗಳನ್ನು ನಂಬಿದ್ದ ಜನರು ಹೇಗೆ ಈ ಅವಧಿಯಲ್ಲಿ ಕಾಲನೂಕಿದರು ಎಂಬುದನ್ನು ಕಲ್ಪಿಸಿಕೊಳ್ಳುವುದೇ ಕಷ್ಟ. ಅರ್ಧಕ್ಕಿಂತ ಹೆಚ್ಚು ಜನರು ಜಾತಿ ಆಧರಿತ ದಾಳಿಗಳಲ್ಲಿ ಮೃತಪಟ್ಟಿದ್ದಾರೆ.

ರೋಹ್ಟಕ್, ಮೇಹಮ್, ಜಜ್ಜರ್, ಸೋನೆಪತ್, ಗೊಹನಾ, ಹನ್ಸಿ ಮತ್ತು ಹಿಸ್ಸಾರ್ ಮೊದಲಾದ ಪ್ರದೇಶಗಳು ಹೆಚ್ಚು ಹಿಂಸಾಚಾರಕ್ಕೆ ಸಾಕ್ಷಿಯಾದವು. ದೊಂಬಿಯ ವೇಳೆ ಕೆಲವು ಗೂಂಡಾ ಗುಂಪುಗಳು ರಾಷ್ಟ್ರೀಯ ಹೆದ್ದಾರಿ 1ರಲ್ಲಿ ಮುಥ್ಥೈ ಮತ್ತು ಸೋನೆಪತ್ ಸಮೀಪ ಮಹಿಳೆಯರ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿದರು ಎಂಬ ಕಳವಳಕಾರಿ ಅಂಶವೂ ವರದಿಯಾಗಿದೆ.

ರಾಜ್ಯ ಸರಕಾರದ ವೈಫಲ್ಯ ಮತ್ತು ಆಡಳಿತಾರೂಢ ಪಕ್ಷದ ತತ್ವರಹಿತ ನೀತಿಗಳು ಈ ದುರಂತಮಯ ಘಟನೆಗಳಿಗೆ ಹೊಣೆಯಾಗಿವೆ.

ಜಾಟ್ ಸಮುದಾಯಕ್ಕೆ ಇತರ ಹಿಂದುಳಿದ ವರ್ಗಗಳ (ಓಬಿಸಿ) ಮೀಸಲಾತಿ ಕಲ್ಪಿಸುವುದಾಗಿ ಕಳೆದ ಲೋಕಸಭೆ ಚುನಾವಣೆಗಳಿಗೆ ಸ್ವಲ್ಪವೇ ಮುಂಚೆಯಷ್ಟೆ ಅಂದಿನ ಯುಪಿಎ ಸರಕಾರ ಘೋಷಿಸಿತ್ತು. ಸುಪ್ರೀಕೋರ್ಟ್ ಈ ನಿರ್ಧಾರವನ್ನು ರದ್ದುಗೊಳಿಸಿತ್ತು. ಅಂದಿನಿಂದಲೂ ಕೇಂದ್ರ ಸರಕಾರ ಮತ್ತು ಹರ್ಯಾಣದ ಬಿಜೆಪಿ ರಾಜ್ಯ ಸರಕಾರ ಜಾಟ್‌ರಿಗೆ ಮೀಸಲಾತಿ ಕಲ್ಪಿಸುವುದಾಗಿ ಭರವಸೆ ನೀಡುತ್ತಲೇ ಬಂದಿದ್ದವು, ಬಿಜೆಪಿಯ ಒಂದು ವಿಭಾಗ ಅದನ್ನು ವಿರೋಧಿಸುತ್ತಿತ್ತು. ಒಂದೆಡೆ ಒಬ್ಬ ಬಿಜೆಪಿ ಸಂಸತ್ ಸದಸ್ಯ ಜಾಟ್ ಮೀಸಲಾತಿ ವಿರುದ್ಧ ಪ್ರಚೋದನಕಾರಿ ಭಾಷಣಗಳನ್ನೂ ಮಾಡತೊಡಗಿದ. ಕೆಲವು ಜಾಟ್ ಮೀಸಲಾತಿ ಪರ ನಾಯಕರು ಯುವಸೇನೆ ಕಟ್ಟಲು ಕರೆ ಕೊಟ್ಟರೆ ಅದಕ್ಕೆ ವಿರುದ್ಧವಾಗಿ ಓಬಿಸಿ ಬ್ರಿಗೇಡ್ ಕಟ್ಟಲು ಆ ಸಂಸದ ಕರೆ ಕೊಟ್ಟ. ಈ ರೀತಿಯಾಗಿ ಇದು ಜಾತಿಕಲಹಕ್ಕೆ ದಾರಿ ಮಾಡಿಕೊಟ್ಟಿತ್ತು. ಜಾತಿ ಧ್ರುವೀಕರಣದ ಈ ಕೀಳು ರಾಜಕೀಯ ಆಟ ಅನೇಕ ತಿಂಗಳ ಕಾಲ ಮುಂದುವರಿಯಿತು.



ಪಂಚಾಯತ್ ಚುನಾವಣೆಗಳ ಹಿನ್ನೆಲೆಯಲ್ಲಿ ಮುಂದಕ್ಕೆ ಹೋದ ಮೀಸಲಾತಿ ಚಳವಳಿ ಕೊನೆಗೂ ಆರಂಭವಾದಾಗ ಚಳವಳಿಯ ಕಾವನ್ನು ಅರ್ಥೈಸಿಕೊಳ್ಳಲು ಮತ್ತು ಅದನ್ನು ಎದುರಿಸಲು ಬೇಕಾದ ಮುಂಜಾಗ್ರತೆ ಕ್ರಮಗಳನ್ನು ಕೈಗೊಳ್ಳಲು ರಾಜ್ಯ ಸರಕಾರ ವಿಫಲವಾಯಿತು. ದೊಂಬಿಕೋರರ ಕೈಮೇಲಾಗಿ ರಸ್ತೆಗಳನ್ನು ಪೂರ್ಣವಾಗಿ ಬಂದ್ ಮಾಡಿ ಪರಿಸ್ಥಿತಿ ಕೈಮೀರಿದಾಗ ಸರಕಾರ ಸೇನೆಯ ನೆರವನ್ನು ಕೋರಿತು.

ತೊಂದರೆ ಪೀಡಿತ ಪ್ರದೇಶಗಳಲ್ಲಿ ಶಾಂತಿ ಸ್ಥಾಪಿಸು ಕಾರ್ಯದಲ್ಲಿ ಸಿಪಿಐ (ಎಂ) ಸಕ್ರಿಯವಾಗಿ ತೊಡಗಿಸಿಕೊಂಡಿತು. ಅನೇಕ ಸ್ಥಳಗಳಲ್ಲಿ ಶಾಂತಿ ಮೆರವಣಿಗೆಗಳನ್ನು ನಡೆಸಲಾಯಿತು.

ಕೃಷಿಯಲ್ಲಿ ಆಸಕ್ತಿಯಿಲ್ಲ, ಉದ್ಯೋಗ ಸಿಗುತ್ತಿಲ್ಲ...

ಮಧ್ಯಮ ಜಾತಿಗಳು ಯಾಕೆ ಮೀಸಲಾತಿಯ ಮೊರೆಹೊಕ್ಕಿವೆ ಎಂಬುದರ ಜಾಡನ್ನು ಹಿಡಿದುಹೊರಟರೆ ಸಿಗುವ ಉತ್ತರವೇ ಇದು: ಅವರಿಗೆ ಕೃಷಿಯಲ್ಲಿ ಆಸಕ್ತಿಯಿಲ್ಲ, ನಗರಗಳಲ್ಲಿ ಕೆಲಸವೂ ಸಿಗುವುದಿಲ್ಲ.

ಗ್ರಾಮೀಣ ಪ್ರದೇಶಗಳಲ್ಲಿ ಬೆಳವಣಿಗೆ ಕುಂಠಿತವಾಗಿರುವುದು ಮತ್ತು ಖಾಸಗಿ ಕ್ಷೇತ್ರದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಉದ್ಯೋಗ ಸಿಗದಿರುವುದರಿಂದ ಮಹಾರಾಷ್ಟ್ರದ ಮರಾಠಾರಿಂದ ಹಿಡಿದು ಆಂಧ್ರಪ್ರದೇಶದ ಕಾಪುಸ್, ಗುಜರಾತ್‌ನ ಪಟೇಲ್‌ರಿಂದ ಹಿಡಿದು ಹರ್ಯಾಣದ ಜಾಟ್‌ನಂಥ ಮಧ್ಯಮ ಹಂತದ ಜಾತಿಗಳು ತಮ್ಮನ್ನು ಓಬಿಸಿ ಪಟ್ಟಿಗೆ ಸೇರಿಸುವಂತೆ ಒತ್ತಾಯಿಸಲು ಆರಂಭಿಸಿವೆ. ಸರಕಾರಿ ಕ್ಷೇತ್ರದಲ್ಲಿ ಕೂಡ ಉದ್ಯೋಗಾವಕಾಶಗಳು ಹೆಚ್ಚುತ್ತಿಲ್ಲ. ಕೃಷಿ ಬಿಕ್ಕಟ್ಟು, ಹಿಡುವಳಿ ಪ್ರಮಾಣದಲ್ಲಿ ಕುಸಿತ ಮತ್ತು ತಮಗಿಂತ ಕೆಳಗಿನ ಜಾತಿಯವರೆಂದು ಪರಿಗಣಿಸುವ ಜಾತಿಯವರು ಆರ್ಥಿಕವಾಗಿ ಸಬಲರಾಗುತ್ತಿರುವುದನ್ನು ಕಂಡು ಕೂಡ ಈ ಮೇಲ್‌ಜಾತಿಯ ಜನರು ಹತಾಶರಾಗುತ್ತಿದ್ದಾರೆ. ಹೀಗಾಗಿ, ಪರಿಸ್ಥಿತಿ ಎಷ್ಟು ಹತಾಶಾದಾಯಕವಾಗಿದೆಯೆಂದರೆ ಸಾಂಪ್ರದಾಯಿಕವಾಗಿ ಆರ್ಥಿಕವಾಗಿ ಪ್ರಬಲವೆಂದು ಗುರುತಿಸಲಾಗುತ್ತಿದ್ದ ಜಾತಿಗಳು ಕೂಡ ಈಗ ಮೀಸಲಾತಿಗಾಗಿ ಹಿಂಸಾತ್ಮಕ ದಾರಿ ಹಿಡಿಯಲು ಹೊರಟಿವೆ.

ಈಗ ಹರ್ಯಾಣದಲ್ಲಿ ಹುಟ್ಟಿದ ಇಂಥ ಮೀಸಲಾತಿ ಚಳವಳಿ ನಾಳೆ ಆಂಧ್ರಪ್ರದೇಶಕ್ಕೂ ಕಾಲಿಡುವ ಲಕ್ಷಣವಿದೆ. ಗುಜರಾತ್‌ನಲ್ಲಿ ಈಗಾಗಲೇ ಅದು ಹೊಗೆಯಾಡುತ್ತಿದೆ. ಮೀಸಲಾತಿಗಾಗಿನ ಜಾಟ್ ಸಮುದಾಯದ ಬೇಡಿಕೆಯನ್ನು ರಾಷ್ಟ್ರೀಯ ಹಿಂದುಳಿದ ವರ್ಗಗಳ ಆಯೋಗ 1999 ಮತ್ತು 2011ರಲ್ಲಿ ಪರಿಶೀಲಿಸಿತ್ತು. ಆದರೆ ಈ ಬೇಡಿಕೆಯನ್ನು ಅದು ಎರಡೂ ಬಾರಿ ತಿರಸ್ಕರಿಸಿತ್ತು.

ಸಿಪಿಐ (ಎಂ) ತುರ್ತುಸಭೆ

ರಾಜ್ಯದಲ್ಲಿ ಉದ್ಭವಿಸಿರುವ ಅಸಾಮಾನ್ಯ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಸಿಪಿಐ (ಎಂ) ರಾಜ್ಯ ಸಮಿತಿ ಮಾರ್ಚ್ ಒಂದರಂದು ತುರ್ತುಸಭೆಯನ್ನು ನಡೆಸಿತು. ಕಾ. ಇಂದ್ರಜಿತ್ ಸಿಂಗ್ ಅಧ್ಯಕ್ಷತೆ ವಹಿಸಿದ್ದರು. ಕೇಂದ್ರ ಕಾರ್ಯದರ್ಶಿ ಮಂಡಳಿ ಸದಸ್ಯ ಕಾ. ನೀಲೋತ್ಪಲ್ ಬಸು ಕೂಡ ಸಭೆಯಲ್ಲಿ ಭಾಗವಹಿಸಿ ಮಾರ್ಗದರ್ಶನ ನೀಡಿದರು.

ರಾಜ್ಯದಲ್ಲಿನ ಪರಿಸ್ಥಿತಿಗೆ ರಾಜ್ಯ ಸರಕಾರ ತನ್ನ ಹೊಣೆಗಾರಿಕೆಯಿಂದ ನುಣುಚಿಕೊಳ್ಳಲಾಗದು ಎಂದು ರಾಜ್ಯ ಸಮಿತಿ ಅಭಿಪ್ರಾಯಪಟ್ಟಿತು. ಪರಸ್ಪರ ಅನುಮಾನ, ಭಯ ಮತ್ತು ಅಸ್ಥಿರತೆಯ ಸನ್ನಿವೇಶ ಇನ್ನೂ ಮುಂದುವರಿದಿರುವುದು ಕಳವಳದ ಸಂಗತಿಯಾಗಿದೆ ಎಂದು ರಾಜ್ಯ ಕಾರ್ಯದರ್ಶಿ ಕಾ, ಸುರೇಂದ್ರ ಸಿಂಗ್ ಸಭೆಯ ನಂತರ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದರು. ತಮ್ಮ ಸಂಕುಚಿತ ರಾಜಕೀಯ ಲಾಭಕ್ಕಾಗಿ ಕೆಲವು ದುಷ್ಟ ಶಕ್ತಿಗಳು ಇನ್ನೂ ರಾಜಕೀಯ ಧ್ರುವೀಕರಣದಲ್ಲಿ ತೊಡಗಿವೆ ಎನ್ನುವುದು ಕಳವಳಕಾರಿ ಎಂದು ಅವರು ಹೇಳಿದರು. ಇಂಥ ಜಾತಿ ಮತ್ತು ಕೋಮು ಧ್ರುವೀಕರಣದ ಅಪಾಯದ ಬಗ್ಗೆ ಜನರು ಜಾಗೃತರಾಗಿರಬೇಕು ಎಂದು ಸಿಪಿಐ (ಎಂ) ಮತ್ತು ಇತರ ಎಡಪಕ್ಷಗಳು ವಿಧಾನಸಭೆ ಚುನಾವಣೆ ವೇಳೆ ಎಚ್ಚರಿಸಿದ್ದನ್ನು ಪಕ್ಷ ನೆನಪಿಸಿದೆ.

ಬಿಜೆಪಿ ಮತ್ತು ಆರ್‌ಎಸ್‌ಎಸ್ ಧ್ರುವೀಕರಣಕ್ಕೆ ದೇಶದಾದ್ಯಂತ ಜಾತಿ ಮತ್ತು ಧರ್ಮಗಳನ್ನು ಬಳಸಿಕೊಳ್ಳುತ್ತಿವೆ. ಹರ್ಯಾಣದಲ್ಲಿನ ವಿದ್ಯಮಾನಗಳು ಅದರ ಭಾಗವೇ ಆಗಿದೆ ಎನ್ನುವುದನ್ನು ಅರಿಯಬೇಕಾಗಿದೆ ಎಂದು ಪಕ್ಷ ಹೇಳಿದೆ. ತಾವು ಹಿಂದೂತ್ವದ ಪ್ರತಿಪಾದಕರು ಎಂದು ಹೇಳುವವರು ಹಿಂದುಗಳಲ್ಲಿಯೇ ಜಾತಿ ಒಡಕನ್ನು ತರುತ್ತಿದ್ದಾರೆ ಎನ್ನುವುದನ್ನು ಗಮನಿಸಬೇಕು.

ಇಡೀ ಹಿಂಸಾಚಾರ ಮತ್ತು ಸರಕಾರ ಹಾಗೂ ಆಡಳಿತ ವೈಫಲ್ಯಗಳ ಬಗ್ಗೆ ಸುಪ್ರೀಕೋರ್ಟ್ ಅಥವಾ ಪಂಜಾಬ್ ಮತ್ತು ಹರ್ಯಾಣ ಹೈಕೋರ್ಟ್‌ನ ಹಾಲಿ ನ್ಯಾಯಾಧೀಶರಿಂದ ತನಿಖೆ ನಡೆಸಬೇಕೆಂಬ ಬೇಡಿಕೆಯನ್ನು ಸಿಪಿಐ (ಎಂ) ಪುನರುಚ್ಚರಿಸಿದೆ.



‘ಮಹಿಳೆ ಮತ್ತು ದೇಹ ರಾಜಕಾರಣ’ ಕುರಿತು ಚರ್ಚೆ



ಮಹಿಳೆಯ ದೇಹದ ಸುತ್ತ ಪಾವಿತ್ರತೆಯ ಕುರಿತು ಮಲಿನತೆ ಮತ್ತು ದೇಹ ಹೊತ್ತ ಕಾರಣಕ್ಕೆ ವಿಧಿಸಬಹುದಾದ ವಿಧಿ ವಿಧಾನಗಳು ಮಹಿಳೆಯ ದೇಹವನ್ನು ಒಂದು ರಾಜಕೀಯ ದಾಳವಾಗಿಸಿರುವ ಕುರುಹುಗಳು ಭಾರತದ ಸಂಸ್ಕೃತಿಯಲ್ಲಿ ಹೇರಳವಾಗಿವೆ. ಆಕೆಯನ್ನು ಅಡಿಗೆ ಮನೆಯಲ್ಲಿ ಬಂಧಿಸಿಡುವ, ಹೆರುವ ಯಂತ್ರವಾಗಿಸುವ, ಸಾಮಾಜಿಕ ಚೌಕಟ್ಟಿನೊಳಗೆ ಮಿತಿಗಳನ್ನು ಹೇರುವ ನಡಾವಳಿಗಳನ್ನು ನೋಡಬಹುದಾಗಿದೆ ಮತ್ತು ಮಹಿಳೆಯ ದೇಹವನ್ನು ಹೇಗೆ ನೋಡಿಕೊಂಡು ಬರಲಾಗುತ್ತಿದೆ ಎಂದರೆ ಹುಟ್ಟಿದಾಗ ತಂದೆ, ಮದುವೆಯ ನಂತರ ಗಂಡನ ಮನೆಯೇ ಆಕೆಗೆ ಆಸರೆ. ಯಾವಾಗಲೂ ಆಕೆಗೆ ವೈಯಕ್ತಿಕ ಅಸ್ಮಿತೆ ಇಲ್ಲ ಎಂದು ಮಹಿಳಾ ಚಿಂತಕಿ ಮತ್ತು ಉಪನ್ಯಾಸಕಿ ಪಿ.ಭಾರತೀದೇವಿ ಅಭಿಪ್ರಾಯಪಟ್ಟಿದ್ದಾರೆ ಅವರು ಹಾಸನ ನಗರದ ‘ಶ್ರಮ’ದಲ್ಲಿ ಚರ್ಚಾವೇದಿಕೆ ಹಮ್ಮಿಕೊಂಡಿದ್ದ “ಮಹಿಳೆ ಮತ್ತು ದೇಹ ರಾಜ-ಕಾರಣ” ಕುರಿತು ವಿಷಯ ಪ್ರಸ್ತಾಪಿಸಿ ಮಾತನಾಡಿದರು.

ನಮ್ಮ ಪುರಾಣ ಮಹಿಳೆಯನ್ನು ಗರ್ಭಕೋಶವನ್ನಾಗಿ ನೋಡಿ, ಆಕೆ ಸಂತಸ ನೀಡುವ ಮತ್ತು ಮಕ್ಕಳನ್ನು ಹೆರುವ ಕ್ಷೇತ್ರವಾಗಿಯಷ್ಟೆ ಅಸ್ಮಿತೆಯನ್ನು ಆಕೆಗೆ ನೀಡಿದೆ. ಹಾಗಾಗಿ ಅವಳ ದೇಹ ಒಂದು ಕ್ಷೇತ್ರವಾಗಿ ನೋಡಲಾಗಿದೆ. ಆ ಕ್ಷೇತ್ರದ ಯಜಮಾನ ಪುರುಷನಾಗಿದ್ದಾನೆ. ಅವಳ ಕೂಸಿನ ಮೇಲೆ ಆಕೆಗೆ ಅಧಿಕಾರವೇ ಇಲ್ಲ, ಹಾಗಾಗಿ ‘ಬೀಜ ಮತ್ತು ಕ್ಷೇತ್ರ’ದ ಕಲ್ಪನೆ ಪುರುಷ ಪ್ರಧಾನ ವ್ಯವಸ್ಥೆಯ ಬಹುದೊಡ್ಡ ಸಾಂಸ್ಕೃತಿಕ ರಾಜಕಾರಣವಾಗಿದೆ.

ವಚನ ಚಳುವಳಿ ಈ ನಾಡಿನ ಬಹುದೊಡ್ಡ ಸಾಂಸ್ಕೃತಿಕ ಮತ್ತು ಸಾಮಾಜಿಕ ಪರಿವರ್ತನಾ ಚಳುವಳಿಯಾಗಿದ್ದರೂ ಕೂಡ ಮಹಿಳೆಗೆ ಸ್ವತಂತ್ರ ಅಸ್ತಿತ್ವದ ಕೂಗನ್ನೇನು ಹಬ್ಬಿಸಲಿಲ್ಲ. ಇಲ್ಲಿಯೂ

ಬೊಲಿವಿಯ ಜನಮತ ಸಂಗ್ರಹದಲ್ಲಿ ಮೊರಾಲೆಸ್ ಸೋಲು

ಜಗದ ಸುತ್ತ

ಶರತ್‌ಚಂದ್ರ

ಬೊಲಿವಿಯ ಅಧ್ಯಕ್ಷ ಇವೊ ಮೊರಾಲೆಸ್ ಅವರಿಗೆ ಕಳೆದ ಸುಮಾರು 10ಕ್ಕೂ ಹೆಚ್ಚು ವರ್ಷಗಳಲ್ಲಿ ಮೊದಲ ಬಾರಿಗೆ ಜನತೆಯ ವಿಶ್ವಾಸ ಗಳಿಸಲು ಸಾಧ್ಯವಾಗಿಲ್ಲ. ಇತ್ತೀಚೆಗೆ (ಫೆಬ್ರುವರಿ 21ರಂದು) ನಡೆದ ಜನಮತ–ಸಂಗ್ರಹದಲ್ಲಿ ಅವರಿಗೆ ಸ್ವಲ್ಪದರಲ್ಲಿ ಸೋಲಾಗಿದೆ. ಇವೊ ಮೊರಾಲೆಸ್ ಮೂರನೇ ಬಾರಿ ಅಧ್ಯಕ್ಷ ಪದವಿಗೆ ಸ್ಪರ್ಧಿಸಬಹುದೇ ಎಂಬುದು ಜನಮತ–ಸಂಗ್ರಹದ ವಿಷಯವಾಗಿತ್ತು. ಈಗಿನ ಬೊಲಿವಿಯದ ಸಂವಿಧಾನ ಪ್ರಕಾರ ಅವರು ಸ್ಪರ್ಧಿಸುವಂತಿಲ್ಲ. ಬೊಲಿವಿಯದ ಪಾರ್ಲಿಮೆಂಟು ಸಂವಿಧಾನದ ಅಗತ್ಯದಂತೆ ಮೂರನೇ ಎರಡಕ್ಕೂ ಹೆಚ್ಚು ಮತದಿಂದ (113–43) ಈ ವಿಷಯವನ್ನು ಜನಮತಸಂಗ್ರಹಕ್ಕೆ ಒಡ್ಡಲು ನಿರ್ಧರಿಸಿತ್ತು. ಜನಮತಸಂಗ್ರಹದಲ್ಲಿ ಮೊರಾಲೆಸ್ ಪುನಃ ಸ್ಪರ್ಧಿಸಲು ಅನುವಾಗುವಂತೆ ಸಂವಿಧಾನ ತಿದ್ದುಪಡಿ ಮಾಡುವುದನ್ನು ಒತ್ತಾಯಿಸಿ ಶೇ. 48.71 ಅಭಿಪ್ರಾಯ ವ್ಯಕ್ತಪಡಿಸಿದರೆ, ಶೇ. 51.29 ಅದು ಬೇಡ ಅಂದಿದ್ದಾರೆ. ಕೇವಲ ಶೇ. 1.29 ಮತಗಳಿಂದ ಮೊರಾಲೆಸ್ ಸೂಚನೆಗೆ ಮನ್ನಣೆ ಸಿಕ್ಕಿಲ್ಲ. ಶೇ. 84.25 ಜನ ಮತ ಚಲಾಯಿಸಿದ್ದರು.

ಇದು ಅರ್ಜೆಂಟಿನಾ, ವೆನೆಜುವೇಲಾದಲ್ಲಿ ನವ–ಉದಾರವಾದಿ ನೀತಿಗಳನ್ನು ವಿರೋಧಿಸುವ ಎಡ–ಪ್ರಜಾಸತ್ತಾತ್ಮಕ ಪಕ್ಷ/ರಂಗಗಳಿಗೆ ಆದ ಚುನಾವಣಾ ಹಿನ್ನಡೆಯಲ್ಲಿ ಬಂದಿದ್ದು ಜಗತ್ತಿನ ಎಲ್ಲಾ ಪ್ರಗತಿಪರರರನ್ನು ಆತಂಕಿತರಾಗಿಸಿದೆ. ಈ ಜನಮತ–ಸಂಗ್ರಹದ ಫಲಿತಾಂಶವನ್ನು ಮೊರಾಲೆಸ್ ಅಥವಾ ಅವರ ಪಕ್ಷ 'ಸಮಾಜವಾದಕ್ಕಾಗಿ ಚಳುವಳಿ'ಯ ನೀತಿಗಳಿಗೆ ಉದ್ದೇಶಗಳಿಗೆ ಜನರ ತಿರಸ್ಕಾರ ಎಂದುಕೊಳ್ಳಬೇಕಾಗಿಲ್ಲ. ಅಧ್ಯಕ್ಷ ಮೊರಾಲೆಸ್ ಅವರ ಬಗ್ಗೆ ಜನತೆಯ ವಿಶ್ವಾಸ ಕಡಿಮೆಯಾಗಿದೆ ಎಂದೂ ಅಂದುಕೊಳ್ಳಬೇಕಾಗಿಲ್ಲ. ಈ ಜನಮತಸಂಗ್ರಹದಲ್ಲಿ ಮೊರಾಲೆಸ್‌ಗೆ ಅಥವಾ ಯಾವುದೇ ಅಧ್ಯಕ್ಷರಿಗೆ ಮೂರನೇ ಬಾರಿ ಸ್ಪರ್ಧಿಸಲು ಅವಕಾಶ ಇರಬೇಕೆ ಎಂಬ ಸೀಮಿತ ಪ್ರಶ್ನೆ ಮಾತ್ರ ಇದ್ದಿದ್ದು. ಅದರಲ್ಲೂ ಬಹಳ ಸ್ವಲ್ಪದರಲ್ಲಿ ಸೂಚನೆ ಸೋತಿದ್ದು ಎಂಬುದೂ ಇದನ್ನು ಸ್ಪಷ್ಟ ಪಡಿಸುತ್ತದೆ. 'ಸಮಾಜವಾದಕ್ಕಾಗಿ ಚಳುವಳಿ' ಪಕ್ಷ ಮತ್ತು ದೇಶ ಸರಿಯಾದ ನೀತಿಯ ಮತ್ತು ಅದರ ಜಾರಿಯ ಸಾತತ್ಯಕ್ಕೆ ಒಂದೇ ವ್ಯಕ್ತಿಯ ಮೇಲೆ ಅವಲಂಬಿಸಬಾರದು. ಬದಲಿ ಮತ್ತು ಎರಡನೇ ಸ್ತರದ ನಾಯಕತ್ವ ಬೆಳೆಸಬೇಕು ಎಂದು ಜನತೆ ಎಚ್ಚರಿಕೆ ಕೊಡುತ್ತಿರುವಂತಿದೆ.



ಅದು ಮಾತ್ರವಲ್ಲ, ತೈಲ ಪ್ರಾಕೃತಿಕ ಗ್ಯಾಸ್ ಬೆಲೆಗಳ ಕುಸಿತ ಬೊಲಿವಿಯದ ಆರ್ಥಿಕದ ಮೇಲೆ ಪರಿಣಾಮ ಬೀರಿದೆ. ತೈಲ, ಗ್ಯಾಸ್, ಅರಣ್ಯ ಸೇರಿದಂತೆ ಪ್ರಾಕೃತಿಕ ಸಂಪತ್ತುಗಳ ಮೇಲೆ ಆಯಾ ದೇಶದ ಮತ್ತು ಸ್ಥಳೀಯ (ಹೆಚ್ಚಾಗಿ) ಬುಡಕಟ್ಟು ಜನರ ಅಧಿಕಾರ/ಹಕ್ಕನ್ನು ಸಂವಿಧಾನದಲ್ಲಿ ಸೇರಿಸಿದ ಶ್ರೇಯಸ್ಸು ಮೊರಾಲೆಸ್ ಮತ್ತು ಅವರ ಪಕ್ಷಕ್ಕೆ ಸಲ್ಲಬೇಕು. ಆದರೆ ಬಡತನ ನಿರ್ಮೂಲನೆಗೆ ಬೇಕಾದ ಸಂಪನ್ಮೂಲ ಇತ್ಯಾದಿಗೆ ಬೇಕಾದ ಹಣವನ್ನು ತೈಲ, ಗ್ಯಾಸ್ ಗಳ ಅಂತರ್ರಾಷ್ಟ್ರೀಯ ವ್ಯಾಪಾರದಿಂದ ಗಳಿಸಬೇಕಾದ ಅನಿವಾರ್ಯ ಬೊಲಿವಿಯಕ್ಕೆ ಇದ್ದು, ಅದರ ವಿಸ್ತರಣೆ ಹಲವು ಕಡೆ ಬುಡಕಟ್ಟು ಜನರ ಹಕ್ಕುಗಳನ್ನು ಮೊಟಕುಗೊಳಿಸುವುದಕ್ಕೆ ಕಾರಣವಾಗಿದೆ.

ಪಕ್ಷದ ನಾಯಕತ್ವ ಮೊರಾಲೆಸ್ ಅವರಲ್ಲಿ ವ್ಯಕ್ತಿಗತವಾಗಿ ಕೇಂದ್ರೀಕೃತವಾಗಿದ್ದು, ಇತರ ಪರಿಣತ ನಾಯಕರ ಕೊರತೆ ಮತ್ತು ಪಕ್ಷ ಎರಡನೇ ಹಂತದ ನಾಯಕರನ್ನು ಬೆಳೆಸುವಲ್ಲಿ ಸೋತಿದ್ದು, ಇದು ಆಡಳಿತದಲ್ಲಿ ಭ್ರಷ್ಟಾಚಾರ ಸೇರಿದಂತೆ ಹಲವು ಕೊರತೆಗಳಿಗೆ ಕಾರಣವಾಗಿದೆ. ಈ ಅತೃಪ್ತಿ ಮೊರಾಲೆಸ್ ಬೆಂಬಲ ಕಡಿಮೆಯಾಗಲು ಕಾರಣವಾಗಿರಬಹುದು. ಇತ್ತೀಚೆಗೆ ನಡೆದ ಸ್ಥಳೀಯ ಚುನಾವಣೆಗಳಲ್ಲಿ ಪಕ್ಷದ ಬೆಂಬಲ ಕಡಿಮೆಯಾಗಿದ್ದು ಇದೇ ಕಾರಣಕ್ಕೆ ಇರಬಹುದು. ರಾಷ್ಟ್ರೀಯ ಚುನಾವಣೆಗಳಲ್ಲಿ ನವ–ಉದಾರವಾದದ ವಿರುದ್ಧ ರಾಜಕೀಯ ಕ್ರೋಢಿಕರಣಕ್ಕೆ ಬೆಂಬಲಿಸುವ ಇತರ ಎಡ ಶಕ್ತಿಗಳು ಮತ್ತು ಅವರ ಬೆಂಬಲಿಗರು ಜನಮತ–ಸಂಗ್ರಹದಲ್ಲಿ ಬೆಂಬಲಿಸದೆ ಹೋಗಿರುವ ಸಾಧ್ಯತೆ ಇದೆ.

ಆತಂಕಕ್ಕೆ ಕಾರಣವಾಗಿರುವುದು ನವ–ಉದಾರವಾದದ ವಿರುದ್ಧ ರಾಜಕೀಯ ಕ್ರೋಢಿಕರಣ ಮಾಡಬಲ್ಲ ರಾಜಕೀಯ ನಾಯಕ, ಮೊರಾಲೆಸ್ ಬಿಟ್ಟರೆ ಆಳುವ ಪಕ್ಷದಲ್ಲಾಗಲಿ ಇತರ ಎಡ ಪಕ್ಷ/ಚಳುವಳಿಗಳಲ್ಲಿ ಇಲ್ಲದೆ ಇರುವುದು ಆತಂಕಕ್ಕೆ ಕಾರಣವಾಗಿರುವುದು. ಮುಂದಿನ 3–4 ವರ್ಷಗಳಲ್ಲಿ ಅಂತಹ ನಾಯಕತ್ವ ಬೆಳೆಯ ಬಾರದೆಂದೇನಿಲ್ಲ. ಯಾಕೆಂದರೆ ಬೊಲಿವಿಯದ ನವ–ಉದಾರವಾದ ವಿರೋಧಿ ಸಾಮಾಜಿಕ–ರಾಜಕೀಯ ಚಳುವಳಿ ಮೊರಾಲೆಸ್ ಪಕ್ಷ 'ಸಮಾಜವಾದಕ್ಕಾಗಿ ಚಳುವಳಿ'ಕ್ಕಿಂತ ದೊಡ್ಡದಾಗಿದ್ದು ಸಾಕಷ್ಟು ಪ್ರಬಲವಾಗಿದೆ. ಆದರೆ ವೆನೆಜುವೇಲಾದಲ್ಲಿ ಚವೇಝ್ ನಂತರ ಎಡ ಶಕ್ತಿಗಳು ಪಾರ್ಲಿಮೆಂಟ್ ಚುನಾವಣೆಯಲ್ಲಿ ಪರಾಭವ ಹೊಂದಿರುವ ಹಿನ್ನೆಲೆಯಲ್ಲಿ ಈ ಆತಂಕ ಇನ್ನಷ್ಟು ಹೆಚ್ಚಾಗಿದೆ.

ಆದರೆ ಚುನಾವಣೆ ಹಿನ್ನಡೆಯನ್ನಷ್ಟೇ ರಾಜಕೀಯ ಹಿನ್ನಡೆ ಎಂದುಕೊಳ್ಳಬೇಕಾಗಿಲ್ಲ. ಎಡ–ಪ್ರಜಾಸತ್ತಾತ್ಮಕ ರಾಜಕೀಯ–ಸಾಮಾಜಿಕ ಚಳುವಳಿಗಳು ಸಕ್ರಿಯವಾಗಿದ್ದು, ಪಕ್ಷಗಳು/ಸಂಘಟನೆಗಳು ಹೊಸ ಪರಿಸ್ಥಿತಿಗೆ ಅನುಗುಣವಾಗಿ ವ್ಯೂಹ–ತಂತ್ರ ರೂಪಿಸಿದರೆ ಸಾಮ್ರಾಜ್ಯಶಾಹಿ ಮತ್ತು ಸ್ಥಳೀಯ ನವ–ಉದಾರವಾದಿ ಶಕ್ತಿಗಳ ಆಕ್ರಾಮಕ ಧೋರಣೆಯನ್ನು ಹಿಮ್ಮೆಟ್ಟಿಸುವುದು ಅಸಾಧ್ಯವೇನಲ್ಲ.

ಸಿರಿಯಾ ಅತಿಕ್ರಮಣ : ಕಮ್ಯುನಿಸ್ಟ್ ಪಕ್ಷಗಳ ಖಂಡನೆ

ಟರ್ಕಿಯ ರಾಜಧಾನಿ ಇಸ್ತಾನ್‌ಬುಲ್ ನಲ್ಲಿ ಫೆಬ್ರುವರಿ 20–21ರಂದು ಕಮ್ಯುನಿಸ್ಟ್ ಮತ್ತು ಕಾರ್ಮಿಕರ ಪಕ್ಷಗಳ ಅಂತರ್ರಾಷ್ಟ್ರೀಯ ಸಭೆಯ ಕಾರ್ಯಕಾರಿ ಗುಂಪಿನ ಸಭೆ ನಡೆಯಿತು. ಇದರಲ್ಲಿ 13 ಕಮ್ಯುನಿಸ್ಟ್ ಮತ್ತು ಕಾರ್ಮಿಕರ ಪಕ್ಷಗಳು ಭಾಗವಹಿಸಿದವು. ಇದೇ ಮೊದಲ ಬಾರಿಗೆ ವಿಯೇಟ್ನಾಂ ಕಮ್ಯುನಿಸ್ಟ್ ಪಕ್ಷ ಭಾಗವಹಿಸಿದ್ದು ಗಮನಾರ್ಹವಾಗಿತ್ತು., ಸಭೆ ಅಂತರ್ರಾಷ್ಟ್ರೀಯ ಮತ್ತು ಆಯಾ ದೇಶಗಳ ಪ್ರಮುಖ ಬೆಳವಣಿಗೆಗಳ ಬಗ್ಗೆ ಚರ್ಚಿಸಿತು.

ಸಿರಿಯಾ ಬಿಕ್ಕಟ್ಟಿನ ಬಗ್ಗೆ ಚರ್ಚಿಸಿದ ಸಭೆ ನಾಟೋ, ಸೌದಿ ಅರೇಬಿಯ ಮತ್ತು ತುರ್ಕಿಗಳು ನಡೆಸುತ್ತಿರುವ ಸಾಮ್ರಾಜ್ಯಶಾಹಿ ಅತಿಕ್ರಮಣ ಹಾಗೂ ಭಯೋತ್ಪಾದಕ ಗುಂಪುಗಳಿಗೆ ಅವು ಕೊಡುತ್ತಿರುವ ಬೆಂಬಲವನ್ನು ಖಂಡಿಸಿತು. ಇದು ಪಶ್ಚಿಮ ಏಶ್ಯಾ ಪ್ರದೇಶದ ತೈಲ ಸಂಪತ್ತಿನ ಮೇಲೆ ಹತೋಟಿ ಸಾಧಿಸುವ ಹಾಗೂ ಸಾರಿಗೆ ಮಾರ್ಗಗಳನ್ನು ನಿಯಂತ್ರಣಕ್ಕೆ ಅವು ನಡೆಸಿರುವ ಹುನ್ನಾರ. ಇದರ ಪರಿಣಾಮವಾಗಿ ಲಕ್ಷಾಂತರ ಸಿರಿಯನ್ನರು ದೇಶ ಬಿಟ್ಟು ಯುರೋಪ್ ಸೇರಿದಂತೆ ವಲಸೆ ಹೋಗುವ ಪರಿಸ್ಥಿತಿ ನಿರ್ಮಿಸಿದೆ. ನಿರಾಶ್ರಿತರಾದ ಈ ಸಿರಿಯನ್ನರು ಹಸಿವು. ಬಡತನ, ತಾರತಮ್ಯ ಮತ್ತು ಮಾನವ ಹಕ್ಕುಗಳ ಉಲ್ಲಂಘನೆ ಎದುರಿಸುತ್ತಿದ್ದು, ತೀವ್ರ ಶೋಷಣೆಗಳಿಗೆ ಒಳಗಾಗಿದ್ದಾರೆ ಎಂದು ಸಭೆಯ ಖಂಡನಾ ನಿರ್ಣಯ ಹೇಳಿದೆ.

ಕಾರ್ಯಕಾರಿ ಗುಂಪು ಸದಸ್ಯ ಪಕ್ಷಗಳು ಪ್ಯಾಲೆಸ್ತೀನ್ ಜನತೆ, ಉಕ್ರೇನಿನ ಕಮ್ಯುನಿಸ್ಟರ ಜತೆ ನಡೆಸಿದ ಸೌಹಾರ್ದ ಕಾರ್ಯಾಚರಣೆಗಳ ವಿಮರ್ಶೆ ಮಾಡಿತು. ಸಾಮ್ರಾಜ್ಯಶಾಹಿ ಶಕ್ತಿಗಳು ಮತ್ತು ಅವರ ಬಾಲಡಬಡುಕರಿಂದ ಎದುರಿಸುತ್ತಿರುವ ಹೊಸ ದಾಳಿಗಳ ವಿರುದ್ಧ ಲ್ಯಾಟಿನ್ ಅಮೆರಿಕ ಜನತೆ ನಡೆಸುತ್ತಿರುವ ದೃಢ ಹೋರಾಟಗಳಿಗೆ ಸೌಹಾರ್ದ ಬೆಂಬಲವನ್ನು ಪುನರುಚ್ಚರಿಸಿದೆ.

ಕಾರ್ಯಕಾರಿ ಗುಂಪು ಮುಂದಿನ ಅಂ–ದರೆ 18ನೇ ಕಮ್ಯುನಿಸ್ಟ್ ಮತ್ತು ಕಾರ್ಮಿಕರ ಪಕ್ಷಗಳ ಅಂತರ್ರಾಷ್ಟ್ರೀಯ ಸಭೆಯ ವಿಷಯ ಹಾಗೂ ಸ್ಥಳವನ್ನು ನಿರ್ಧರಿಸಿತು. 18ನೇ ಸಭೆ ವಿಯೇಟ್ನಾಮಿನ ರಾಜಧಾನಿ ಹನೋಯ್ ನಲ್ಲಿ ನಡೆಯಲಿದೆ. ಈ ಸಭೆ ಸಮಾಜವಾದಿ ದೇಶ ಒಂದರಲ್ಲಿ ಮೊದಲ ಬಾರಿಗೆ ನಡೆಯುವುದು ವಿಶೇಷವಾಗಿರುತ್ತದೆ. "ಶಾಂತಿ, ಕಮ್ಯುನಿಸ್ಟ್ ಮತ್ತು ಕಾರ್ಮಿಕರ ಹಕ್ಕುಗಳು ಮತ್ತು ಸಮಾಜವಾದ ಸ್ಥಾಪಿಸಲು ಹೋರಾಟದಲ್ಲಿ ಕಮ್ಯುನಿಸ್ಟ್ ಮತ್ತು ಕಾರ್ಮಿಕರ ಪಕ್ಷಗಳ ವ್ಯೂಹ ಮತ್ತು ತಂತ್ರಗಳು" ಸಭೆಯ ವಿಷಯವಾಗಿರುತ್ತದೆ. ಭಾರತದ ಸಿಪಿಐ ಮತ್ತು ಸಿಪಿಐ(ಎಂ) ಕಾರ್ಯಕಾರಿ ಗುಂಪಿನ ಸದಸ್ಯರಾಗಿದ್ದು ಅದರ ಪ್ರತಿನಿಧಿಗಳು ಸಭೆಯಲ್ಲಿ ಭಾಗವಹಿಸಿದ್ದರು.

ಕೂಡ ಹೆಣ್ಣು, ಹೊನ್ನು ಮಣ್ಣು ಒಬ್ಬ ವ್ಯಕ್ತಿ ಹೊಂದಬಹುದಾದ ವಸ್ತುವಾಗಿ ನೋಡಲಾಗಿದೆ. ಪಾವಿತ್ರ್ಯತೆಯನ್ನು ಸಾಬೀತು ಮಾಡುವ ಅನಿವಾರ್ಯತೆಗೆ ವಚನ ಚಳುವಳಿ ಒಡ್ಡಿತ್ತು ಎನ್ನುವುದು ದಾಖಲೆಗಳು ಹೇಳುತ್ತವೆ ಎಂದು ವಿವರಿಸಿದರು.

ನಮ್ಮ ಸಾಹಿತ್ಯದಲ್ಲೂ ಕೂಡ ಮಹಿಳೆ ಸೌಂದರ್ಯ ವರ್ಣನೆ, ಪಾತಿವ್ರತ್ಯ ಮತ್ತು ವ್ಯಭಿಚಾರದ ವರ್ಣನೆಗೆ ವಸ್ತುವಾಗಿ ನೋಡುವ ಪರಿಪಾಠವೆ ಅಧಿಕವಾಗಿದೆ. ಕಾವ್ಯ ಸೌಂಧರ್ಯದ ಸರಕು ಮತ್ತು ಭೋಗ ಸಂಸ್ಕೃತಿಯ ಅನಿವಾರ್ಯವಾಗಿ ವಿವರಿಸಿರುವುದು ಸಾಹಿತ್ಯ ಸಂಸ್ಕೃತಿಯ ರಾಜಕಾರಣವೆ ಎಂದ ಪ್ರಶ್ನಿಸಿದರು.

ಬಂಡವಾಳದ ಸಿದ್ಧಾಂತ ಮಹಿಳೆಯ ದೇಹವನ್ನು ಒಂದು ಸರಕನ್ನಾಗಿ ನೋಡುತ್ತದೆ. ಅದರಿಂದ ಈ ವ್ಯವಸ್ಥೆ ಲಾಭ ನಿರೀಕ್ಷಿಸುತ್ತದೆ ಹಾಗಾಗಿ ಆಕೆಯ ದೇಹದ ಅಳತೆ, ಬಣ್ಣ, ತೂಕ, ಆಕಾರಗಳಿಗೆ ಸಿದ್ಧಾಂತವನ್ನು ನಿರೂಪಿಸುತ್ತದೆ. ವಸಹಾತು ಪರಿಕಲ್ಪನೆಯಲ್ಲಿ ಬಿಕರಿಗೊಳ್ಳುವ ಸರಕನ್ನಾಗಿ ಚಿತ್ರಿಸಲಾಗುತ್ತಿದೆ ಎಂದು ಕಾರ್ಪೋರೇಟ್ ಜಗತ್ತಿನ ರಾಜಕಾರಣದ ಸ್ವರೂಪವನ್ನು ಬಿಡಿಸಿದರು.

ಚರ್ಚೆಯಲ್ಲಿ ಭಾಗವಹಿಸಿದ್ದ ಕವಯತ್ರಿ ಕಲಾವತಿ ಮಾತನಾಡಿ ಹೆಣ್ಣು ನಿರಂತರವಾಗಿ ಪುರುಷ ಪ್ರಾಧಾನ್ಯತೆಯನ್ನು ಸ್ಥಿರೀಕರಿಸುವಲ್ಲಿ ಅನಿವಾರ್ಯವಾಗಿ ಶೋಷಣೆಗಳಿಗೆ ಒಳಗಾಗಿದ್ದಾಳೆ. ಅವಳಿಗೆ ಮುಕ್ತ ಅವಕಾಶ ಕಲ್ಪಿಸುವ ಹೊಣೆಗಾರಿಕೆ ಪ್ರಜಾಪ್ರಭುತ್ವದ್ದಾಗಬೇಕಿದೆ ಎಂದರು.

ಚರ್ಚಾವೇದಿಕೆಯ ಸಂಚಾಲಕ ಅಹಮದ್ ಹಗರೆ ಪ್ರಾಸ್ತವಿಕವಾಗಿ ಮಾತನಾಡಿದರು. ಸಾಹಿತಿ ರೂಪ ಹಾಸನ, ಕಾರ್ಮಿಕ ಮುಖಂಡ ಧರ್ಮೇಶ್, ರೈತ ಮುಖಂಡ ನವೀನ್‌ಕುಮಾರ್ ಮಾತನಾಡಿದರು. ಉಪನ್ಯಾಸಕಿ ಪಿ.ರತ್ನವತಿ, ಉಪನ್ಯಾಸಕ ಸಿ.ಚ.ಯತೀಶ್ವರ್, ಮಹಿಳಾ ಕಾರ್ಯಕರ್ತೆ ವೇದಶ್ರಿರಾಜ್, ವಿಧ್ಯಾರ್ಥಿ ಮುಖಂಡ ಮಹೇಶ್, ದಲಿತ ಮುಖಂಡ ಮರಿಜೋಸೆಫ್, ಕಾರ್ಮಿಕ ಮುಖಂಡ ದೋಂಗ್ರೆ ತಮ್ಮ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು.




PEÃ½ZÀÁY

ನಾನು ದೇಶ ಇಲ್ಲದವನಾದರೂ ಪರವಾಗಿಲ್ಲ. ಆದರೆ ದನಿ ಇಲ್ಲದವನಾಗಲು ತಯಾರಿಲ್ಲ.

–ಎಡ್ವರ್ಡ್ ಸ್ನೋಡೆನ್
(ಸಿಐಎ ಹಗರಣಗಳನ್ನು ವಿಕಿಲೀಕ್ಸ್ ಮೂಲಕ ಬಯಲಿಗೆಳೆದು ರಶ್ಯದಲ್ಲಿ ವಾಸಿಸಿರುವ ಅಮೆರಿಕನ್ ಮಾನವ ಹಕ್ಕು ಹೋರಾಟಗಾರ)

JANASHAKTHI KANNADA VARA PATRIKE MAR 13, 2016 Price : Rs. 10/- RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283



ನಾಟಕ ಇಲ್ಲಿಗೆ ಮುಗಿಯಬೇಕಾಗಿತ್ತು, ಆದರೆ..

ನಿನ್ನೆಗಳನ್ನು ಇಂದಿನ ಜೊತೆ ಮುಖಾಮುಖಿಯಾಗಿಸಿ, ನಿನ್ನೆಗಳ ಹೋರಾಟವನ್ನು ಇಂದಿಗೂ ವಿಸ್ತರಿಸಿ ಅವರು ಮತ್ತೊಂದು ಮಾತಾಡುವ ಚಿತ್ರಗಳನ್ನು ಜೋಡಿಸಿಕೊಟ್ಟ ಪಯಣವನ್ನು ಕಟ್ಟಿ–ಕೊಟ್ಟಿದ್ದಾರೆ. ಅವರ ಕಲಾವಂತಿಕೆಗೆ ಶರಣು. 'ಕಾವ್ಯರಂಗ' ಮತ್ತು 'ಮೃತ್ಯುಂಜಯ' ನಾಟಕಗಳನ್ನು ನಮ್ಮೆದಿರು ತಂದು ನಿಲ್ಲಿಸಿದ ಸಮುದಾಯ ರೆಪರ್ಟರಿಗೆ ಒಂದು ಸಲಾಂ.

ಎನ್ ಸಂಧ್ಯಾರಾಣಿ

ನಾಟಕ ಎಂದರೆ ಕೇವಲ ಕಥೆಯಲ್ಲ. ಅದು ಕಥೆಯನ್ನು ಇನ್ನೊಂದು ಮಜಲಿಗೆ ಕೊಂಡೊಯ್ಯಬೇಕು. ಅದಕ್ಕೆ ನಾಟಕದ ಗತಿ, ಚಲನೆ, ನಟನೆ, ದೃಶ್ಯದಿಂದ ದೃಶ್ಯಕ್ಕೆ ಸರಾಗವಾದ ಸಂಚಾರ, ಬೆಳಕು, ಸಂಗೀತ, ರಂಗಸಜ್ಜಿಕೆ, ಅಭಿನಯ, ಪಾತ್ರಧಾರಿಗಳ ಕೋ ಆರ್ಡಿನೇಶನ್, ಅವರ ಮಾತು, ಉಸಿರು ಬಿಗಿಹಿಡಿಯುವ ಮೌನ ಮತ್ತು ನಿನ್ನೆಗಳ ಕಥೆಯನ್ನು ಇಂದಿಗೆ ಮುಖಾಮುಖಿಯಾಗಿ ನಿಲ್ಲಿಸಬಲ್ಲ ನಿರ್ದೇಶಕನ ಒಂದು ಕಣ್ಣೋಟ ಎಲ್ಲಾ ಬೇಕಾಗುತ್ತದೆ. ಇವೆಲ್ಲವೂ ಇದ್ದಾಗ ಅದು 'ಮೃತ್ಯುಂಜಯ'ದಂತಹ ಒಂದು ನಾಟಕವಾಗುತ್ತದೆ.

'ಇಂದು'ಗಳಿಗೆ ಬೆಳಕು ನೀಡುವ ಮೇರುಕೃತಿಗಳು

ನಿರಂಜನರು ನನಗೆ ಮೊದಲು ಪರಿಚಯವಾಗಿದ್ದು ಕಾಲೇಜಿನಲ್ಲಿ. ಕನ್ನಡ ಮೇಷ್ಟರು 'ಮೃತ್ಯುಂಜಯ' ಓದಿಸಿದ್ದರು, 'ಚಿರಸ್ಮರಣೆ' ಓದಿಸಿದ್ದರು. ಅದೊಂದು ಸಂಧಿಕಾಲ. 'ಮೃತ್ಯುಂಜಯ' ಇತಿಹಾಸದ ಕಥೆಯನ್ನು ಹೇಳಿತ್ತು, 'ಚಿರಸ್ಮರಣೆ' ನಿನ್ನಿನ ಕಥೆಯನ್ನು ಹೇಳಿತ್ತು, ಅದೇ ಕಾಲಕ್ಕೆ ರೈತಚಳುವಳಿ ಆ ಎಲ್ಲಾ ನಿನ್ನೆಗಳನ್ನೂ ಇಂದಿಗೆ ಪ್ರಸ್ತುತಗೊಳಿಸಿತ್ತು. ಇತಿಹಾಸ ಪುನರಾವರ್ತನಗೊಳ್ಳುತ್ತದೆ ಎನ್ನುತ್ತಾರೆ, ಅದಷ್ಟೇ ಅಲ್ಲ, ಮೇರುಕೃತಿಗಳೂ ಸಹ ಹಾಗೆ ಕಾಲದಿಂದ ಕಾಲಕ್ಕೆ ತಮ್ಮಲ್ಲಿನ ಹೊಸಮಗ್ಗುಲನ್ನು ಬದಲಾದ ಕಾಲದ ಬೆಳಕಿನಲ್ಲಿ ತೋರುತ್ತಾ ನಮ್ಮ 'ಇಂದು'ಗಳಿಗೆ ಬೆಳಕು ನೀಡುತ್ತಿರುತ್ತವೆ.

ಸಮುದಾಯ ರೆಪರ್ಟರಿಗಾಗಿ ಶ್ರೀಪಾದಭಟ್ಟರು ನಿರ್ದೇಶಿಸಿದ ನಾಟಕ 'ಮೃತ್ಯುಂಜಯ'. ಈ ಪ್ರಯೋಗದಲ್ಲಿ 'ಚಿರಸ್ಮರಣೆ' ಮತ್ತು 'ಮೃತ್ಯುಂಜಯ' ಎರಡನ್ನೂ ರಂಗಕ್ಕೆ ಅಳವಡಿಸಿಕೊಂಡಿದ್ದಾರೆ ಎಂದಾಗ ನನಗೆ ಸಹಜವಾಗಿಯೇ ಕುತೂಹಲವಾಗಿತ್ತು. ಎರಡನ್ನೂ ಅವರು ಹೇಗೆ ಸಂಯೋಜಿಸಬಹುದು ಎನ್ನುವುದು ನನಗೆ ಪ್ರಶ್ನೆಯಾಗಿತ್ತು. ಶ್ರೀಪಾದಭಟ್ಟರು ರಂಗದ ಮೇಲೆ ಒಂದು ಕಾವ್ಯ ಕಟ್ಟಿಕೊಡುತ್ತಾರೆ. ಅವರ ನಾಟಕಗಳಲ್ಲಿ ಕಥೆಯಲ್ಲಿನ ಪಾತ್ರಧಾರಿಗಳಷ್ಟೇ ಅಲ್ಲ, ಬೆಳಕು ಮತ್ತು ರಂಗಸಜ್ಜಿಕೆ ಸಹ ಪಾತ್ರಧಾರಿಗಳಾಗಿ ಕಾರ್ಯ ನಿರ್ವಹಿಸುತ್ತವೆ. ಜೊತೆಗೆ ಈ ಕುತೂಹಲವೂ ಸೇರಿಕೊಂಡಿತು. ನಿರೀಕ್ಷೆಗಳನ್ನಿಟ್ಟುಕೊಂಡೇ ನೋಡಿದ ನಾಟಕ ಅದು. ನನ್ನ ನಿರೀಕ್ಷೆಗಳು ಯಾವುವೂ ಹುಸಿಯಾಗಲಿಲ್ಲ.

ಕಯ್ಯೂರಿನ ರೈತರಿಗೆ ಈಜಿಪ್ಟಿನ ಕತೆ ಹೇಳುವ ಪಂಡಿತರು

ನಾಟಕ ಶುರುವಾಗುವುದು 'ಚಿರಸ್ಮರಣೆ'ಯ ಕಥೆ–ಯ ಮೂಲಕ. ಪಂಡಿತರು ಹಳ್ಳಿಗೆ ಬಂದು ರೈತರನ್ನು ಸಂಘಟಿಸಲು ಒಂದು ರಹಸ್ಯ ಸಭೆ ನಡೆಸುವ ಮೂಲಕ. ಅಲ್ಲಿ ಭಾಷಣ ಮಾಡುವ ಬದಲು ಪಂಡಿತರು ನಿಮ್ಮ ಕಥೆಯನ್ನೇ ಹೋಲುವ ಇನ್ನೊಂದು ಕಥೆ ಹೇಳುತ್ತೇನೆ ಎನ್ನುತ್ತಲೇ ಪಾತ್ರಧಾರಿಗಳಾಗಿದ್ದವರು ಸೂತ್ರಧಾರಿಯಾಗಿ ಬದಲಾಗುತ್ತಾರೆ. ರಂಗದ ಮೇಲೆ ಐಗುಪ್ತದ(ಈಜಿಪ್ಟಿನ) ಕಥೆ ಶುರುವಾಗುತ್ತದೆ. ವೇಷ



ಭೂಷಣಗಳನ್ನು ಹೊರತುಪಡಿಸಿದರೆ ಅವರಾಡುವ ಮಾತು ಇಂದಿನ ಮಾತು ಆಗುತ್ತದೆ, ಆ ಮಾತುಗಳನ್ನು ಆಡುವವರು ನಮ್ಮ ನಡುವಿನವರೇ ಆಗಿಬಿಡುತ್ತಾರೆ. ತೆರಿಗೆ ಹಣ ವಸೂಲಿಗೆ ಬಂದವರ ಬಳಿ ತಮ್ಮ ಕಷ್ಟಗಳನ್ನು ಹೇಳಿಕೊಳ್ಳಬೇಕು ಎಂದು ರೈತರು ನಿರ್ಧರಿಸುತ್ತಾರೆ. ತಮ್ಮ ಪ್ರತಿನಿಧಿಯಾಗಿ ಮನೋಪ್ಟಾನನ್ನು ಆಯ್ದುಕೊಳ್ಳುತ್ತಾರೆ. ಮನೋಪ್ಟ ಒಬ್ಬ ಸಮರ್ಥ ನಾಯಕ. ಆವೇಶಕ್ಕೆ ಬೀಳದೆ ತನ್ನವರ ನೋವುಗಳನ್ನು ಅಧಿಕಾರಿಗಳ ಮುಂದೆ ಹೇಳಿಕೊಳ್ಳುವ ಸಾಮರ್ಥ್ಯ ಉಳ್ಳವ. ಅವನು ಬಂದು ಕೂರುತ್ತಾನೆ. ತೆರಿಗೆ ಅಧಿಕಾರಿ ತೆರಿಗೆ ಏಕೆ ಹೆಚ್ಚು ಮಾಡಬೇಕು ಎಂದು ಹೇಳುತ್ತಾ ಹೋಗುತ್ತಾನೆ. ತೆರಿಗೆ ನಿಗದಿ ಪಡಿಸಲು, ವಸೂಲಿ ಮಾಡಲು, ಅದರ ಮೇಲ್ವಿಚಾರಣೆ ಮಾಡಲು, ಅದರ ಲೆಕ್ಕ ಇಡಲು, ಅದರ ವಿಲೇವಾರಿ ಮಾಡಲು ಹೇಗೆ ಒಂದು ದಂಡಿನ ಅಗತ್ಯವಿದೆ ಮತ್ತು ಅದೆಲ್ಲವನ್ನೂ ನಿಭಾಯಿಸಲು ರೈತರು ತೆರಿಗೆ ಹಣಕೊಡಬೇಕು ಎಂದು ಹೇಳುತ್ತಾ ಹೋಗುತ್ತಾನೆ. ವ್ಯವಸ್ಥೆಯ ಅನ್ಯಾಯ, ಕ್ರೌರ್ಯ ಇರುವುದು ಇಲ್ಲಿ. ಅವರನ್ನು ನಿಯಂತ್ರಿಸಲು ಅವರಿಂದಲೇ ಕಂದಾಯ ವಸೂಲಿ ಮಾಡುವ ಅನ್ಯಾಯದಲ್ಲಿ. ತೆರಿಗೆ ಹೆಚ್ಚುವರಿಗೆ ಭೂಮಾಲಿಕರದೇನೂ ವಿರೋಧ ಇಲ್ಲ. ಏಕೆಂದರೆ ತಾವು ಹೇಗೂ ಪೂರ್ತಿ ತೆರಿಗೆ ಕಟ್ಟುವುದಿಲ್ಲ ಎನ್ನುವುದರ ಬಗ್ಗೆ ಅವರಿಗೆ ವಿಶ್ವಾಸ ಇದೆ. ಅದೆಲ್ಲಾ ನೋಡುವಾಗ ಹತ್ತಿಪ್ಪತ್ತು ಸಾವಿರದ ಸಾಲ ತೀರಿಸಲು ನೂರಾರು ರೈತರು ಆತ್ಮಹತ್ಯೆ ಮಾಡಿಕೊಳ್ಳುವ ದಿನಮಾನದಲ್ಲಿ ಐಶಾರಾಮಿ ಜೀವನ ನಡೆಸುವ ಕೋಟ್ಯಾಧಿಪತಿಯೊಬ್ಬ ಹಕ್ಕಿನಿಂದೆಂಬಂತೆ ತನ್ನ ಕೋಟ್ಯಾಂತರ ರೂಗಳ ಸಾಲ ಮನ್ನಾ ಮಾಡಿಸಿಕೊಳ್ಳುವ ಉದಾಹರಣೆ ಎಲ್ಲೂ ವಾಚ್ಯವಾಗದೆಯೂ ನಮಗೆ ನೆನಪಾಗಿಬಿಡುತ್ತದೆ.

ಮೂರು ಶಕ್ತಿಕೇಂದ್ರಗಳಿಗೆ ದಾಳವಾದ ರೈತರು

ರೈತ ನಾಯಕನ ಸೆರೆ ಆಗುತ್ತದೆ, ರೈತರು ಬಂಡಾಯವೇಳುತ್ತಾರೆ, ರಾಜಪ್ರತಿನಿಧಿಗಳು ಓಡಿಹೋಗುತ್ತಾರೆ. ರೈತರು ತಮ್ಮ ನಾಯಕನನ್ನು ಬಿಡಿಸಿಕೊಂಡು ತಮ್ಮದೇ ಒಂದು ಸರ್ಕಾರ ರಚಿಸಿಕೊಳ್ಳುತ್ತಾರೆ. ಈ ಕಥೆ ಕಯ್ಯೂರಿನ ರೈತರಿಗೆ ಸ್ಫೂರ್ತಿ ಆಗುತ್ತದೆ. ಕಯ್ಯೂರಿನಲ್ಲಿ ಇಬ್ಬರು ಭೂಮಾಲಿಕರಿದ್ದಾರೆ. ಒಬ್ಬರಿಗೊಬ್ಬರಿಗೆ ಆಗುವುದಿಲ್ಲ, ಆದರೆ ರೈತರ ವಿಷಯಕ್ಕೆ ಬಂದರೆ ಅವರಿಬ್ಬರೂ ಒಂದೇ. ಒಬ್ಬ ಭೂಮಾಲಿಕ ಊರಿನ ರೈತರಿಗೆ ಅಕ್ಷರ ಕಲಿಸುವ ದುಸ್ಸಾಹಸ ಮಾಡಿದ ಮಾಸ್ತರನನ್ನು ವಿಚಾರಿಸಿಕೊಳ್ಳಲು ಮನೆಗೆ ಕರೆಸಿರುತ್ತಾನೆ. ಆಗ ಮನೆಯ ಕೆಲಸದವ ಬಂದು ಭೂಮಾಲಿಕ ಕರೆಸಿರುವ ಮತ್ತೊಬ್ಬ ವ್ಯಕ್ತಿ ನೋಡಲು ಬಂದಿರುವುದಾಗಿ ಹೇಳುತ್ತಾನೆ. 'ಇಂದು ಬಿಡುವಿಲ್ಲ, ನಾಳೆ ಬರಲು ಹೇಳು' ಎಂದು ಅವನು ಆಜ್ಞಾಪಿಸುತ್ತಾನೆ. 'ನಾಳೆ ಯಾವ ವೇಳೆಗೆ' ಎನ್ನುವ ಪ್ರಶ್ನೆಗೆ ಅವನು ಕೊಡುವ ಉತ್ತರ, 'ಅವನು ಯಾವ ಮಹಾರಾಜನೋ ನಾನು ಸಮಯ ಹೇಳುವುದಕ್ಕೆ, ಬೆಳಗ್ಗೆ ಬಂದು, ಇಲ್ಲಿ ಬಿದ್ದಿರಲು ಹೇಳು' .. ಇಂತಹ ಸಂಭಾಷಣೆಗಳು ನೋಡುಗರನ್ನು ನಿರ್ದೇಶಿಸದೆ, ಅವರೆದುರು ಅವನ ಕ್ರೌರ್ಯ ಹಾಗು ಅವನು ಪ್ರತಿನಿಧಿಸುವ ವ್ಯವಸ್ಥೆಯ ಮನೋಭಾವವನ್ನು ಬಿಚ್ಚಿಡುತ್ತವೆ.

ಎರಡೂ ಕತೆಗಳೂ ಜೊತೆಜೊತೆಯಲ್ಲಿಯೇ ಸಾಗುತ್ತವೆ. ಐಗುಪ್ತದಲ್ಲಿ ಒಂದು ಉತ್ಸವದಲ್ಲಿ ಭಾಗವಹಿಸಲೆಂದು ರೈತನಾಯಕ ಮತ್ತು ಅವನ ಸಂಗಡಿಗರನ್ನು ರಾಜಧಾನಿಗೆ ಆಹ್ವಾನಿಸಲಾಗುತ್ತದೆ. ರಾಜನ ಆಹ್ವಾನ, ಬಿಸಿತುಪ್ಪ, ನುಂಗುವ ಧೈರ್ಯವಿಲ್ಲ, ಉಗುಳುವ ದಾರ್ಷ್ಟ್ಯವಿಲ್ಲ. ರಾಜಧಾನಿಗೆ ಬಂದವರನ್ನು ಮಹಲೊಂದರಲ್ಲಿ ಬಂಧಿಸಲಾಗುತ್ತದೆ. ಅವರು ಬಂಧಿಯಾಗಿದ್ದಾರೆ ಎನ್ನುವುದನ್ನು ಕೇವಲ ಚಿಲಕ ಮತ್ತು ಬೀಗ ಜಡಿಯುವ ಸದ್ದಿನಿಂದ ನೋಡುಗರಿಗೆ ದಾಟಿಸುವ ರೀತಿ ಅನನ್ಯ. ಅಲ್ಲಿ ಅವರಿಗೆ ಸಿಗುವ ಹುಚ್ಚನ ಮೂಲಕ ಅವರ ಬಂಧನದ ಹಿನ್ನಲೆ ಮತ್ತು ಐಗುಪ್ತದ ರಾಜಕಾರಣ ಎರಡೂ ವಿವರಿಸಲ್ಪಡುತ್ತದೆ. ಅಲ್ಲಿ ಆಡಳಿತ ನಡೆಸುತ್ತಿರುವುದು ರಾಜನಾದರೂ ಅಧಿಕಾರದ ದಂಡ ಇರುವುದು ಮೂರು ಜನರ ಕೈಯಲ್ಲಿ. ಒಂದು ರಾಜಕಾರಣ – ರಾಜ ಅದರ ಪ್ರತಿನಿಧಿ, ಇನ್ನೊಂದು ಧರ್ಮ ಕಾರಣ – ಧರ್ಮಾಧಿಕಾರಿ ಅದರ ಮುಖವಾಣಿ, ಇವೆರಡರ ಹೊರತಾಗಿಯೂ ಮತ್ತೊಂದು ಶಕ್ತಿ ಕೇಂದ್ರವಿದೆ, ಅದು ಅಲ್ಲಿನ ಭೂಮಾಲಿಕರದ್ದು – ಹಣ ಮತ್ತು ಲಾಭ ಅಲ್ಲಿ ಆಳುತ್ತಿರುತ್ತದೆ.

ಏನೆಂದೆ ನಾನು? ಐಗುಪ್ತದ ಅಧಿಕಾರ ದಂಡ ಇರುವುದು ಎಂದು ಹೇಳಿದೆನೆ? ಐಗುಪ್ತವನ್ನು ತೆಗೆದು ಅಲ್ಲಿ ಭಾರತದ ಹೆಸರನ್ನು ನೀವು ಹಾಕಿಕೊಂಡರೂ ಯಾವ ವಿವರಗಳೂ ಬದಲಾಗುವುದಿಲ್ಲ. ಯಾವುದೇ ದೇಶವಿರಲಿ, ಯಾವುದೇ ಕಾಲವಿರಲಿ, ಅಧಿಕಾರದ ದಂಡವಿರುವುದು ರಾಜಕಾರಣಿ, ಧರ್ಮ ಮತ್ತು ವ್ಯಾಪಾರಿ/ಭೂಮಾಲಿಕರ ಕೈಯಲ್ಲಿಯೇ. ಆ ಮಟ್ಟಿಗೆ ಈ ಸತ್ಯ ದೇಶಾತೀತ ಮತ್ತು ಕಾಲಾತೀತ. ಅಲ್ಲಿ ಹೇಗೆ ಭೂಮಾಲಿಕರು ಧರ್ಮಾಧಿಕಾರಿಯನ್ನು, ಧರ್ಮಾಧಿಕಾರಿಯು ರಾಣಿಯ ಮೂಲಕ ರಾಜನನ್ನು ನಿಯಂತ್ರಿಸುತ್ತಾ ಇರುತ್ತಾರೋ ಹಾಗೆ ಕಯ್ಯೂರಿನಲ್ಲಿ ಭೂಮಾಲಿಕರು ಪೋಲೀಸ್ ಮತ್ತು ಅಧಿಕಾರಶಾಹಿಯ ಮೂಲಕ ಕಾನೂನು ವ್ಯವಸ್ಥೆಯನ್ನು ನಿಯಂತ್ರಿಸುತ್ತಾ ಇರುತ್ತಾರೆ.

ಕತೆಯನ್ನು ನಾಟಕವಾಗಿಸಿದ ಉತ್ಕಟ ದೃಶ್ಯಗಳು

ನಾಟಕದಲ್ಲಿ ಒಂದು ದೃಶ್ಯ ಬರುತ್ತದೆ. ರಾಜಧಾನಿಗೆ ಬಂದ ಮನೆಪ್ಟಾನನ್ನು ರಾಜ ಔತಣಕ್ಕೆಂದು ಅರಮನೆಗೆ ಕರೆಸಿಕೊಳ್ಳುತ್ತಾನೆ. ಗೇಬುವಿನ ಹೆಂಡತಿ ರಾಜನ



ಪ್ರೇಯಸಿ. ರಾಣಿಗೆ ಅದು ಗೊತ್ತು. ಅವಳು ಗೇಬುವಿನ ಹೆಂಡತಿಯನ್ನು ಹಂಗಿಸುತ್ತಿರುತ್ತಾಳೆ. ಅವಳು ಅದನ್ನು ವಿಧಿಯಿಲ್ಲದೆ ತಡೆದುಕೊಂಡಿರುತ್ತಾಳೆ. ಅಷ್ಟರಲ್ಲಿ ರಾಜನ ಬರುವಿನ ಘೋಷಣೆ ಆಗುತ್ತದೆ. ಆ ಕೂಡಲೇ ಆಕೆಯ ಇಡೀ ಮೈಮಾಟದಲ್ಲಿ, ಹಾವಭಾವದಲ್ಲಿ ಒಂದು ಬದಲಾವಣೆ ಕಾಣುತ್ತದೆ. ರಾಜನನ್ನು ನಾನು ಮಣಿಸಬಲ್ಲೆ ಎನ್ನುವ ಧಿಮಾಕಿದೆ ಅವಳಲ್ಲಿ, ರಾಣಿ ರಾಜನ ಮುಂದೆ ತನ್ನನ್ನು ಏನೂ ಅನ್ನಲಾರಳು ಎನ್ನುವ ಧೈರ್ಯವಿದೆ, ಇವೆಲ್ಲಕ್ಕೂ ಮೀರಿ ಅವಳು ತನ್ನ ಹೆಣ್ತನವನ್ನು ಪ್ರದರ್ಶಿಸುವ ಒನಪಿದೆ ಅಲ್ಲಿ. ಆ ದೃಶ್ಯದ ಸಂಯೋಜನೆ, ರಾಣಿ ಮತ್ತು ಅವಳ

ಪುಟ 10 ಕ್ಕೆ



'ರೆಪರ್ಟರಿಗೆ ಸಮಾರೋಪವಿಲ್ಲ'

'ರೆಪರ್ಟರಿಗೆ ಸಮಾರೋಪವಿಲ್ಲ' ಇದು ಎಂ.ಎಸ್.ಸತ್ಯು ಸಮುದಾಯ ಕರ್ನಾಟಕ ರೆಪರ್ಟರಿಯ 'ಬಿಡುಗಡೆಯ ರಂಗಸಂಚಾರ' ಸಮಾರೋಪದಲ್ಲಿ ಆಡಿದ ಮಾತುಗಳು. ಈ ವಿಶಿಷ್ಟ ಯಶಸ್ವಿ ರಂಗಸಂಚಾರದಲ್ಲಿ ಎರಡು ತಿಂಗಳುಗಳಲ್ಲಿ ಕರ್ನಾಟಕದ 25 ಸ್ಥಳಗಳನ್ನು ಮುಟ್ಟಿ ನಿರಂಜನರ 2 ಕೃತಿಗಳ ರಂಗರೂಪ 'ಮೃತ್ಯುಂಜಯ', ಸಾವಿರ ವರ್ಷದ ಕನ್ನಡ ಕಾವ್ಯದ ರಂಗರೂಪ 'ಕಾವ್ಯರಂಗ' ಮತ್ತು 'ಗೋಡೆಗೆ ಕತೆ ಹೇಳಿ' ಎಂಬ ಬೀದಿ ನಾಟಕವನ್ನು ಪ್ರದರ್ಶಿಸಿತ್ತು. ಸಮುದಾಯದ 40 ವರ್ಷಗಳ ಕನಸು ನನಸಾಗಿದೆ.

JANASHAKTHI KANNADA VARA PATRIKE: Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **NITHYANANDASWAMI** EMS Bhavana, No.37/A, 8th Cross, Mahalakshmi Layout, BANGALORE-560086 Editor : **NITHYANANDASWAMI**